ಆನಂದಗ್ರಂಥಮಾಲಾ–ಕುಸುಮ 121

ಕೃಷ್ಣಕಂಡ ಕೃಷ್ಣ

ಪ್ರವಚನಕಾರರು ಮತ್ತು ಲೇಖಕರು

ಅಧ್ಯಾತ್ಮವಿದ್ಯಾಪ್ರವೀಣ, ವೇದವಿದ್ಯಾಭೂಷಣ, ಅದ್ವೈತಜ್ಞಾನಸಿಂಧು, ವಿದ್ಯಾವಿಧಿನಿಧಿ, ವೇದಶ್ರೀ, ವೇದಾಂತವಾರಿಧಿ, ವೇದಾಂತಭಾಸ್ಕರ, ವೇದಾಂತಸರಸ್ವತಿ, ವೇದಾಂತಕೇಸರಿ, ವೇದಾಂತ ಸಾರ್ವಭೌಮ, ವೇದಾಂತಕಾಮಧೇನು, ವೇದಾಂತರಾಜಹಂಸ, ವಿವೇಕ ಭಾಸ್ಕರ, ಶಾಸ್ತ್ರನಿಧಿ, ಅದ್ವೈತವೇದಾಂತಕೇಸರಿ, ಅದ್ವೈತಜ್ಞಾನತೇಜ, ವೇದಾಂತಸಾಗರ, ವೇದಾಂತರತ್ನ, ಶಾಸ್ತ್ರವಿದ್ಯಾನಿಧಿ, ವೇದಾಂತಚಿಂತಾಮಣಿ, ಅದ್ವೈತಸಾರತಿಲಕ, ವೇದಾಂತಪ್ರಭಾಕರ, ಅದ್ವೈತ ವೇದಾಂತವಾರಿಧಿ, ಅದ್ವೈತವೇದಾಂತಚೂಡಾಮಣಿ, ಅದ್ವೈತವೇದತಿಲಕ, ಅದ್ವೈತ ವೇದಾಂತವಿಚಕ್ಷಣ, ವೇದಾಂತಸಾರತಿಲಕ, ವೇದಾಗಮವಿದ್ಯಾಸಾಗರ, ಸುವರ್ಣಕರ್ನಾಟಕ ಕನ್ನಡಿಗ, ಭುವಿ ವೇದಾಂತೈಕಶ್ರೇಷ್ಠರತ್ನ, ರಾಷ್ಟ್ರರತ್ನ, ಸುವರ್ಣಕರ್ನಾಟಕ ಸುವರ್ಣವೇದಾಂತಿ, ವೇದಾಂತರತ್ನಾಕರ, ಸ್ವರ್ಣಭೂಷಣ, ವೇದಾಂತಗಂಗಾಧರ, ಅದ್ವೈತವೇದಾಂತವಾಚಸ್ಪತಿ, ಅದ್ವೈತವೇದಾಂತಶಿಖಾಮಣಿ, ಗೋವಿಂದಲಕ್ಷ್ಮೀಪುರಸ್ಕಾರ, ಬಸವನಗುಡಿರತ್ನ, ಶ್ರೀ ಶ್ರೀ ಸದ್ಗುರುಹೃದಯಭಾಸ್ಕರ, ಅದ್ವೈತವೇದಾಂತ ಸವ್ಯಸಾಚಿ, ಸದ್ಗುರು ಸೇವಾ ಧುರೀಣ, ಪರಿಪೂರ್ಣ ಮಹನೀಯ ೨೦೧೨, ಮಂತ್ರಾಲಯದ ಶ್ರೀಶ್ರೀಸುಶಮೀಂದ್ರತೀರ್ಥಸ್ವಾಮೀಜಿ **"ರಾಷ್ಟ್ರೀಯ ಜ್ಞಾನ ಪುರಸ್ಕಾರ"**, ಅದ್ವೈತ ವೇದಾಂತ ಪ್ರತಿಭಾ ಪ್ರಕಾಶ, ಜಿಜ್ಞಾಸುಕಾಮಧೇನು, ಮುಮುಕ್ಷುಮೋಕ್ಷಧೇನು, ಉಪನಿಷದ್ ರತ್ನಾಕರ, ಶ್ರೀ ಸಿದ್ಧಾರೂಢ ಸದ್ಭಾವನಾ ಪ್ರಶಸ್ತಿ, ವೇದಾಂತ ಪ್ರವಚನ ಚತುರ, ವೇದಾಂತ ಪರುಷಮಣಿ, ಶಾಂಕರಾದ್ವೈತವೇದಾಂತಾಚಾರ್ಯ, ಅದ್ವೈತವೇದಾಂತಸಾರಥಿ, ಶ್ರೀಪ್ರಸನ್ನಗಣಪತಿ (ಬಲಮುರಿ) ಅನುಗ್ರಹ ಪ್ರಶಸ್ತಿ—೨೦೧೫, ಪ್ರಾಜ್ಞ ವೇದಾಂತ ಯೋಗ, ವೇದಾಂತ ಚಕ್ರವರ್ತಿ, ಸರ್ವಋತು ಪ್ರವಚನಕಾರ, ವೇದಾಂತವಿದ್ಯಾಕೌಸ್ತುಭ, ಅಧ್ಯಾತ್ಮಪ್ರವಚನಭೂಷಣ, "೭೦ರ ವೀರ ವೇದಾಂತಿ",ಶಾಂಕರಭಾಷ್ಯಭಾಸ್ಕರ, ವೇದ ವಾರಿಧಿ, ಬ್ರಹ್ಮವಿದ್ಯಾಪಾರಂಗತ, ಸಹೃದಯ ಅಧ್ಯಾತ್ಮಚಿಂತಕ, ವಿಪ್ರರತ್ನಶಿರೋಮಣಿ, ಅದ್ಭುತಶಾಂಕರರತ್ನ, ಸುವರ್ಣಕರ್ನಾಟಕದ ವಜ್ರವೇದಾಂತಿ, ಸುವರ್ಣಕರ್ನಾಟಕ "ರಾಜ್ಯೋತ್ಸವಪ್ರಶಸ್ತಿ"—೨೦೦೫ ಮತ್ತು "ಸುವರ್ಣಕರ್ನಾಟಕ ಸಾಹಿತ್ಯ ಪ್ರಶಸ್ತಿ" ಪುರಸ್ಕೃತ,

ಅದ್ವೈತ ವಾಚಸ್ಪತಿ, ಮಹಾಮಹೋಪಾಧ್ಯಾಯ ವೇ. ಬ್ರ. ಶ್ರೀ ವಿದ್ವಾನ್

ಡಾ॥ ಕೆ. ಜಿ. ಸುಬ್ರಾಯಶರ್ಮಾ, ಎಂ.ಎ., ಡಿ.ಲಿಟ್.

(ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳ ಅಂತೇವಾಸಿ ಸಾಕ್ಷಾತ್ ಶಿಷ್ಯರು)

ಶ್ರೀ ನಿತ್ಯಾನಂದ ಪ್ರಿಂಟರ್ಸ್

ಅಶೋಕನಗರ, ಬೆಂಗಳೂರು - 560 050

ಫೆಬ್ರುವರಿ 2020

"ಕೃಷ್ಣಕಂಡ ಕೃಷ್ಣ" – 121

"Krishnakanda Krishna" – 121

121st Flower in the '**Aananda Grantha Maalaa**' Series

by Vedanta Chakravarthi, **Mahaamahopaadhyaaya**
Vidwan **Dr. K. G. SUBRAYA SHARMA, M.A., D.Litt.**
127, "**Seetha-Preethi**", Balaji Nagar,
ICICI Bank Cross Road, Uttarahalli Main Road
P. O. Subrahmanyapura, Bengaluru - 560 061
Ph : 080-2639 6786 ; Mobile : 98862 81622
e-mail: kgssharma@gmail.com
website: kgssharma.in

Pages: 48; Price: Rs. 40/- ; ಬೆಲೆ: ರೂ. 40/-

First Edition : February 2020 ; 2000 Copies

For Copies and other Books Please Contact
Vedanta Saagara, Mahaamahopaadhyaaya, Vidwan
Dr. K. G. SUBRAYA SHARMA, M.A., D.Litt.
127, "Seetha-Preethi", Balaji Nagar,
ICICI Bank Cross Rd., Uttarahalli Main Rd.
P. O. Subrahmanyapura, Bengaluru - 560 061
Ph: 080-2639 6786 ; Mobile: 98862 81622
e-mail: kgssharma@gmail.com
website: kgssharma.in

Printed and Published by
B. N. Nataraj
Sri Nithyananda Printers
46, 4th Cross, Ashoknagar, BSK 1st Stage
Bengaluru - 560 050. ✆ 2242 6027

ನಮೋ ನಮಃ ಸದ್ಗುರುಪಾದುಕಾಭ್ಯಾಮ್

ನನ್ನ ಪ್ರೀತಿಯ ಸದ್ಗುರುಗಳಾದ **ಶ್ರೀಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಮಹಾಸ್ವಾಮಿಗಳವರ ಮಂಗಳ ಚರಣಕಮಲಂಗಳಲ್ಲಿ ನನ್ನ ಭಕ್ತಿಪೂರ್ವಕ ವಂದನೆ**ಗಳು. ಸ್ವತಃ ಶ್ರೀಕೃಷ್ಣನ ಆರಾಧಕರೂ, ಭಕ್ತರೂ ಆದ **ಶ್ರೀಶ್ರೀಗಳವರು** ನನಗೂ ಶ್ರೀಕೃಷ್ಣನ ಮಹಿಮೆಗಳನ್ನು ಹೇಳುತ್ತಿದ್ದರು. **ಭಗವದ್ಗೀತಾ ಶಾಂಕರ ಭಾಷ್ಯವನ್ನು ಪಾಠಮಾಡುವಾಗ ಶ್ರೀಕೃಷ್ಣನ ಮಾತುಗಳಿಗೆಲ್ಲ ಸ್ವಾರಸ್ಯಕರವಾಗಿ ಅರ್ಥವನ್ನೂ ಶ್ರೀಸದ್ಗುರುಗಳು ಹೇಳುತ್ತಿದ್ದರು. ಇದು ಶ್ರೀಕೃಷ್ಣನೇ ತನ್ನನ್ನು ಕುರಿತು ಹೇಳಿರುವ ಸೊಗಸಾದ ಮಾತು, ಇದನ್ನು ನೆನಪಿಟ್ಟುಕೋ ಎಂದು ಸದ್ಗುರುಗಳು ಹೇಳುತ್ತಿದ್ದರು.** ನಾನೂ ನನ್ನ ಪ್ರವಚನಗಳಲ್ಲಿ "ಇದು ಕೃಷ್ಣನ ಬಗ್ಗೆ ಕೃಷ್ಣನ ಮಾತುಗಳು" ಎಂದು ಹೇಳುತ್ತಲೇ ಇರುತ್ತೇನೆ.

ಇದೀಗ, **ಅಧ್ಯಾತ್ಮಮಂದಿರದಲ್ಲಿ** ಗೀತಾಶಾಂಕರಭಾಷ್ಯವನ್ನು ಪ್ರವಚನ ಮಾಡುತ್ತಾ ಇದ್ದೇನೆ. ಈ ಸಂದರ್ಭದಲ್ಲಂತೂ ಪ್ರತಿದಿನವೂ ಶ್ರೀಕೃಷ್ಣನನ್ನು ಸ್ಮರಿಸುತ್ತಾ ಶ್ರೀಕೃಷ್ಣನ ಸಂದೇಶಗಳನ್ನು ಉಪದೇಶಿಸುತ್ತಾ, ಶ್ರೀಕೃಷ್ಣನ ನೇರವಾದ ಮಾತುಗಳನ್ನು ಶ್ರೋತೃಗಳಿಗೆ ತಿಳಿಸುತ್ತಾ ನಾನು ಶ್ರೀಕೃಷ್ಣಮಯನೇ ಆಗಿಬಿಟ್ಟಿರು ತ್ತೇನೆ. ಹೀಗಾಗಿ ಶ್ರೋತೃಗಳ ಅಪೇಕ್ಷೆಯಂತೆ, ಸದ್ಗುರುಗಳ ಹಾಗೂ ಶ್ರೀಕೃಷ್ಣನ ಅಂತಃಪ್ರೇರಣೆಯಂತೆ ಇದೀಗ **"ಕೃಷ್ಣಕಂಡ ಕೃಷ್ಣ"** ಎಂಬೀ ಗ್ರಂಥವನ್ನು ಬರೆದಿದ್ದೇನೆ. ಇದೆಲ್ಲವೂ ಕೃಷ್ಣನ ಮಾತುಗಳು, ಹಾಗೂ ಶ್ರೀಶಂಕರರ ಅಮೃತಾಯಮಾನವಾದ ನೇರವಾದ ಭಾಷ್ಯವಾಕ್ಯಗಳೇ; ಇಲ್ಲಿ ನನ್ನದೇನೂ ಇಲ್ಲ.

ಭಗವದ್ಗೀತೆಯಲ್ಲಿ ನಾನು, ನನ್ನನ್ನು, ನನ್ನಿಂದ, ನನಗೆ, ನನ್ನ ದೆಸೆಯಿಂದ, ನನ್ನ, ನನ್ನಲ್ಲಿ—ಎಂಬ ಕೃಷ್ಣನ ಮಾತುಗಳು ನೂರಾರಿವೆ. ಆದರೆ **'ಕೃಷ್ಣಕಂಡ ಕೃಷ್ಣ'** ಎಂಬೀ ಗ್ರಂಥದಲ್ಲಿ ಅವುಗಳನ್ನೆಲ್ಲಾ ನಾನು ತೆಗೆದುಕೊಂಡಿಲ್ಲ. ನನಗೆ ಪ್ರಿಯವಾದ ಕೆಲವು ಶ್ಲೋಕಗಳನ್ನು ಮಾತ್ರ ಇಲ್ಲಿ ನಾನು ಸಂಗ್ರಹಿಸಿರುತ್ತೇನೆ. ಈ ಗ್ರಂಥವನ್ನು ಓದುವವರಿಗೆ **ಕೃಷ್ಣ ಎಂದರೆ ಸಚ್ಚಿದಾನಂದಸ್ವರೂಪನಾದ ಭಗವಂತನೇ** ಎಂಬುದು ಮನದಟ್ಟಾಗುವುದರಲ್ಲಿ ಸಂಶಯವಿಲ್ಲ. ಈ ಗ್ರಂಥವನ್ನು ನನ್ನ ಪ್ರೀತಿಯ ಕೃಷ್ಣನಿಗೇ ಸಮರ್ಪಿಸಿ ನಾನು ಧನ್ಯನಾಗುತ್ತಿದ್ದೇನೆ. ಇದನ್ನು ಪ್ರೀತಿಯಿಂದ ಮುದ್ರಿಸಿಕೊಟ್ಟಿರುವ ಪ್ರೀತಿಯ ಹಾಗೂ ಆತ್ಮೀಯ ಸನ್ಮಿತ್ರರಾದ ಶ್ರೀ ಬಿ. ಎನ್. ನಟರಾಜ್ ರವರಿಗೆ ನನ್ನ ಕೃತಜ್ಞತೆಗಳು.

ಶ್ರೀ**'ವಿಕಾರಿ'** ಸಂವತ್ಸರದ ಮಾಘ ಶುದ್ಧ ಪ್ರತಿಪತ್, 25-1-2020, ಶನಿವಾರ

ಸದ್ಗುರುಪಾದಾರಾಧಕಃ
ಕೆ. ಜಿ. ಸುಬ್ರಾಯಶರ್ಮಾ
ಉತ್ತರಹಳ್ಳಿ, ಬೆಂಗಳೂರು-61
080-2639 6786, 98862 81622

ಕೃಷ್ಣಕಂಡ ಕೃಷ್ಣ – 121

ಪ್ರಿಯ ವಾಚಕರೇ, ಸದ್ಗುರು ಅನುಗ್ರಹದಿಂದಲೂ ಮತ್ತು ತಮ್ಮಗ್ರಳ ಪ್ರೋತ್ಸಾಹದಿಂದಲೂ ನನ್ನ ವೇದಾಂತಗ್ರಂಥರಚನ ಸೇವಾಕಾರ್ಯವು ಅವ್ಯಾಹತ ವಾಗಿ ಸಂತೋಷವಾಗಿ ಇಂದಿಗೂ ಸಾಗುತ್ತಿದೆ. **ಇದು ನನ್ನ ೧೨೧ನೇ ವೇದಾಂತ ಗ್ರಂಥರತ್ನ**. ಇದಕ್ಕೆ "**ಕೃಷ್ಣಕಂಡ ಕೃಷ್ಣ**" ಎಂದು ಹೆಸರು. ಈ ಶಿರೋನಾಮವನ್ನು ನೋಡಿದವರಿಗೆ ಏನು ಇದರ ಅರ್ಥ? ಎನ್ನಿಸುತ್ತದೆ. ಅದನ್ನು ಹೇಳುತ್ತೇನೆ:

"**ಕೃಷ್ಣಕಂಡ ಕೃಷ್ಣ**" ಎಂದರೆ "**ಶ್ರೀಕೃಷ್ಣನು ಕಂಡ ಕೃಷ್ಣ**" ಎಂದರ್ಥ. ಕೃಷ್ಣನನ್ನು ಯತಿಗಳು, ಋಷಿಗಳು, ಮುನಿಗಳು, ಸಂನ್ಯಾಸಿಗಳು, ಪಂಡಿತರು, ಕವಿಗಳು, ವೇದಾಂತಿಗಳು, ಸಾಹಿತಿಗಳು, ಸಂಗೀತಗಾರರು, ದಾಸರುಗಳು, ಸಾಧುಸಂತರುಗಳು, ರಾಜಕಾರಣಿಗಳು, ಸಜ್ಜನರು, ಭಕ್ತರುಗಳು, ತಪಸ್ವಿಗಳು— ಹೀಗೆ ಅನೇಕರು ಕಂಡು, ಶ್ರೀಕೃಷ್ಣನನ್ನು ಹಾಡಿಹೊಗಳಿರುತ್ತಾರೆ. ಇದರ ಪಟ್ಟಿಯು ಬೆಳೆಯುತ್ತಲೇ ಹೋಗುತ್ತದೆ. ಸಂತೋಷ, ಇದೆಲ್ಲವೂ ಅವರವರ ವೈಯಕ್ತಿಕ ಭಾವನೆ, ಅನುಭವ, ಕಲ್ಪನಾಲಹರಿಗಳಷ್ಟೇ?

ಆದರೆ, **ಕೃಷ್ಣನೇ, ತಾನು ಯಾರು? ಎಂಬುದನ್ನು ಶ್ರೀಮದ್ಭಗವದ್ಗೀತೆ ಯಲ್ಲಿ ಸ್ವತಃ ಬಾಯಿಬಿಟ್ಟು ಹೇಳಿರುತ್ತಾನೆ**. ಅದನ್ನು ಈ ಗ್ರಂಥದಲ್ಲಿ ತಿಳಿಸಿರು ವುದರಿಂದ ಈ ಗ್ರಂಥಕ್ಕೆ ಹೆಸರಿಟ್ಟಿದೆ, "**ಕೃಷ್ಣಕಂಡ ಕೃಷ್ಣ**". ಕೃಷ್ಣನೇ ಕೃಷ್ಣನನ್ನು ಕಂಡಿರುವ ರೀತಿಯೇ "**ಕೃಷ್ಣಕಂಡ ಕೃಷ್ಣ**" ಎಂಬೀ ಕೃತಿಯು. ಇದರಿಂದ ನಮಗೆ ಶ್ರೀಕೃಷ್ಣನ ನಿಜಸ್ವರೂಪವೇನೆಂಬುದು ಚೆನ್ನಾಗಿ ತಿಳಿಯುತ್ತದೆಯಲ್ಲವೇ?

ಒಬ್ಬ ಮಹಾತ್ಮನನ್ನು, ಯತಿಯನ್ನು, ಪಂಡಿತನನ್ನು ನೂರಾರು ಜನಗಳು ಕಂಡು ಅವನನ್ನು ಹಾಡಿಹೊಗಳುವುದಕ್ಕಿಂತಲೂ, ಆ ಮಹಾತ್ಮನೇ ಅಥವಾ ಯತಿಯೇ ಬಾಯಿಬಿಟ್ಟು "**ನಾನು ಇಂಥವನು**" ಎಂದು ಹೇಳಿದರೆ, ಅದಕ್ಕೆ ನಿಜವಾದ ಬೆಲೆಯು ಬರುತ್ತದೆಯಲ್ಲವೇ? ಹಾಗೆಯೇ ಶ್ರೀಕೃಷ್ಣನನ್ನು ಇತರರು ತಾವು ಅರ್ಥಮಾಡಿಕೊಂಡು, ಇತರರಿಗೆ ತಿಳಿಸಿಕೊಡುವುದಕ್ಕಿಂತಲೂ **ಕೃಷ್ಣನೇ** ತಾನು ಯಾರು? ತನ್ನ ನಿಜಸ್ವರೂಪವೇನು? ಎಂದು ಹೇಳಿದಾಗ ಆ ಮಾತುಗಳೇ ನಮಗೆ ಪ್ರಮಾಣವಾಗುತ್ತವೆ. ಹೀಗಾಗಿ "**ಕೃಷ್ಣಕಂಡ ಕೃಷ್ಣ**" ಎಂಬೀ ಗ್ರಂಥದಲ್ಲಿ **ಕೃಷ್ಣನ ನೇರವಾದ ಮಾತುಗಳಿಂದ ಕೃಷ್ಣನನ್ನು ತಿಳಿಸಿದೆ**. ಈ ಗ್ರಂಥದಲ್ಲಿ ಅವರಿವರ ಒಗ್ಗರಣೆಯ, ಬಣ್ಣ ಬಣ್ಣದ ಮಾತುಗಳಿಗೆ ಅವಕಾಶವಿಲ್ಲ. ನಮಗೆ ಸದ್ಯಕ್ಕೆ ಇಲ್ಲಿ ಅವರಿವರ ಪಾಂಡಿತ್ಯದ ಮಾತುಗಳು ಬೇಕಾಗಿಲ್ಲ. ಈ "**ಕೃಷ್ಣಕಂಡ ಕೃಷ್ಣ**" ಗ್ರಂಥವು ನನ್ನ ಪ್ರೀತಿಯ ಕೃಷ್ಣನಿಗೇ ಸಮರ್ಪಿತವಾಗಿದೆ.

25-1-2020, ಶನಿವಾರ **ಕೆ. ಜಿ. ಸುಬ್ರಾಯಶರ್ಮಾ**

"ಕೃಷ್ಣ ಕಂಡ ಕೃಷ್ಣ" ಗ್ರಂಥದ ಅಂತರಂಗ

1. **ತದಾಽಽತ್ಮಾನಂ ಸೃಜಾಮ್ಯಹಮ್;** ಗೀತಾ ೪-೭, ೮

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।
ಅಭ್ಯುತ್ಥಾನಮಧರ್ಮಸ್ಯ ತದಾಽಽತ್ಮಾನಂ ಸೃಜಾಮ್ಯಹಮ್॥ ೪-೭

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ॥ ೪-೮

ಯಾವಯಾವಾಗ ಧರ್ಮಕ್ಕೆ ಹಾನಿಯುಂಟಾಗುತ್ತಾ, ಅಧರ್ಮವು ಜೋರಾಗುತ್ತದೆಯೋ, ಆಗಾಗ ನಾನು ನನ್ನನ್ನು ನನ್ನ ಮಾಯೆಯಿಂದ ಸೃಷ್ಟಿಸುತ್ತೇನೆ. ಸಾಧು ಸಂತರನ್ನು ಕಾಪಾಡುವುದಕ್ಕಾಗಿ, ದುಷ್ಟರನ್ನು ವಿನಾಶಮಾಡುವುದಕ್ಕಾಗಿ ಮತ್ತು ಧರ್ಮವನ್ನು ಸರಿಯಾಗಿ ಹಾಗೂ ಭದ್ರವಾಗಿ ಸ್ಥಾಪಿಸುವುದಕ್ಕಾಗಿ ನಾನೇ ಪ್ರತಿಯುಗದಲ್ಲಿಯೂ ನಾನಾ ಅವತಾರಗಳಿಂದ ಸಂಭವಿಸುತ್ತೇನೆ.

ಇಲ್ಲಿ ಕೃಷ್ಣನು **ಆತ್ಮಾನಂ ಸೃಜಾಮ್ಯಹಮ್** ಎಂದೂ **ಸಂಭವಾಮಿ** ಎಂದೂ ಹೇಳಿರುತ್ತಾನೆ. ಇವೆರಡನ್ನೂ ಮಾಡಬಲ್ಲ ಸಮರ್ಥನೆಂದರೆ ಶ್ರೀಮನ್ನಾರಾಯಣನೊಬ್ಬನೇ. ಅಂದರೆ **ಕೃಷ್ಣ ಎಂದರೆ ಸೃಷ್ಟಿಕರ್ತನಾದ ಭಗವಂತನೇ** ಎಂದು ತಿಳಿಯಬೇಕು. ಇದು **"ಕೃಷ್ಣಕಂಡ ಕೃಷ್ಣ"**.

'ಭಗವಂತ' ಎಂದರೇ ಧರ್ಮಮೂರ್ತಿ, ಧರ್ಮಸ್ವರೂಪ! ಅವನು ಮಾತ್ರವೇ ಅಧರ್ಮವನ್ನು ಸಂಪೂರ್ಣವಾಗಿ ನಾಶಮಾಡುವುದಕ್ಕೂ, ಧರ್ಮವನ್ನು ಸ್ಥಾಪಿಸುವುದಕ್ಕೂ, ಧರ್ಮವನ್ನು ಪ್ರಸಾರಮಾಡುವುದಕ್ಕೂ ಸಮರ್ಥ; ಇನ್ನಾರೂ ಅಲ್ಲ. **ಅದೂ, ಪ್ರತಿಯೊಂದು ಯುಗದಲ್ಲಿಯೂ ಇದನ್ನು ಮಾಡುತ್ತಾನೆ ಎಂದರೆ ಆ ಭಗವಂತನು ದೇಶಕಾಲಗಳನ್ನು ಮೀರಿರುವ ಬ್ರಹ್ಮಸ್ವರೂಪನೇ ಆಗಿರಬೇಕು. ಕೃಷ್ಣನೆಂದರೆ ಬರೀ ಮನುಷ್ಯಮಾತ್ರನು ಎಂದು ತಿಳಿಯುವುದು ಮೂರ್ಖತನ.** ಇದು ಅಜ್ಞಾನಿಗಳ ಕಲ್ಪನೆ, ಇದು ಸರಿಯಲ್ಲ ; ಏಕೆಂದರೆ ಸಾಮಾನ್ಯಮಾನವನಿಗೆ ಧರ್ಮಸಂಸ್ಥಾಪನೆ ಮಾಡುವುದಕ್ಕೂ ಅಧರ್ಮವನ್ನು ನಾಶಮಾಡುವುದಕ್ಕೂ ಸಾಧ್ಯವಿಲ್ಲ. ಮಾನವನು ಪ್ರಕೃತಿಗೆ ಅಧೀನನಾಗಿ, ತಾನೇ ತನ್ನ ಕರ್ಮಗಳ ಫಲಗಳನ್ನು ಅನುಭವಿಸುತ್ತಾ ಪರಾಧೀನನಾಗಿರುತ್ತಾನೆ.

ಆದರೆ ಭಗವಂತನಾದರೋ, ಪ್ರಕೃತಿಯೆಂಬ ಮಾಯೆಯನ್ನೇ ತನ್ನ ಅಧೀನ ಮಾಡಿಕೊಂಡಿರುವ ಪರಬ್ರಹ್ಮಸ್ವರೂಪಿ. ಇಂಥ ಭಗವಂತನೊಬ್ಬನಿಗೆ ಮಾತ್ರವೇ ಅವತಾರಗಳನ್ನು ಮಾಡುತ್ತಾ, ಧರ್ಮಸ್ಥಾಪನೆಯನ್ನು ಮಾಡುತ್ತಾ, ಜಗತ್ತನ್ನು ರಕ್ಷಿಸುವ ಸಾಮರ್ಥ್ಯವಿದೆ ಎಂದು ತಿಳಿಯಬೇಕು. **ಅಂಥ ಸರ್ವಶಕ್ತನಾದ ಭಗವಂತನೇ ಕೃಷ್ಣ ಎಂದು ತಿಳಿಯಬೇಕು.**

ಕೃಷ್ಣನನ್ನು ಶ್ರೀಮನ್ನಾರಾಯಣ ಎಂದು ತಿಳಿಯಬೇಕು

2. ದೈವೀ ಹ್ಯೇಷಾ ಮಮ ಮಾಯಾ; ಗೀತಾ ೭-೧೪

ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ।
ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ॥ ೭-೧೪

ತ್ರಿಗುಣಾತ್ಮಕವಾದ, ಈಶ್ವರಾಧೀನವಾದ ಪ್ರಕೃತಿಯೆಂಬ ಈ ಮಾಯೆಯು ನನಗೆ ಅಧೀನವಾಗಿರುತ್ತದೆ; ಇದನ್ನು ಸುಲಭವಾಗಿ ದಾಟಿಹೋಗುವುದಕ್ಕೆ ಯಾರಿಗೂ ಸಾಧ್ಯವಿಲ್ಲ; ಆದರೆ ಯಾರು ನನ್ನನ್ನೇ ಶರಣುಹೊಂದುತ್ತಾರೆಯೋ ಅಂಥವರು ಸುಲಭವಾಗಿ ಈ ಮಾಯೆಯನ್ನು ದಾಟಿಬಿಡುತ್ತಾರೆ!

ತ್ರಿಗುಣಾತ್ಮಕವಾದ ಪ್ರಕೃತಿಗೆ ವೇದಾಂತದಲ್ಲಿ '**ಮಾಯಾ**' ಎಂದು ಹೆಸರು. ಇದು ನನ್ನ ಅಧೀನವಾಗಿರುತ್ತದೆ. **ದೇವಸ್ಯ ಈಶ್ವರಸ್ಯ ಮಮ ವಿಷ್ಣೋಃ ಸ್ವಭೂತಾ ಮಾಯಾ** ಎಂದು ಶಾಂಕರಭಾಷ್ಯ. ಈ ಮಾಯೆಯು ಇಡೀ ಜಗತ್ತನ್ನೇ ತನ್ನ ವಶದಲ್ಲಿ ಇಟ್ಟುಕೊಂಡು, ಎಲ್ಲರನ್ನೂ ಕಟ್ಟುಹಾಕಿರುತ್ತದೆ. ಈ ಮಾಯೆಗೆ ನೂರಾರು, ಸಹಸ್ರಾರು ಮುಖಗಳಿರುತ್ತವೆ. ಅವಿದ್ಯಾಕಲ್ಪಿತವಾಗಿರುವ ಈ ಮಾಯೆಯು ನಿಜವಾಗಿ ನೋಡಿದರೆ ಬರೀ ಜೊಳ್ಳು, ಟೊಳ್ಳಾಗಿರುತ್ತದೆ. ಇದಕ್ಕೆ ಏನೂ ಶಕ್ತಿಯಿಲ್ಲ. ಆದರೆ ಇದು ಎಲ್ಲರನ್ನೂ ಭ್ರಾಂತರನ್ನಾಗಿ ಮಾಡಿರುತ್ತದೆ.

ಹೀಗಾಗಿ ಈ ಮಾಯೆಯನ್ನು ಗೆಲ್ಲುವುದು ಅಷ್ಟೊಂದು ಸುಲಭವಲ್ಲ. ಭಗವಂತನ ಭಕ್ತರಾಗದವರಿಗೆ, ಬರೀ ಅನಾತ್ಮವಿಷಯಗಳಲ್ಲಿಯೇ ಮುಳುಗಿರುವವರಿಗೆ, ವಿವೇಕವೈರಾಗ್ಯಾದಿಸಾಧನರಹಿತರಿಗೆ ಈ ಮಾಯೆಯನ್ನು ದಾಟುವುದು ತುಂಬಾ ತುಂಬಾ ಕಷ್ಟವಾಗಿರುತ್ತದೆ. **ಮಮ ಮಾಯಾ ದುರತ್ಯಯಾ**, ನನ್ನ ಅಧೀನವಾಗಿರುವ ಈ ಮಾಯಾಶಕ್ತಿಯಿಂದ ತಪ್ಪಿಸಿಕೊಳ್ಳುವುದು ಸಾಮಾನ್ಯರಿಗೆ ಸುಲಭವಲ್ಲ. ಏಕೆಂದರೆ ಅಷ್ಟೊಂದು ಜೋರಾಗಿದೆ ಈ ಮಾಯಾಪ್ರಭಾವ!

ಆದರೆ, **"ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ"**; ಯಾರು ನನ್ನ ಭಕ್ತರಾಗಿ, ನನ್ನನ್ನೇ ಶರಣುಹೊಂದುತ್ತಾರೆಯೋ, ಅಂಥವರು ಈ ಮಾಯೆಯನ್ನು ಸುಲಭವಾಗಿ ದಾಟಿಬಿಡುತ್ತಾರೆ. ಭಗವಂತನಿಗೆ ಅಧೀನವಾದ ಮಾಯೆಯು ಭಗವಂತನನ್ನು ಮೋಹಿಸಲಾರದು, ಹೀಗೆಯೇ **ಭಗವದ್ಭಕ್ತರನ್ನೂ ಈ ಅದ್ಭುತ ಪ್ರಚಂಡ ಮಾಯೆಯು ಆವರಿಸಲಾರದು.** ಸರ್ವಭೂತಮೋಹಿನಿಯಾದ ಮಾಯೆಯ ಆಟವು ಭಗವದ್ಭಕ್ತರಲ್ಲಿ ನಡೆಯುವುದಿಲ್ಲ. ನನ್ನ ಭಕ್ತರು ಸಂಸಾರಬಂಧನದಿಂದ ಸುಲಭವಾಗಿ ಮುಕ್ತರಾಗಿಬಿಡುತ್ತಾರೆ ಎಂದರ್ಥ. ಆದ್ದರಿಂದ ಮುಮುಕ್ಷುಸಾಧಕರು ನನ್ನನ್ನು ಭಜಿಸುತ್ತಾ ನನ್ನನ್ನೇ ಆಶ್ರಯಿಸಬೇಕು. ಅದರಿಂದ ಅವರು ಮಾಯೆಯನ್ನು ಗೆಲ್ಲುತ್ತಾರೆ.

ಕೃಷ್ಣನನ್ನು ಮಹಾಮಾಯಾವಿಯೆಂದು ತಿಳಿಯಬೇಕು

3. ತೇಷಾಮಹಂ ಸಮುದ್ಧರ್ತಾ; ಗೀತಾ ೧೨-೭

ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್।
ಭವಾಮಿ ನಚಿರಾತ್ ಪಾರ್ಥ ಮಯ್ಯಾವೇಶಿತಚೇತಸಾಮ್॥ ೧೨-೭

ನನ್ನಲ್ಲಿಯೇ ಸಂಪೂರ್ಣವಾಗಿ ಆವೇಶಿತ ಚಿತ್ತವನ್ನುಳ್ಳ ನನ್ನ ಭಕ್ತರನ್ನು, ಅರ್ಜುನನೇ, ನಾನು, ಮೃತ್ಯುಸಂಸಾರಸಾಗರದಿಂದ ಮೇಲಕ್ಕೆ ಶೀಘ್ರವಾಗಿ ಎತ್ತುತ್ತೇನೆ.

ಎಂಥಾ ಆಶಾದಾಯಕವಾದ ಕೃಷ್ಣನ ಮಾತುಗಳಿವು! ತತ್ತ್ವಜಿಜ್ಞಾಸುಗಳಾಗಿ ಮುಮುಕ್ಷುಗಳಾದ ಸಂನ್ಯಾಸಿಸಾಧಕರುಗಳು ಏನಾದರೂ ಮಾಡಿ ಈ ಸಂಸಾರ ಸಾಗರದಿಂದ ಮೇಲಕ್ಕೆ ಬರಬೇಕೆಂದು ತೀವ್ರಪ್ರಯತ್ನಗಳನ್ನು ಮಾಡುತ್ತಿರುವ ಧೀರರು! ಜನ್ಮಜರಾಮರಣರೂಪವಾದ ಸಂಸಾರಬಂಧನದಿಂದ ತಮ್ಮನ್ನು ತಪ್ಪಿಸಿ ಕೊಂಡು ಮೋಕ್ಷವನ್ನೇ ಹೊಂದಬೇಕೆಂದು ತವತವಿಸುತ್ತಿರುವ ಪ್ರಚಂಡ ಸಾಧಕರಿವರು! ಇವರು ಬಾಹ್ಯ ಅನಾತ್ಮವಿಷಯಭೋಗಗಳಿಂದ ಸಂಪೂರ್ಣವಾಗಿ ವಿರಕ್ತರಾಗಿ **ಮಯ್ಯಾವೇಶಿತಚಿತ್ತ**ರಾಗಿರುತ್ತಾರೆ. **ಮಯಿ ವಿಶ್ವರೂಪೇ ಆವೇಶಿತಂ ಸಮಾಹಿತಂ ಪ್ರವೇಶಿತಂ ಚೇತಃ ಚಿತ್ತಂ ಯೇಷಾಂ ತೇ ಮಯ್ಯಾವೇಶಿತಚೇತಸಃ, ತೇಷಾಂ** ಎಂದು ಶಾಂಕರಭಾಷ್ಯ. ವಿಶ್ವರೂಪಿಯಾದ ನನ್ನಲ್ಲಿಯೇ ನೆಟ್ಟಿರುವ ಚಿತ್ತವನ್ನುಳ್ಳವರೇ ಮುಮುಕ್ಷುಗಳು. ಇಲ್ಲಿಗೆ ಇವರ ಕೆಲಸ ಮುಗಿಯಿತು!

ಅರ್ಜುನನೇ, ಇನ್ನು ಮುಂದಿನ ಕೆಲಸ, ನನ್ನದು! ಅದೇನೆಂದರೆ, **ಮೃತ್ಯುಸಂಸಾರಸಾಗರಾತ್ ಅಹಂ ತೇಷಾಂ ನಚಿರಾತ್ ಸಮುದ್ಧರ್ತಾ;** ನಾನು ನನ್ನನ್ನೇ ನಂಬಿರುವಂಥ, ನನ್ನನ್ನೇ ಭಜಿಸುತ್ತಿರುವಂಥ, ನನ್ನಲ್ಲಿಯೇ ಸಂಪೂರ್ಣ ವಾಗಿ ಮನಸ್ಸನ್ನಿಟ್ಟುರುವಂಥ, ನನ್ನ ಭಕ್ತರಾದ ಈ ಮುಮುಕ್ಷುಗಳನ್ನು ಈ ಭಯಂಕರವಾದ ಮೃತ್ಯುಸಂಸಾರಸಾಗರದಿಂದ ಮೇಲಕ್ಕೆ ಬೇಗನೇ ಎತ್ತುತ್ತೇನೆ. ಇದು ನನ್ನ ಜವಾಬ್ದಾರಿ ಎಂದಿದ್ದಾನೆ ಕೃಷ್ಣ. ಭಕ್ತರು ಭಗವಂತನನ್ನೇ ಸಂಪೂರ್ಣವಾಗಿ ಭಜಿಸಬೇಕು, ಇದು ಸಾಧಕರ ಕೆಲಸ; ಅಂಥವರನ್ನು ಭಗವಂತ ನಾದ ನಾನು ಆದಷ್ಟು ಬೇಗನೇ ಸಂಸಾರಸಾಗರದಿಂದ ದಾಟಿಸಿಬಿಡುತ್ತೇನೆ.

ಇಷ್ಟು ಧೈರ್ಯವಾಗಿ ಈ ಮಾತುಗಳನ್ನು ನಮಗೆ ಹೇಳಿರುವವನು **ಕೃಷ್ಣನೇ** ಹೊರತು ಬೇರಾರೂ ಅಲ್ಲ. **ಅಂದಮೇಲೆ ಕೃಷ್ಣನೆಂದರೆ ಸಾಕ್ಷಾತ್ ಭವಸಾಗರ ತಾರಕನಾದ ಭಗವಂತನೇ ಹೊರತು ಬರೀ ಸಾಮಾನ್ಯ ಮನುಷ್ಯನಲ್ಲ ಎಂದೇ ತಿಳಿಯಬೇಕಲ್ಲವೇ?** ಇದು **''ಕೃಷ್ಣಕಂಡ ಕೃಷ್ಣ''**ನ **ಸ್ವರೂಪ!** ಆದ್ದ ರಿಂದ ಮೋಕ್ಷೇಚ್ಛುಗಳಾದ ಸಾಧಕರು ಭಗವಂತನನ್ನೇ ಭಜಿಸಬೇಕು. ಅಂಥವರು ಭಗವದನುಗ್ರಹದಿಂದ ಸುಲಭವಾಗಿ ಭವಸಾಗರವನ್ನು ದಾಟಿಬಿಡುತ್ತಾರೆ.

ಭವಸಾಗರವನ್ನು ದಾಟಿಸುವ ಅಂಬಿಗನೆಂದೇ ಕೃಷ್ಣನನ್ನು ಭಾವಿಸಬೇಕು

4. ಅವಜಾನಂತಿ ಮಾಂ ಮೂಢಾಃ; ಗೀತಾ ೯-೧೧

ಅವಜಾನಂತಿ ಮಾಂ ಮೂಢಾಃ ಮಾನುಷೀಂ ತನುಮಾಶ್ರಿತಮ್।
ಪರಂ ಭಾವಮಜಾನಂತೋ ಮಮ ಭೂತಮಹೇಶ್ವರಮ್॥ ೯-೧೧

ಅವಿವೇಕಿಗಳಾದ ಮೂಢಜನಗಳು ನನ್ನ ಪರಮ ಸ್ವರೂಪವನ್ನು, ಸರ್ವಪ್ರಾಣಿ ಮಹೇಶ್ವರನಾಗಿರುವುದನ್ನು ತಿಳಿಯಲಾರದೇ, ನನ್ನನ್ನೂ "ಕೃಷ್ಣನೆಂದರೆ ಮನುಷ್ಯನ ಶರೀರವನ್ನು ಧರಿಸಿರುವಂಥ ಒಬ್ಬ ಮಾನವನಷ್ಟೇ" ಎಂದು ತಿಳಿದು ನನ್ನನ್ನು ಅಪಮಾನ ಮಾಡುತ್ತಾರೆ, ಹೀಯಾಳಿಸುತ್ತಾರೆ, ನಿಂದಿಸುತ್ತಾರೆ ಕೂಡ.

ಇದು **'ಕೃಷ್ಣಕಂಡ ಕೃಷ್ಣನ'** ಸಂಕಟದ ಮಾತುಗಳು. ನಾನು ಪರಬ್ರಹ್ಮ ಸ್ವರೂಪನೇ ಆಗಿದ್ದರೂ ಮೂಢಜನಗಳು ನನ್ನನ್ನು ಮನುಷ್ಯನೆಂದೇ ತಿಳಿಯುತ್ತಾರಲ್ಲ, ಅಯ್ಯೋ! ಎಂಥಾ ವಿಪರ್ಯಾಸವಿದು! ಎಂದು ಕೃಷ್ಣನ ಅಳಲಿನ ಮಾತುಗಳಿವು!

ಏವಂ ಮಾಂ ನಿತ್ಯಶುದ್ಧಬುದ್ಧಮುಕ್ತಸ್ವಭಾವಂ ಸರ್ವಜಂತೂನಾಮ್ ಆತ್ಮಾನಮಪಿ ಸಂತಂ ಮೂಢಾಃ ಅವಜಾನಂತಿ ಪರಿಭವಂ ಕುರ್ವಂತಿ ಎಂದು ಶಾಂಕರಭಾಷ್ಯ. ನಾನು ನಿತ್ಯಶುದ್ಧ ನಿತ್ಯಬುದ್ಧ ನಿತ್ಯಮುಕ್ತಸ್ವರೂಪನಾಗಿ ಎಲ್ಲಾ ಪ್ರಾಣಿಗಳಿಗೂ ಆತ್ಮನಾಗಿದ್ದರೂ ನನ್ನನ್ನು ಮೂಢಜನಗಳು ಮನುಷ್ಯ ಎಂದು ತಿಳಿದು ನನ್ನನ್ನು ಅನಾದರದಿಂದ ಕಾಣುತ್ತಾರಲ್ಲ!

ಮಾನುಷೀಂ ತನುಮಾಶ್ರಿತಮ್, ಮನುಷ್ಯದೇಹವನ್ನು ಧರಿಸಿರುವ ಒಬ್ಬ ಮಾನವನು ಎಂದು ನನ್ನನ್ನು ಅವಮಾನಿಸುತ್ತಾರೆ. ಯಾರು? ಎಂದರೆ, ಮೂಢ ಜನಗಳು; ಏಕೆಂದರೆ **ಭೂತಮಹೇಶ್ವರಂ ಮಮ ಪರಂ ಭಾವಮಜಾನಂತಃ,** ಜನಗಳಿಗೆ ನನ್ನ ನಿಜಸ್ವರೂಪವು ತಿಳಿದಿರುವುದಿಲ್ಲ. ಸರಿ, ನಿನ್ನ ಪರಮಾರ್ಥ ಸ್ವರೂಪವು ಯಾವುದು? ಎಂದರೆ, **ಭೂತಮಹೇಶ್ವರಂ ಪರಂ ಭಾವಂ,** ಸಕಲ ಭೂತಗಳಿಗೂ ನಾನು ಈಶನಾಗಿದ್ದೇನೆ ಎಂಬುದನ್ನು ತಿಳಿಯದೇ ಮೂಢರು ನನ್ನನ್ನು ಮನುಷ್ಯನೆಂದೇ ಕಾಣುತ್ತಾರೆ. **ಪರಂ ಪ್ರಕೃಷ್ಟಂ ಭಾವಂ ಪರಮಾತ್ಮ ತತ್ತ್ವಂ ಆಕಾಶಕಲ್ಪಂ, ಆಕಾಶಾದಪಿ ಅಂತರತಮಮ್ ಅಜಾನಂತಃ ಮಮ ಭೂತಮಹೇಶ್ವರಂ ಸರ್ವಭೂತಾನಾಂ ಮಹಾಂತಮ್ ಈಶ್ವರಂ ಸ್ವಮಾತ್ಮಾನಮ್** ಎಂದು ಶಾಂಕರಭಾಷ್ಯ. **ನಾನು ಪರಮಾತ್ಮತತ್ತ್ವವಾಗಿದ್ದೇನೆ, ಆಕಾಶದಂತೆ ವ್ಯಾಪಕನಾಗಿದ್ದೇನೆ, ಆಕಾಶಕ್ಕಿಂತಲೂ ನಾನು ಅತ್ಯಂತ ಸೂಕ್ಷ್ಮನಾಗಿ ವ್ಯಾಪಕನೂ ಆಗಿದ್ದೇನೆ, ಸರ್ವಭೂತಗಳಿಗೂ ನಾನು ಈಶ್ವರನೂ ಪ್ರತ್ಯಗಾತ್ಮನೂ ಆಗಿದ್ದೇನೆ.** ಆದರೆ ಇದನ್ನು ತಿಳಿಯದೇ ಅಜ್ಞರು ನನ್ನನ್ನು ಮನುಷ್ಯನೆಂದೇ ಕಾಣುತ್ತಾರಲ್ಲ! ಇದೇನು ನನ್ನ ದುರ್ದೈವವೋ ನಾ ಕಾಣೆ!

ಕೃಷ್ಣನನ್ನು ಸರ್ವಭೂತಮಹೇಶ್ವರನೆಂದು ತಿಳಿಯಬೇಕು

5. ನ ಚ ಮಾಂ ಕರ್ಮಾಣಿ ನಿಬಧ್ನಂತಿ; ಗೀತಾ ೯-೯

ನ ಚ ಮಾಂ ತಾನಿ ಕರ್ಮಾಣಿ ನಿಬಧ್ನಂತಿ ಧನಂಜಯ।
ಉದಾಸೀನವದಾಸೀನಮ್ ಅಸಕ್ತಂ ತೇಷು ಕರ್ಮಸು॥ ೯-೯

ಧನಂಜಯನೇ, ಜಗತ್‌ಸೃಷ್ಟಿರೂಪವಾದ ಆ ಕರ್ಮಗಳು ನನ್ನನ್ನು ಕಟ್ಟುಹಾಕಲಾರವು. ಏಕೆಂದರೆ ನಾನು ಉದಾಸೀನನಂತೆ ಇರುತ್ತೇನೆ. ಆ ಕರ್ಮಗಳಿಗೆ ಅಂಟುಕೊಳ್ಳದೇ ನಾನು ಅಸಕ್ತನಾಗಿರುತ್ತೇನೆ.

ನನಗೆ ಯಾವ ಕರ್ಮಗಳಿಂದಲೂ ಬಂಧನವೆಂಬುದು ಇಲ್ಲ ಎಂಬುದನ್ನು ಇಲ್ಲಿ ಕೃಷ್ಣನು ಹೇಳಿದ್ದಾನೆ. **ತರ್ಹಿ ತಸ್ಯ ತೇ ಪರಮೇಶ್ವರಸ್ಯ ಭೂತಗ್ರಾಮಂ ವಿಷಮಂ ವಿದಧತಃ ತನ್ನಿಮಿತ್ತಾಭ್ಯಾಂ ಧರ್ಮಾಧರ್ಮಾಭ್ಯಾಂ ಸಂಬಂಧಃ ಸ್ಯಾತ್ ಇತಿ, ಇದಮಾಹ ಭಗವಾನ್** ಎಂದು ಶಾಂಕರಭಾಷ್ಯ. ವಿಷಮವಾದ ಈ ಪ್ರಪಂಚವನ್ನೂ ವಿಷಮವಾದ ಭೂತಗಳನ್ನೂ ಭಗವಂತನಾದ ನಾನೇ ಸೃಷ್ಟಿಸಿರುತ್ತೇನೆ ಎಂದು ಹೇಳಿದ್ದರಿಂದ ನಿನಗೆ ಧರ್ಮಾಧರ್ಮಗಳ ಸಂಬಂಧವಿದೆ ಎಂದಾಯಿತಲ್ಲ! ಎಂದರೆ, ಅದಕ್ಕೆ ನಾನಿಲ್ಲಿ, ಅರ್ಜುನನೇ, ಉತ್ತರವನ್ನು ಹೇಳುತ್ತಿದ್ದೇನೆ ಕೇಳು: **"ನ ಮಾಂ ಕರ್ಮಾಣಿ ಲಿಂಪಂತಿ", "ನ ಚ ಮಾಂ ತಾನಿ ಕರ್ಮಾಣಿ ನಿಬಧ್ನಂತಿ ಧನಂಜಯ"; ನನ್ನ ಕರ್ಮಗಳಿಂದ ನನಗೆ ಅಂಟು ಇಲ್ಲ, ನನ್ನ ಕರ್ಮಗಳು ನನ್ನನ್ನು ಬಂಧಿಸುವುದಿಲ್ಲ.**

ಇದು ಹೇಗೆ? ನೀನು ಕರ್ಮಗಳನ್ನು ಮಾಡುತ್ತಿದ್ದರೂ ಅವುಗಳು ನಿನ್ನನ್ನು ಅಂಟಿಸುವುದಿಲ್ಲ, ಬಂಧಿಸುವುದಿಲ್ಲ ಎಂಬುದು ಹೇಗೆ? ಎಂದರೆ, **ಉದಾಸೀನ ವತ್ ಆಸೀನಂ ಮಾಂ ಕರ್ಮಾಣಿ ನ ನಿಬಧ್ನಂತಿ** ಎಂಬುದೇ ಉತ್ತರ. **ಯಥಾ ಉದಾಸೀನಃ ಉಪೇಕ್ಷಕಃ ಕಶ್ಚಿತ್, ತದ್ವತ್ ಆಸೀನಂ ಮಾಮ್, ಆತ್ಮನಃ ಅವಿಕ್ರಿಯತ್ವಾತ್ ಕರ್ಮಾಣಿ ನ ನಿಬಧ್ನಂತಿ** ಎಂದು ಶಾಂಕರಭಾಷ್ಯ. ಹೇಗೆ ಅವಿಕ್ರಿಯನಾಗಿರುವ, ತಟಸ್ಥನಾಗಿರುವ ಉದಾಸೀನನನ್ನು ಎಂದರೆ ಉಪೇಕ್ಷಕ ನನ್ನು ಯಾವ ಕರ್ಮಗಳೂ ಅಂಟಲಾರವೋ ಹಾಗೆಯೇ ನಾನು ಅವಿಕ್ರಿಯನಾಗಿ **ಉದಾಸೀನನಾಗಿರುವುದರಿಂದ ನನಗೆ ಧರ್ಮಾಧರ್ಮಗಳ ಅಂಟು ಇಲ್ಲ.**

ಅರ್ಜುನನೇ, ಇದು ನನಗೆ ಮಾತ್ರವಲ್ಲ, ಮತ್ತೇನೆಂದರೆ, ಹೀಗೆ ತಿಳಿದವ ನಿಗೂ ಅವನ ಕರ್ಮಗಳು ಅವನನ್ನು ಬಂಧಿಸಲಾರವು. **ಅತಃ ಅನ್ಯಸ್ಯಾಪಿ ಕರ್ತೃತ್ವಾಭಿಮಾನಾಭಾವಃ ಫಲಾಸಂಗಾಭಾವಶ್ಚ ಅಬಂಧಕಾರಣಮ್ ಇತ್ಯಭಿಪ್ರಾಯಃ** ಎಂದು ಶಾಂಕರಭಾಷ್ಯ. ಕರ್ತೃತ್ವಾಭಿಮಾನವಾಗಲೀ ಫಲಾಸಂಗವಾಗಲೀ ಯಾರಿಗೆ ಇರುವುದಿಲ್ಲವೋ ಅಂಥ ನನ್ನ ಭಕ್ತರಾದ ಬ್ರಹ್ಮಜ್ಞಾನಿಗಳನ್ನೂ ಕರ್ಮಗಳು ಬಂಧಿಸಲಾರವು.

ಕೃಷ್ಣನನ್ನು ಧರ್ಮಾಧರ್ಮಾತೀತನೆಂದು ತಿಳಿಯಬೇಕು

6. ನಾಹಂ ಪ್ರಕಾಶಃ ಸರ್ವಸ್ಯ ; ಗೀತಾ ೭-೨೫

ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾಸಮಾವೃತಃ।
ಮೂಢೋಽಯಂ ನಾಭಿಜಾನಾತಿ ಲೋಕೋ ಮಾಮಜಮವ್ಯಯಮ್॥

೭-೨೫

ಯೋಗಮಾಯೆಯಿಂದ ಸಮಾವೃತನಾಗಿರುವುದರಿಂದ ನಾನು ಯಾರಿಗೂ ಗೋಚರನಲ್ಲ , ಹೀಗಾಗಿ ಈ ಮೂಢಜನಗಳು ನನ್ನ ಅಜ, ಅವ್ಯಯಸ್ವರೂಪವನ್ನು ತಿಳಿಯರು.

ಲೋಕದಲ್ಲಿನ ಜನಗಳಾರೂ ನನ್ನ ನಿಜಸ್ವರೂಪವನ್ನು ಅರಿಯಲಾರರು. **ನಾನು ನಿಜವಾಗಿ ಜನ್ಮಮರಣಗಳಿಲ್ಲದ, ದೇಶಕಾಲಾತೀತವಾದ, ನಾಮರೂಪ ರಹಿತವಾದ ಪರಬ್ರಹ್ಮಸ್ವರೂಪನೇ ಆಗಿದ್ದರೂ,** ಹೀಗೆಂದು ನನ್ನನ್ನು ಎಲ್ಲರೂ ತಿಳಿಯರು. ನನ್ನನ್ನು ಗಂಡೆಂದೂ, ಗೋಪಾಲನೆಂದೂ, ರಾಧಾರಮಣನೆಂದೂ, ಪಾಂಡವಮಿತ್ರನೆಂದೂ ಪರಿಚ್ಛಿನ್ನವಾಗಿ ತಿಳಿದಿರುತ್ತಾರೆಯೇ ಹೊರತು, ನನ್ನನ್ನು ಸಚ್ಚಿದಾನಂದಪರಬ್ರಹ್ಮವೆಂದು ಎಲ್ಲರೂ ತಿಳಿಯರು. ಏಕೆಂದರೆ ನನ್ನ ನಿಜಸ್ವರೂಪವು ಅವರಿಗೆ ಕಾಣಿಸುತ್ತಿಲ್ಲ. ಇದಕ್ಕೆ ಕಾರಣ, ನನ್ನ ಯೋಗಮಾಯಾ ಪ್ರಭಾವ! ನಾಮರೂಪಾತ್ಮಕವಾಗಿಯೇ ನನ್ನನ್ನು ಕಾಣುವುದಕ್ಕೆ, ನನ್ನ ನಿಜಸ್ವರೂಪವು ಕಾಣದಿರುವುದಕ್ಕೆ ಅವರಿಗೆ ನನ್ನ ಯೋಗಮಾಯೆಯೇ ಅಡ್ಡಿಯಾಗಿದೆ.

ಆದರೆ ನನ್ನ ನಿಜಭಕ್ತರಿಗೆ ಮಾತ್ರ, ನನ್ನ ನಿಜಸ್ವರೂಪದ ದರ್ಶನವಾಗುತ್ತದೆ; **ಕೇಷಾಂಚಿದೇವ ಮದ್ಭಕ್ತಾನಾಂ ಪ್ರಕಾಶಃ ಅಹಮ್ ಇತ್ಯಭಿಪ್ರಾಯಃ,** ಕೆಲವೇ ನನ್ನ ಭಕ್ತರಿಗೆ ಮಾತ್ರ ನಾನು ಪ್ರಕಾಶನಾಗಿರುತ್ತೇನೆ ಎಂದು ಶಾಂಕರಭಾಷ್ಯ. ಭಗವದ್ಭಕ್ತರನ್ನು ಭಗವಂತನ ಮಾಯೆಯು ಆವರಿಸಲಾರದು. ಏಕೆಂದರೆ ಅದು ಭಗವಂತನ ಅಧೀನವಾದ ಮಾಯೆಯಲ್ಲವೇ? ಭಗವಂತನಾದ ನನ್ನ ಭಕ್ತರನ್ನು ನನ್ನ ಮಾಯೆಯು ಏನೂ ಮಾಡಲಾರದು. ಆದರೆ ನನ್ನನ್ನು ಮಾನವರೂಪದಿಂದ ಕಾಣುವ, ಅಥವಾ ನನ್ನನ್ನು ನಿಂದಿಸುವಂಥ ಲೌಕಿಕಜನಗಳಿಗೆ ನಾನು ಎಂದೆಂದಿಗೂ ಪ್ರಕಾಶನಲ್ಲ.

ಸರಿ, ಹಾಗಾದರೆ ಭಗವಂತನ ಕೃಷ್ಣನ ನಿಜಸ್ವರೂಪವು ಯಾವುದು? ಎಂಬುದನ್ನು **ಕೃಷ್ಣನೇ ಇಲ್ಲಿ ಹೇಳಿದ್ದಾನೆ: ಮಾಮ್ ಅಜಮ್ ಅವ್ಯಯಮ್, ನಾನು ಜನ್ಮರಹಿತನಾದ್ದರಿಂದ ಅಜನೂ, ನಿರುಪಾಧಿಕನಾದ್ದರಿಂದ ಅವ್ಯಯನೂ ಆಗಿದ್ದೇನೆ.** ಬಾಹ್ಯ ಉಪಾಧಿಗಳಿಂದಲೇ ನನ್ನನ್ನು ನೋಡುವವರಿಗೆ ನಾನು ಗೋಚರನಲ್ಲ; ಆದರೆ, ನನ್ನನ್ನೇ ಆಶ್ರಯಿಸಿದವರಿಗೆ ನಾನು ಪ್ರಕಾಶನಾಗುತ್ತೇನೆ. **ಭಕ್ತರಿಗೆ ಕೃಷ್ಣನೆಂದರೆ ಸಚ್ಚಿದಾನಂದಪರಬ್ರಹ್ಮವೇ ಎಂದು ತಿಳಿಯುತ್ತದೆ**!

ಭಕ್ತರಿಗೆ ಮಾತ್ರವೇ ಭಗವಂತನ ನಿಜಸ್ವರೂಪವು ತಿಳಿಯುತ್ತದೆ

7. ಸಂಭವಾಮ್ಯಾತ್ಮಮಾಯಯಾ; ಗೀತಾ ೪-೬

ಅಜೋಽಪಿ ಸನ್ ಅವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್।
ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ॥ ೪-೬

ಅರ್ಜುನನೇ, ನಾನು ಅಜನಾಗಿದ್ದರೂ ಅವ್ಯಯಾತ್ಮನಾಗಿದ್ದರೂ, ಸಕಲ ಭೂತಗಳಿಗೂ ಈಶ್ವರನಾಗಿದ್ದರೂ ನನ್ನಧೀನವಾಗಿರುವ ಪ್ರಕೃತಿಯನ್ನು ಇಟ್ಟುಕೊಂಡು ನಾನು ಆತ್ಮ ಮಾಯೆಯಿಂದ ಹುಟ್ಟಿದವನಂತೆ ತೋರುತ್ತೇನೆ.

ಇದು ಕೃಷ್ಣನ ಮಾತು, ನೆನಪಿರಲಿ! ನಾನು ಅಜನು, ಎಂದರೆ ಜನ್ಮ ರಹಿತನು. ಜನ್ಮಮರಣಗಳಿಲ್ಲದ ಏಕೈಕತತ್ತ್ವವೆಂದರೆ ಪರಬ್ರಹ್ಮವೊಂದೇ. ನಾನು ಅವ್ಯಯಾತ್ಮನೂ ಆಗಿದ್ದೇನೆ, ಎಂದರೆ **ನನಗೆ ವಿಕಾರಗಳಾಗಲೀ ವಿನಾಶವಾಗಲೀ ಇಲ್ಲ. ನಾನು ಸಕಲ ಭೂತಗಳಿಗೂ ಕಾರಣನೂ ಈಶ್ವರನೂ ಆಗಿರುತ್ತೇನೆ. ಬ್ರಹ್ಮಾದಿಸ್ತಂಬಪರ್ಯಂತಾನಾಮ್ ಈಶ್ವರಃ ಈಶನಶೀಲಃ** ಎಂದು ಶಾಂಕರ ಭಾಷ್ಯ. ಹಿರಣ್ಯಗರ್ಭದಿಂದ ಪ್ರಾರಂಭಿಸಿ ಇರುವೆಯವರೆಗಿನ ಎಲ್ಲಾ ಭೂತ ಗಳಿಗೂ ನಾನೇ ಈಶ್ವರನಾಗಿರುತ್ತೇನೆ. ಹೀಗಿದ್ದರೂ ನಾನು ನನ್ನ ಮಾಯೆಯಿಂದ ಹುಟ್ಟುವವನಂತೆ ತೋರುತ್ತೇನೆ.

ಪ್ರಕೃತಿಂ ಸ್ವಾಮವಷ್ಟಭ್ಯ ಸಂಭವಾಮ್ಯಾತ್ಮಮಾಯಯಾ। ಇದು **'ಕೃಷ್ಣಕಂಡ ಕೃಷ್ಣ'**ನ ಧೀರವಾಣಿ. ನಾನು ನನ್ನ ಅಧೀನವಾಗಿರುವ ಮಾಯೆಯನ್ನು ಇಟ್ಟುಕೊಂಡು ಮಾಯೆಯಿಂದ ಹುಟ್ಟುವವನಂತೆ ಕಾಣುತ್ತೇನೆ. **ಸ್ವಾಂ ಮಮ ವೈಷ್ಣವೀಂ ಮಾಯಾಂ ತ್ರಿಗುಣಾತ್ಮಿಕಾಂ, ಯಸ್ಯಾಃ ವಶೇ ಸರ್ವಂ ಜಗತ್ ವರ್ತತೇ, ಯಯಾ ಮೋಹಿತಂ ಸತ್ ಸ್ವಮಾತ್ಮಾನಂ ವಾಸುದೇವಂ ನ ಜಾನಾತಿ, ತಾಂ ಪ್ರಕೃತಿಂ ಸ್ವಾಂ ಮಾಯಾಮ್ ಅಧಿಷ್ಠಾಯ ವಶೀಕೃತ್ಯ ಸಂಭವಾಮಿ, ದೇಹವಾನ್ ಇವ ಭವಾಮಿ, ಜಾತ ಇವ ಆತ್ಮಮಾಯಯಾ, ಆತ್ಮನೋ ಮಾಯಯಾ; ನ ಪರಮಾರ್ಥತೋ ಲೋಕವತ್** ಎಂದು ಶಾಂಕರಭಾಷ್ಯ.

ತ್ರಿಗುಣಾತ್ಮಕವಾದ ಪ್ರಕೃತಿಯನ್ನು ನನ್ನ ಅಧೀನದಲ್ಲಿಟ್ಟುಕೊಂಡು, ಈ ವಿಶ್ವ ವನ್ನು ನಾನು ಸೃಷ್ಟಿಮಾಡುತ್ತೇನೆ, ಮತ್ತು ನಾನೂ ಹುಟ್ಟಿದವನಂತೆ ಅಜ್ಞಾನಿಗಳಿಗೆ ಕಾಣಿಸುತ್ತೇನೆ. ಸಕಲ ಪ್ರಾಣಿಗಳೂ ಪ್ರಕೃತಿಗೆ ಅಧೀನರಾಗಿ ಹುಟ್ಟುತ್ತಾರೆ, ಆದರೆ ನಾನು ಮಾತ್ರ ಆ ಮಾಯೆಯನ್ನೇ ನನ್ನ ಅಧೀನವಾಗಿ ಇಟ್ಟುಕೊಂಡು ಹುಟ್ಟಿದವನಂತೆ ತೋರುತ್ತೇನೆ. **ನಾನು ಹುಟ್ಟಿದಂತೆ ತೋರಿದರೂ ನಿಜವಾಗಿ ನನಗೆ ಜನ್ಮವೇ ಇಲ್ಲ.** ಇದು **'ಕೃಷ್ಣಕಂಡ ಕೃಷ್ಣನ'** ನಿಜಸ್ವರೂಪ!

ಮಾಯೆಯಿಂದಲೇ 'ಕೃಷ್ಣನ ಜನ್ಮ' ಎಂದು ತಿಳಿಯಬೇಕು

8. ಜ್ಞಾನದೀಪೇನ ತಮಃ ನಾಶಯಾಮಿ; ಗೀತಾ ೧೦-೧೧

ತೇಷಾಮೇವಾನುಕಂಪಾರ್ಥಮ್ ಅಹಮಜ್ಞಾನಜಂ ತಮಃ।
ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ॥ ೧೦-೧೧

ಅರ್ಜುನನೇ, ನನ್ನ ಭಕ್ತರ ಮೇಲಿನ ಪ್ರೀತಿಯಿಂದ, ಅನುಕಂಪೆಯಿಂದ ನಾನು ಅವರ ಅಜ್ಞಾನದಿಂದ ಹುಟ್ಟಿರುವ ತಮಸ್ಸನ್ನು ನಾಶಮಾಡುತ್ತೇನೆ. ನನ್ನ ಭಕ್ತರುಗಳ ಅಂತಃಕರಣದಲ್ಲಿ ಕೂತುಕೊಂಡು, ಹೊಳೆಯುತ್ತಿರುವ ಆತ್ಮಜ್ಞಾನವೆಂಬ ದೀಪದಿಂದ ಅವರ ಕತ್ತಲೆಯನ್ನು ನಾಶಮಾಡುತ್ತೇನೆ.

ಇದೂ ಕೃಷ್ಣನ ನೇರವಾದ ಮಾತು! ಏಕೆಂದರೆ **ಅಹಂ ತಮಃ ನಾಶಯಾಮಿ;** ನಾನು ನನ್ನ ಭಕ್ತರ ಅಜ್ಞಾನಾಂಧಕಾರವನ್ನು ನಾಶಮಾಡುತ್ತೇನೆ ಎಂದು ಶ್ರೀಕೃಷ್ಣನೇ ಸ್ಪಷ್ಟವಾಗಿ ಇಲ್ಲಿ ಹೇಳಿರುತ್ತಾನೆ. **ಶ್ರೀಕೃಷ್ಣನೆಂದರೆ ಅನ್ವರ್ಥ ವೇದಾಂತ ಸದ್ಗುರು ಎಂದು ತಿಳಿಯಬೇಕು.**

'ಗು'ಕಾರಶ್ಚಾಂಧಕಾರಃ ಸ್ಯಾತ್ 'ರು'ಕಾರಸ್ತನ್ನಿರೋಧಕಃ।
ಅಂಧಕಾರನಿರೋಧಿತ್ವಾತ್ 'ಗುರು'ರಿತ್ಯಭಿಧೀಯತೇ॥

ತನ್ನ ಭಕ್ತರುಗಳ ಅಜ್ಞಾನಾಂಧಕಾರವನ್ನು ನಾಶಮಾಡುವ ಮಹಾತ್ಮನನ್ನೇ ದೊಡ್ಡವರು ಗುರು, ಸದ್ಗುರು, ಶ್ರೀಗುರು, ಜಗದ್ಗುರು ಎಂದೆಲ್ಲಾ ಕರೆಯುತ್ತಾರೆ.

ಪ್ರಕೃತ, ಈ ಮೇಲಿನ ಶ್ಲೋಕದಲ್ಲಿ ಕೃಷ್ಣನು "ನನ್ನ ಭಕ್ತರುಗಳ ಮೇಲಿನ ಅನುಕಂಪೆಯಿಂದ ನಾನು ಅವರ ಅಜ್ಞಾನಾಂಧಕಾರವನ್ನು ನಾಶಮಾಡಿ ಬಿಡುತ್ತೇನೆ" ಎಂದು ಹೇಳಿರುವುದರಿಂದ **ಶ್ರೀಕೃಷ್ಣನೆಂದರೆ ಅಜ್ಞಾನಾಂಧಕಾರವನ್ನು ದೂರಮಾಡುವ ಸದ್ಗುರು ಎಂದು ತಿಳಿಯಬೇಕು.**

ಅಜ್ಞಾನ ಎಂದರೆ ತಪ್ಪು ತಿಳಿವಳಿಕೆ, ಇದಕ್ಕೇ ದೇಹಾಧ್ಯಾಸ ಎಂದೂ **ಅನಾತ್ಮಾಧ್ಯಾಸ** ಎಂದೂ ಹೆಸರುಗಳು. ಅಜ್ಞಾನದಿಂದಲೇ ಜನ್ಮಮರಣರೂಪವಾದ ಸಂಸಾರ, ಅಜ್ಞಾನದಿಂದಲೇ ಶೋಕಮೋಹಗಳು, ಅಜ್ಞಾನವೇ ಮಾನವರಿಗೆ ಶತ್ರು, ಅಜ್ಞಾನವೇ ಮಾನವರಿಗೆ ಮೃತ್ಯು; ಇಂಥ ಅಜ್ಞಾನವು ಅನಾದಿಯಾಗಿ ಅನಂತವಾಗಿ ಸಕಲಪ್ರಾಣಿಗಳನ್ನೂ ಸಂಸಾರರೂಪದಲ್ಲಿ ಕೆಡವಿಬಿಟ್ಟಿದೆ! ಆತ್ಮಜ್ಞಾನದಿಂದ ಮಾತ್ರವೇ ಈ ಭಯಂಕರವಾದ, ಸರ್ವಾನರ್ಥಹೇತುವಾದ ಅಜ್ಞಾನವು ನಾಶವಾಗಬೇಕು. ಆತ್ಮಜ್ಞಾನವು ಉಜ್ಜ್ವಲವಾದ ದೀಪದಂತೆ. ಇದನ್ನೇ ಕೃಷ್ಣನು ಇಲ್ಲಿ **ಜ್ಞಾನದೀಪೇನ ಭಾಸ್ವತಾ** ಎಂದು ಹೇಳಿದ್ದಾನೆ. **ಭಕ್ತರ ಹೃದಯಮಂದಿರದಲ್ಲಿ ವಾಸವಾಗಿದ್ದುಕೊಂಡು ಭಗವಂತನು ಭಕ್ತರ ಅಜ್ಞಾನವನ್ನು ಆತ್ಮಜ್ಞಾನ ದೀಪದಿಂದ ನಾಶಮಾಡುವ ಸದ್ಗುರುವೆಂದೇ ಕೃಷ್ಣನನ್ನು ಭಾವಿಸಬೇಕು.**

ಕೃಷ್ಣನನ್ನು ಆತ್ಮಜ್ಞಾನದೀಪಜ್ಯೋತಿಯೆಂದು ಭಾವಿಸಬೇಕು

9. ಅಹಮಾತ್ಮಾ ಸರ್ವಭೂತಾಶಯಸ್ಥಿತಃ; ಗೀತಾ ೧೦-೨೦

ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ।
ಅಹಮಾದಿಶ್ಚ ಮಧ್ಯಂ ಚ ಭೂತಾನಾಮಂತ ಏವ ಚ॥ ೧೦-೨೦

ಎಲೈ ಗುಡಾಕೇಶನಾದ ಅರ್ಜುನನೇ, ಸಕಲಭೂತಗಳ ಹೃದಯದಲ್ಲಿ ಇರುವ ಆತ್ಮನೇ ನಾನು. ಸಕಲಭೂತಗಳಿಗೂ ನಾನೇ ಆದಿಯೂ ಸ್ಥಿತಿಯೂ ಅಂತವೂ ಆಗಿರುತ್ತೇನೆ.

ಇದು ಕೃಷ್ಣನ ನೇರವಾದ ವಾಣಿ. **'ಕೃಷ್ಣಕಂಡ ಕೃಷ್ಣ'**ನಿಗೆ ಇದು ಸುಂದರ ವಾದ ಹಾಗೂ ಸ್ಪಷ್ಟವಾದ ಮಾತು. ಅರ್ಜುನನೇ, ನೀನು ನನ್ನನ್ನು ದೇಹರೂಪ ದಿಂದ ನೋಡಿ ಮೋಸಹೋಗಬೇಡ. ನನ್ನ ನಿಜಸ್ವರೂಪವನ್ನು ಸರಿಯಾಗಿ ಯಾರೂ ತಿಳಿಯರು. ಏಕೆಂದರೆ ಅವರಿಗೆಲ್ಲ ನನ್ನ ಮಾಯೆಯು ಆವರಿಸಿದೆ. ನನ್ನನ್ನು ವಸುದೇವದೇವಕಿಯರ ಮಗನೆಂದೂ, ಕಂಸನ ಸೋದರಳಿಯನೆಂದೂ, ಯಶೋದೆಯ ಸಾಕುಮಗನೆಂದೂ, ರಾಧಾರುಕ್ಮಿಣೀ ಪತಿಯೆಂದೂ, ದ್ವಾರಕಾಧೀಶನೆಂದೂ, ಇನ್ನೂ ಮುಂತಾಗಿ ಅನೇಕರು ಅನೇಕ ಪ್ರಕಾರವಾಗಿ ತಿಳಿದುಕೊಂಡಿರುತ್ತಾರೆ. ಅರ್ಜುನನೇ, ಸೌಮ್ಯನೇ, ಮಗೂ, ಮುಮುಕ್ಷು ಸಾಧಕನೇ, ಪ್ರಾಣಸಮನಾದ ಮಿತ್ರನೇ, ಇದಾವುದೂ ನನ್ನ ನಿಜಸ್ವರೂಪವಲ್ಲ ; ಆದರೆ ಇದು ಯಾರಿಗೂ ತಿಳಿಯದು.

ಹೌದೇ, ಹಾಗಾದರೆ ಕೃಷ್ಣನೇ, ನಿನ್ನ ನಿಜಸ್ವರೂಪವನ್ನು ಬಲ್ಲವರು ಯಾರು? ಎಂದರೆ ಕೃಷ್ಣನ ಉತ್ತರ: "ನಾನು ಮಾತ್ರವೇ ನನ್ನ ನಿಜಸ್ವರೂಪವನ್ನು ಬಲ್ಲೆನು!" ಇತರರಾರಿಗೂ ತಿಳಿದಿಲ್ಲ. ಸರಿ, ಹಾಗಾದರೆ ನಿಜವಾಗಿ ನೀನು ಯಾರು? ತಿಳಿಸು ಎಂದು ಕೇಳಿದರೆ, ಶ್ರೀಕೃಷ್ಣನು ಹೇಳುತ್ತಾನೆ: **ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ. 'ಕೃಷ್ಣ' ಎಂದರೆ ಸಕಲ ಚರಾಚರ ಭೂತಗಳೊಳಗೆ, ಸ್ಥಾವರಜಂಗಮಭೂತಗಳೊಳಗೆ ಇರುವ ಪರಬ್ರಹ್ಮವಸ್ತು, ಪ್ರತ್ಯಗಾತ್ಮನೆಂದೇ ತಿಳಿಯಬೇಕು.**

ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ ಸರ್ವ ಭೂತಾಂತರಾತ್ಮಾ (೬-೧೧) ಎಂದು ಶ್ವೇತಾಶ್ವತರೋಪನಿಷತ್ತು ಯಾವ ಪರ ಬ್ರಹ್ಮತತ್ತ್ವವನ್ನು ಹೇಳುತ್ತಿದೆಯೋ ಆ ಪರಬ್ರಹ್ಮವೇ ನಾನೆಂದು ತಿಳಿಯಬೇಕು. **ಯತೋ ವಾ ಇಮಾನಿ ಭೂತಾನಿ ಜಾಯಂತೇ। ಯೇನ ಜಾತಾನಿ ಜೀವಂತಿ। ಯತ್ ಪ್ರಯಂತ್ಯಭಿಸಂವಿಶಂತಿ। ತದ್ವಿಜಿಜ್ಞಾಸಸ್ವ। ತದ್ ಬ್ರಹ್ಮೇತಿ** ಎಂದು ತೈತ್ತಿರೀಯೋಪನಿಷತ್ತಿನಲ್ಲಿ ಹೇಳಿರುವ **ಜಗತ್ಕಾರಣವಾದ ಬ್ರಹ್ಮವೇ ಕೃಷ್ಣ ಎಂದು ತಿಳಿಯಬೇಕು ಎಂದು ಕೃಷ್ಣನೇ ಇಲ್ಲಿ ಬಾಯಿಬಿಟ್ಟು ಹೇಳಿದ್ದಾನೆ.**

ಕೃಷ್ಣನನ್ನು ಸರ್ವಭೂತಾಂತರಾತ್ಮನೆಂದು ತಿಳಿಯಬೇಕು

10. ಭಜಂತೇ ಮಾಂ ದೃಢವ್ರತಾಃ ; ಗೀತಾ ೭-೨೮

ಯೇಷಾಂ ತ್ವಂತಗತಂ ಪಾಪಂ ಜನಾನಾಂ ಪುಣ್ಯಕರ್ಮಣಾಮ್।
ತ್ವೇ ದ್ವಂದ್ವಮೋಹನಿರ್ಮುಕ್ತಾಃ ಭಜಂತೇ ಮಾಂ ದೃಢವ್ರತಾಃ॥ ೭-೨೮

ಯಾವ ಪುಣ್ಯಕರ್ಮಿಗಳಿಗೆ ಪಾಪವೆಲ್ಲವೂ ನಾಶವಾಗಿದೆಯೋ, ಅಂಥ ದ್ವಂದ್ವಮೋಹ ನಿರ್ಮುಕ್ತವಾದ ಮಹಾತ್ಮರು ಮಾತ್ರ ದೃಢವ್ರತರಾಗಿ ನನ್ನನ್ನು ಭಕ್ತಿಯಿಂದ ಆರಾಧಿಸುತ್ತಾರೆ.

ಪುಣ್ಯಕರ್ಮಿಗಳಿಗೆ ಪಾಪಸಂಸ್ಕಾರಗಳೆಲ್ಲವೂ ನಾಶವಾಗಿರುತ್ತವೆ. ಏಕೆಂದರೆ ಇವರು ನನ್ನನ್ನೇ ಭಕ್ತಿಯಿಂದ ಭಜಿಸುತ್ತಿರುವ ಪುಣ್ಯಜೀವಿಗಳು. ಆದರೆ ಪಾಪ ಕರ್ಮಗಳನ್ನೇ ಮಾಡುತ್ತಾ ಪಾಪಜೀವನವನ್ನೇ ನಡೆಸುತ್ತಾ ಕೃಷ್ಣನನ್ನು ನಿಂದಿಸು ವರೇ ಪಾಪಾತ್ಮರು. ಈ ಪಾಪಸಂಸ್ಕಾರದಿಂದ ಇವರ ಅಂತಃಕರಣವು ಮಾಲಿನ್ಯ ದಿಂದ ತುಂಬಿಕೊಂಡಿರುತ್ತದೆ. ಯಾವಾಗಲೂ ಲೌಕಿಕ ವಿಷಯಗಳಲ್ಲಿಯೇ ಅಂದರೆ ವಿಷಯ ಭೋಗಗಳಲ್ಲಿಯೇ ಮುಳುಗಿರುವವರಿಗೆ ನನ್ನ ನಿಜಸ್ವರೂಪವು ಅರ್ಥವಾಗುವುದಿಲ್ಲ. ಏಕೆಂದರೆ ಅವರಿಗೆ ಅದು ಬೇಕಾಗಿಯೂ ಇರುವುದಿಲ್ಲ.

ಆದರೆ, ವಿವೇಕವೈರಾಗ್ಯಸಂಪನ್ನರಾಗಿ ಶಮ ದಮ ದಯಾ ಶ್ರದ್ಧಾದಿ ಸಾಧನಸಂಪನ್ನರಾಗಿ ಭಗವಂತನ ಚಿಂತನೆಯಿಂದ ಯಾರು ಪುಣ್ಯಜೀವಿಗಳಾಗಿ ದ್ದಾರೆಯೋ, ಅಂಥವರ ಮನಸ್ಸು ಪರಿಶುದ್ಧವೂ ಪರಿಪಕ್ವವೂ ಆಗಿರುವುದರಿಂದ ಇವರು ಪುಣ್ಯವಂತರಾಗಿ ಭಗವಂತನನ್ನೇ ಭಜಿಸುತ್ತಾರೆ. ಇವರೇ ನಿವೃತ್ತಿಧರ್ಮ ಪರಾಯಣರಾದ ಯತಿಗಳು, ಸಂನ್ಯಾಸಿಗಳು. ಇವರಲ್ಲಿ ಪಾಪಸಂಸ್ಕಾರವೇ ಇರುವುದಿಲ್ಲ. ಇಂಥವರು **ದ್ವಂದ್ವಮೋಹನಿರ್ಮುಕ್ತರಾಗಿರುತ್ತಾರೆ.**

'ದ್ವಂದ್ವ' ಎಂದರೆ ಇಚ್ಛಾ ದ್ವೇಷಗಳು, ರಾಗ ದ್ವೇಷಗಳು, ಇಷ್ಟ ಅನಿಷ್ಟಗಳು, ಬೇಕು ಬೇಡಗಳು; ಈ ದ್ವಂದ್ವದಿಂದಲೇ ಮಾನವರಿಗೆ ಮೋಹಗಳು ಹುಟ್ಟುತ್ತವೆ. ಸರ್ವಭೂತಗಳನ್ನೂ ದ್ವಂದ್ವಮೋಹಗಳು ಆವರಿಸಿರುವುದರಿಂದ ಎಲ್ಲರಿಗೂ ಕೃಷ್ಣನ ಸ್ವರೂಪವು ತಿಳಿಯುತ್ತಿಲ್ಲ. ಆದರೆ ಕೃಷ್ಣನ ಭಕ್ತರಿಗೆ ಈ ದ್ವಂದ್ವಮೋಹಗಳ ಕಾಟವೆಂಬುದು ಇರುವುದಿಲ್ಲ. ಇಂಥವರು ನನ್ನನ್ನು ಪ್ರೇಮದಿಂದ ಭಜಿಸುತ್ತಾರೆ. ಇಂಥ ನನ್ನ ಭಕ್ತರಿಗೆ ನನ್ನ ನಿಜಸ್ವರೂಪವು ತಿಳಿದು, ಅವರು ಕೃತಾರ್ಥರಾಗಿ ಬಿಡುತ್ತಾರೆ. **'ಕೃಷ್ಣ' ಎಂದರೆ ಪರಬ್ರಹ್ಮಸ್ವರೂಪವೇ** ಎಂದು ಇವರು ದೃಢವಾಗಿ ತಿಳಿದುಕೊಂಡು ಕೃಷ್ಣನನ್ನು ಪ್ರತ್ಯಗಾತ್ಮನೆಂದೇ ಆರಾಧಿಸುತ್ತಾರೆ. ಇವರೇ ಧನ್ಯಾತ್ಮರೂ ಹೌದು! ಆದ್ದರಿಂದ ಮುಮುಕ್ಷುಸಾಧಕರು ಪಾಪಕರ್ಮಗಳನ್ನು ಬಿಟ್ಟು ಪುಣ್ಯಕರ್ಮಾನುಷ್ಠಾನತತ್ಪರರಾಗಿ ನನ್ನನ್ನೇ ಭಜಿಸಬೇಕು.

ಪುಣ್ಯವಂತರಾಗಿ ಕೃಷ್ಣನನ್ನು ಭಜಿಸಬೇಕು

11. ಮಾಮುಪೇತ್ಯ ಪುನರ್ಜನ್ಮ ನ ವಿದ್ಯತೇ; ಗೀತಾ ೮-೧೬

ಆ ಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ।
ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ॥ ೮-೧೬

ಬ್ರಹ್ಮಲೋಕದ ವರೆಗಿನ ಎಲ್ಲಾ ಲೋಕಗಳಿಗೂ ಪುನರಾವರ್ತನವೆಂಬುದು ಇದೆ. ಆದರೆ, ಕೌಂತೇಯನೇ, ನನ್ನನ್ನು ಹೊಂದಿದರೆ ಮಾತ್ರ ಪುನರ್ಜನ್ಮವು ಇರುವುದಿಲ್ಲ.

ಇಂದ್ರಲೋಕ, ಆದಿತ್ಯಲೋಕ, ಚಂದ್ರಲೋಕ, ವೈಕುಂಠಲೋಕ, ಕೈಲಾಸ ಲೋಕ; ಅಷ್ಟೇ ಏಕೆ? ಬ್ರಹ್ಮಲೋಕ; ಯಾವ ಲೋಕಕ್ಕೆ ಹೋದರೂ ಉಪಾಸಕರುಗಳು ಆ ಲೋಕಗಳಿಂದ ಆಯಾ ಕರ್ಮಫಲಗಳು ಮುಗಿದಕೂಡಲೇ ವಾಪಸ್ಸಾಗಲೇಬೇಕು. ಇಲ್ಲಿಂದ ಅಲ್ಲಿಗೆ ಹೋದವರು ಅಲ್ಲಿಂದ ಇಲ್ಲಿಗೆ ತಿರುಗಿ ಬರಲೇಬೇಕಲ್ಲವೇ? ಹೀಗಾಗಿ ಬ್ರಹ್ಮಲೋಕದ ವರೆಗೆ, ಬ್ರಹ್ಮಲೋಕವನ್ನೂ ಸೇರಿಸಿಕೊಂಡು, ಎಲ್ಲಾ ಲೋಕಗಳೂ ಪುನರಾವರ್ತನಶೀಲವೇ ಆಗಿರುತ್ತವೆ. ಅಂದರೆ ಬ್ರಹ್ಮಲೋಕಕ್ಕೆ ಹೋದವರಿಗೂ ಪುನರ್ಜನ್ಮ ಗ್ಯಾರಂಟಿ. ಏಕೆಂದರೆ **ಸಂಯೋಗಾ ವಿಪ್ರಯೋಗಾಂತಾಃ** ಎಂಬ ನ್ಯಾಯವೇ ಇದೆಯಲ್ಲವೇ? ಸಾಮಾನ್ಯ ಲೌಕಿಕಜನಗಳ ದೃಷ್ಟಿಯಿಂದ ಮಂತ್ರಿಪದವಿ, ರಾಜ್ಯಪದವಿ ಎಂದರೆ ತುಂಬಾ ದೊಡ್ಡದಾಗಿ ತೋರಿದರೂ ಅದೂ ಅನಿತ್ಯವಲ್ಲವೇ? ಹೀಗೆಯೇ ಬ್ರಹ್ಮಲೋಕವೂ ಅನಿತ್ಯವೆಂದೇ ತಿಳಿಯಬೇಕು.

ಆದರೆ, ಅರ್ಜುನನೇ, **ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ**, ನನ್ನನ್ನು ಬಂದು ಸೇರಿಕೊಂಡವರಿಗೆ ಮಾತ್ರ ಪುನರ್ಜನ್ಮವು ಇರುವುದಿಲ್ಲ. **ನನ್ನನ್ನು ಎಂದರೆ ದ್ವಾರಕೆಯಲ್ಲಿ ವಾಸವಾಗಿರುವ ಕೃಷ್ಣನನ್ನು ಎಂದರ್ಥವಲ್ಲ, ಬೃಂದಾವನದಲ್ಲಿ ಸಂಚರಿಸುತ್ತಿರುವ ನನ್ನನ್ನು ಎಂದರ್ಥವಲ್ಲ, ಮತ್ತೇನೆಂದರೆ ಅಜ, ಅಜರ, ಅಮರ, ಅಮೃತ, ಅಭಯ, ನಿರಂಜನ, ಅದ್ವಯ, ಅವ್ಯಯಸ್ವರೂಪನೂ ಮೋಕ್ಷಸ್ವರೂಪನೂ ಆದ ಭಗವಂತನಾದ ನನ್ನನ್ನು ಎಂದರ್ಥ. ಜನ್ಮಮರಣರಹಿತನೂ ಸಚ್ಚಿದಾನಂದಸ್ವರೂಪನೂ ಆದ ನನ್ನನ್ನು ಹೊಂದಿದವರಿಗೆ ಪುನರ್ಜನ್ಮವಿಲ್ಲ ಎಂದು ಅಭಿಪ್ರಾಯ.**

'ನನ್ನನ್ನು ಹೊಂದಿದವರಿಗೆ ಪುನರ್ಜನ್ಮವಿಲ್ಲ' ಎಂದು ಕೃಷ್ಣನು ಇಲ್ಲಿ ಹೇಳಿರುವುದರಿಂದ **ಪುನರ್ಜನ್ಮರಹಿತವಾದ ಮೋಕ್ಷಸ್ವರೂಪನೇ ಶ್ರೀಕೃಷ್ಣ** ಎಂದಾಯಿತಲ್ಲವೇ? ಇದು ಯಾರೋ ಪಂಡಿತರ, ಕವಿಗಳ ಮಾತಲ್ಲ; ಮತ್ತೇನೆಂದರೆ ಸಾಕ್ಷಾತ್ ಕೃಷ್ಣನ ಮಾತಿದು. ಇದು **'ಕೃಷ್ಣಕಂಡ ಕೃಷ್ಣ'**ನ ನಿಜಸ್ವರೂಪವೆಂದು ತಿಳಿಯಬೇಕು. ಕೃಷ್ಣನನ್ನು ಸೇರಿದವರಿಗೆ ಪುನಃ ಶರೀರಗ್ರಹಣವಾಗಲೀ ಜನ್ಮವಾಗಲೀ ಸಾಧ್ಯವಿಲ್ಲ ಎಂದು ಆಶಯವು.

ಕೃಷ್ಣನೆಂದರೆ ಮೋಕ್ಷಸ್ವರೂಪನೆಂದೇ ತಿಳಿಯಬೇಕು

12. ದದಾಮಿ ಬುದ್ಧಿಯೋಗಂ; ಗೀತಾ ೧೦-೧೦

ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್।
ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾಂತಿ ತೇ॥

೧೦-೧೦

ನನ್ನನ್ನೇ ಪ್ರೀತಿಯಿಂದ ಸತತವಾಗಿ ಭಜಿಸುವಂಥ ನನ್ನ ಭಕ್ತರುಗಳಿಗೆ ನಾನೇ ಬುದ್ಧಿಯೋಗವನ್ನು ಅಂದರೆ ಸಮ್ಯಗ್ದರ್ಶನವನ್ನು ಕೊಡುತ್ತೇನೆ. ಆದರಿಂದ ಅವರು ನನ್ನನ್ನೇ ಬಂದು ಸೇರಿಕೊಂಡುಬಿಡುತ್ತಾರೆ.

ಭಗವಂತನನ್ನೇ ಪ್ರೀತಿಯಿಂದ ಭಜಿಸುವವರೇ ಭಕ್ತರೆನಿಸುತ್ತಾರೆ. ಇವರಿಗೇ **'ಸತತಯುಕ್ತರಾದ ಭಕ್ತರು'** ಎಂದು ಹೆಸರು. **ಸತತಯುಕ್ತಾನಾಂ ನಿತ್ಯಾಭಿಯುಕ್ತಾನಾಂ ನಿವೃತ್ತಸರ್ವಬಾಹ್ಯೈಷಣಾನಾಂ ಭಜತಾಂ ಸೇವಮಾನಾನಾಮ್; ಕಿಮ್ ಅರ್ಥತ್ವಾದಿನಾ ಕಾರಣೇನ? ನ, ಇತ್ಯಾಹ, ಪ್ರೀತಿಪೂರ್ವಕಮ್।** ಎಂದು ಶಾಂಕರಭಾಷ್ಯ. ಸತತಯುಕ್ತರಾದ ಎಂದರೆ ನಿತ್ಯವೂ ಅಭಿಯುಕ್ತರಾದ ಭಕ್ತರಿಗೆ, ಎಂದರೆ ಬಾಹ್ಯ ಏಷಣೆಗಳಿಂದ ನಿವೃತ್ತರಾದ ಯತಿಗಳಿಗೆ, ನನ್ನ ಭಕ್ತರಿಗೆ, ನನ್ನನ್ನೇ ಪ್ರೀತಿಸುತ್ತಿರುವಂಥ ನನ್ನ ಭಕ್ತರಿಗೆ; ಸಕಾಮರಾಗಿ, ಅರ್ಥಿತ್ವಾದಿಗಳಿಂದ ನನ್ನನ್ನು ಭಜಿಸದವರಿವರು. ಮತ್ತೇನೆಂದರೆ ಕೇವಲ ಭಕ್ತಿಯಿಂದ, ಶುದ್ಧ ಪ್ರೀತಿಯಿಂದ ನನ್ನನ್ನು ಭಜಿಸುವಂಥ ನನ್ನ ಪ್ರಿಯಭಕ್ತರಿಗೆ, ಅರ್ಜುನನೇ, ನಾನು ಆತ್ಮಜ್ಞಾನವನ್ನೇ ಕೊಡುತ್ತೇನೆ. **ಇದಿಷ್ಟೂ ಕೃಷ್ಣನ ಮಾತುಗಳು.**

ನಿಜವಾದ ಮುಮುಕ್ಷುಸಾಧಕರಿಗೆ, ನಿಜವಾದ ಭಗವದ್ಭಕ್ತರಿಗೆ, ನಿವೃತ್ತಿಧರ್ಮಪರಾಯಣರಾದ, ಏಷಣಾತ್ರಯಗಳಿಂದ ದೂರರಾದ, ನಿಜವಾದ ತತ್ತ್ವಜಿಜ್ಞಾಸುಗಳಿಗೆ ಆತ್ಮಜ್ಞಾನವನ್ನು ಭಗವಂತನೇ ಉಪದೇಶಿಸುತ್ತಾನೆ ಎಂದರೆ **ಕೃಷ್ಣನು ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಸದ್ಗುರು ಎಂದು ತಿಳಿಯಬೇಕು.** ತತ್ತ್ವವನ್ನೇ ತಿಳಿದುಕೊಂಡು ಈ ಸಂಸಾರಚಕ್ರದಿಂದ ತಮ್ಮನ್ನು ತಪ್ಪಿಸಿಕೊಳ್ಳಬೇಕೆಂದು ಬಯಸುವ ಉತ್ತಮ ಸಾಧಕರುಗಳು ಕೃಷ್ಣನನ್ನೇ ಭಗವಂತ ಎಂದು ಉಪಾಸನೆಮಾಡಬೇಕು. ಈ ಭಕ್ತರಿಗೆ ಹಣ, ಕೀರ್ತಿ, ಅಧಿಕಾರ, ಆಯುಷ್ಯ, ಆರೋಗ್ಯ, ಐಶ್ವರ್ಯಾದಿ ಅನಿತ್ಯವಸ್ತುಗಳಾವುವೂ ಬೇಡ. ಇವರಿಗೆ ಬೇಕಾದದ್ದು ಆತ್ಮಜ್ಞಾನ, ಮೋಕ್ಷಸಾಮ್ರಾಜ್ಯ! ಇದನ್ನು ಬ್ರಹ್ಮನಿಷ್ಠನಾದ ಸದ್ಗುರು ಮಾತ್ರ ಅಧಿಕಾರಿಗೆ ಕೊಡಬಲ್ಲನೇ ಹೊರತು ಒಣ ಪಂಡಿತರಲ್ಲ.

ಆದ್ದರಿಂದ ನೆನಪಿರಲಿ, **ಕೃಷ್ಣ ಎಂದರೆ ಬ್ರಹ್ಮನಿಷ್ಠನಾದ ಬ್ರಹ್ಮವಿದನಾದ ಸದ್ಗುರುವೇ** ಎಂಬುದು. ಇದು **"ಕೃಷ್ಣಕಂಡ ಕೃಷ್ಣ"**ನಲ್ಲವೇ?

ಕೃಷ್ಣನನ್ನು ಆತ್ಮಜ್ಞಾನೋಪದೇಶಕ ಸದ್ಗುರು ಎಂದು ತಿಳಿಯಬೇಕು

13. **ಅಹಂ ಜಗತಃ ಪ್ರಭವಃ;** ಗೀತಾ ೭-೬

ಏತದ್ಯೋನೀನಿ ಭೂತಾನಿ ಸರ್ವಾಣೀತ್ಯುಪಧಾರಯ ।
ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ ॥ ೭-೬

ಎಲ್ಲಾ ಭೂತಗಳಿಗೂ ನನ್ನ ಪರಾಪರಪ್ರಕೃತಿಗಳೇ ಕಾರಣವಾಗಿರುತ್ತವೆ ಎಂದು ತಿಳಿ. ಹೀಗಾಗಿ ನಾನೇ ಸಮಸ್ತ ಜಗತ್ತಿಗೂ ಕಾರಣನೂ ಪ್ರಲಯವೂ ಆಗಿರುತ್ತೇನೆ.

'ಕೃಷ್ಣ' ಎಂದರೆ ಸಮಸ್ತಜಗತ್ತಿಗೂ ಉಪಾದಾನ ಹಾಗೂ ನಿಮಿತ್ತಕಾರಣನೆಂದು ತಿಳಿಯಬೇಕು. **"ಯತೋ ವಾ ಇಮಾನಿ ಭೂತಾನಿ ಜಾಯಂತೇ... ತದ್ ಬ್ರಹ್ಮ"** ಎಂದು ತೈತ್ತಿರೀಯೋಪನಿಷತ್ತು ಹೇಳುತ್ತಿರುವಂತೆ **ಜಗತ್ತಿನ ಉತ್ಪತ್ತಿಸ್ಥಿತಿಲಯಗಳಿಗೆ ಕಾರಣವಾಗಿರುವ ಪರಬ್ರಹ್ಮವೇ ಕೃಷ್ಣ ಎಂದು ತಿಳಿದುಕೋ ಎಂದು ಕೃಷ್ಣನೇ ಇಲ್ಲಿ ಹೇಳಿರುತ್ತಾನೆ.** ಹೇಗೆಂದರೆ, ಪಂಚಭೂತಗಳು, ಮನಸ್ಸು, ಬುದ್ಧಿ, ಅಹಂಕಾರಗಳೆಂಬ ಎಂಟು ಭೂತಗಳಿಂದ ತೋರುತ್ತಿರುವ ಪ್ರಕೃತಿಯು ನನಗೆ **ಅಪರಾ ಪ್ರಕೃತಿ**ಯಾಗಿರುತ್ತದೆ. **ಇದೇ ನನ್ನ ಮಾಯಾ ಶಕ್ತಿಯೆನಿಸುತ್ತದೆ.** ಇದು ಅಚೇತನವಾದ ಪ್ರಕೃತಿ; ಇನ್ನೊಂದು **ಪರಾ ಪ್ರಕೃತಿ, ಇದು ಚೈತನ್ಯಸ್ವರೂಪವಾದದ್ದು. ಇದೇ ಹಿರಣ್ಯಗರ್ಭನೆಂಬ ಪ್ರಕೃತಿಯು.**

ಹೀಗೆ ಪರಾ ಪ್ರಕೃತಿ ಮತ್ತು ಅಪರಾ ಪ್ರಕೃತಿಯೆಂಬ ಎರಡೂ ಪ್ರಕೃತಿಗಳು ನನ್ನ ಅಧೀನವಾಗಿರುತ್ತವೆ. ಈ ಪ್ರಕೃತಿದ್ವಯಗಳೂ ಅವಿದ್ಯಾಕಲ್ಪಿತಮಾಯೆಯಾಗಿರುತ್ತವೆ. ಇದೇ ನನ್ನ ಮಾಯಾಶಕ್ತಿಯೆನಿಸುತ್ತದೆ. ಈ ಪ್ರಕೃತಿಗಳೇ ಚೇತನಾಚೇತನಾತ್ಮಕವಾದ, ಸ್ಥಾವರಜಂಗಮಾತ್ಮಕವಾದ ಸಮಸ್ತ ಜಗತ್ತಿಗೂ ಕಾರಣವಾಗಿರುತ್ತದೆ. **ಆದ್ದರಿಂದ ನಾನೇ ಜಗತ್ತಿಗೆ ಕಾರಣ ಎಂದು ತಿಳಿ.** ಏಕೆಂದರೆ ನನ್ನ ಅಧೀನವಾಗಿರುವ ಪ್ರಕೃತಿಯು ನನ್ನ ಸಂನಿಧಾನದಲ್ಲಿಯೇ ಕೆಲಸ ಮಾಡುತ್ತಿದೆ, ನಾನೇ ಈ ಪ್ರಕೃತಿಗೆ ಆತ್ಮನು. **ಇಷ್ಟಾಗಿ ಈ ಪ್ರಕೃತಿಯು ಮಾಯೆಯೆನಿಸುತ್ತದೆ. ಜಡವಾದ ಪ್ರಕೃತಿಗೆ ನನ್ನಿಂದಲೇ ಶಕ್ತಿಯು ಬಂದಿರುತ್ತದೆ.**

ಪ್ರಕೃತಿದ್ವಯದ್ವಾರೇಣ ಅಹಂ ಸರ್ವಜ್ಞಃ ಸರ್ವಶಕ್ತಃ ಈಶ್ವರಃ ಸರ್ವಸ್ಯ ಜಗತಂ ಕಾರಣಮಿತ್ಯರ್ಥಃ ಎಂದು ಶಾಂಕರಭಾಷ್ಯ. ಪರಾ ಪ್ರಕೃತಿ ಮತ್ತು ಅಪರಾ ಪ್ರಕೃತಿಗಳ ಮೂಲಕ ಸರ್ವಜ್ಞನೂ ಸರ್ವಶಕ್ತನೂ ಈಶ್ವರನೂ ಆದ ನಾನೇ ಇಡೀ ಜಗತ್ತಿಗೆ ಕಾರಣನಾಗಿದ್ದೇನೆ ಎಂದರ್ಥ. ಪ್ರಕೃತಿಗಳ ಮೂಲಕವೇ ನಾನು ಜಗತ್ಕಾರಣನಾಗಿದ್ದೇನೆಯೇ ಹೊರತು **ನಾನು ಸ್ವತಃ ನನ್ನ ಪರಮಾರ್ಥ ಸ್ವರೂಪದಿಂದ ನಿರ್ಗುಣನೂ ನಿರುಪಾಧಿಕನೂ ಆಗಿದ್ದೇನೆ. ಅದ್ವಿತೀಯ ಪರಿಶುದ್ಧ ಪರಿಪೂರ್ಣ ಪರಬ್ರಹ್ಮವೇ ನಾನಾಗಿದ್ದೇನೆ ಎಂದು ತಿಳಿಯಬೇಕು.**

ಪ್ರಕೃತಿಯ ಮೂಲಕ ಕೃಷ್ಣನೇ ಜಗತ್ಕಾರಣನು ಎಂದು ತಿಳಿಯಬೇಕು

14. ನ ಮಾಂ ಕರ್ಮಾಣಿ ಲಿಂಪಂತಿ; ಗೀತಾ ೪-೧೪

ನ ಮಾಂ ಕರ್ಮಾಣಿ ಲಿಂಪಂತಿ ನ ಮೇ ಕರ್ಮಫಲೇ ಸ್ಪೃಹಾ।
ಇತಿ ಮಾಂ ಯೋಽಭಿಜಾನಾತಿ ಕರ್ಮಭಿರ್ನ ಸ ಬಧ್ಯತೇ॥ ೪-೧೪

ನನಗೆ ಯಾವ ಕರ್ಮಗಳ ಅಂಟೂ ಇಲ್ಲ, ನನಗೆ ಕರ್ಮಫಲಗಳ ಆಶೆಯೂ ಇಲ್ಲ ಎಂದು ಯಾವನು ನನ್ನನ್ನು ಅರ್ಥಮಾಡಿಕೊಳ್ಳುತ್ತಾನೆಯೋ ಅವನೂ ಕರ್ಮಗಳಿಂದ ಬದ್ಧನಾಗುವುದಿಲ್ಲ.

ಮನುಷ್ಯರು ಕರ್ಮಗಳನ್ನು ಕರ್ತೃತ್ವಬುದ್ಧಿಯಿಂದ ಮಾಡುತ್ತಾರೆ, ಅಹಂಕಾರದಿಂದ ಮಾಡುತ್ತಾರೆ; ಹೀಗಾಗಿ ಆ ಕರ್ಮಗಳು ತಮ್ಮ ತಮ್ಮ ಫಲ ಗಳನ್ನು ಕೊಡುತ್ತವೆ. ಇದಕ್ಕಾಗಿ ಅವರು ದೇಹಾಂತರವನ್ನು ಹೊಂದಲೇಬೇಕು. ದೇಹಾರಂಭಕತ್ವವೇ ಕರ್ಮದಿಂದಾಗುವ ಲೇಪ. ಫಲಕ್ಕಾಗಿಯೇ ಅಲ್ಲವೇ ಅಜ್ಞಾನಿ ಗಳು ಕರ್ಮಗಳನ್ನು ಮಾಡುತ್ತಾರೆ? ಏಕೆಂದರೆ ಅಜ್ಞರಿಗೆ ಫಲಾಪೇಕ್ಷೆಯೂ, ಫಲಾಕಾಂಕ್ಷೆಯೂ ಇದ್ದೇ ಇರುತ್ತದೆ. ಎಲ್ಲಿ ಕರ್ತೃತ್ವವೂ ಫಲಾಶೆಯೂ ಇರುತ್ತದೆಯೋ ಅಲ್ಲಿ ಆ ಕರ್ಮಗಳಿಂದ ಜನ್ಮಾಂತರಫಲವಿರುತ್ತದೆ.

ಆದರೆ ಇಲ್ಲಿ, ಕೃಷ್ಣ ಹೇಳುತ್ತಿದ್ದಾನೆ, **'ನ ಮಾಂ ಕರ್ಮಾಣಿ ಲಿಂಪಂತಿ ನ ಮೇ ಕರ್ಮಫಲೇ ಸ್ಪೃಹಾ'** ಎಂದು; ನನಗೆ ಕರ್ಮಗಳನ್ನು ಮಾಡುವಾಗ ಅಹಂಕಾರವೇ ಇರುವುದಿಲ್ಲ. ಅಂದರೆ ಈ ಕರ್ಮವನ್ನು ನಾನು ಮಾಡುತ್ತಿದ್ದೇನೆ ಎಂಬ ಅಧ್ಯಾಸವೇ ಇರುವುದಿಲ್ಲ, ಮತ್ತು ಈ ಕರ್ಮದಿಂದ ನನಗೆ ಇಂಥ ಫಲವಾಗಬೇಕು ಎಂಬ ಫಲಾಕಾಂಕ್ಷೆಯೂ ನನಗಿಲ್ಲ. ಹೀಗಾಗಿ ನನ್ನನ್ನು ಯಾವ ಕರ್ಮಗಳೂ ಲೇಪಿಸಲಾರವು. ಅರ್ಜುನನೇ, **ನನ್ನ ಕರ್ಮಗಳೆಲ್ಲವೂ ಕರ್ಮಾಭಾಸಗಳೇ ಹೊರತು ಪರಮಾರ್ಥವಲ್ಲ. ನನ್ನ ಕರ್ಮಗಳೆಲ್ಲವೂ ಲೋಕಕಲ್ಯಾಣಕ್ಕಾಗಿಯೇ ಹೊರತು, ಲೋಕಸಂಗ್ರಹಕ್ಕಾಗಿಯೇ ಹೊರತು** ಆ ಕರ್ಮಗಳಿಂದ ಆಗಬೇಕಾದ ಪ್ರಯೋಜನವೆಂಬುದು ನನಗೇನೂ ಇಲ್ಲ.

ಇತಿ ಮಾಂ ಯೋಽಭಿಜಾನಾತಿ ಕರ್ಮಭಿರ್ನ ಸ ಬಧ್ಯತೇ. ಕೃಷ್ಣನನ್ನು ತನ್ನ ಸ್ವರೂಪವೇ ಎಂದು ಯಾರು ತಿಳಿಯುತ್ತಾರೆಯೋ ಅಂಥವರೂ ಮುಕ್ತರಾಗಿ ಬಿಡುತ್ತಾರೆ! ಕೃಷ್ಣನೆಂದರೆ ಬರೀ ಮನುಷ್ಯನಲ್ಲ, ಕೃಷ್ಣನಿಗೆ ಕರ್ತೃತ್ವವಾಗಲೀ ಭೋಕ್ತೃತ್ವವಾಗಲೀ ಇಲ್ಲ ಎಂದು ತಿಳಿದು, ಆ ಕೃಷ್ಣನು ತನ್ನ ಸ್ವರೂಪವೇ; ಆದ್ದರಿಂದ 'ನಾನೂ ಕರ್ತೃವಲ್ಲ, ನಾನೂ ಭೋಕ್ತೃವೂ ಅಲ್ಲ' ಎಂದು ಸ್ವಾನುಭವ ದಿಂದ ತಿಳಿದವನೇ ಬ್ರಹ್ಮಜ್ಞಾನಿಯೆನಿಸುತ್ತಾನೆ. ಇಂಥವನಿಗೂ ಕರ್ಮಬಂಧನ ವಿಲ್ಲ; ಎಂದರೆ ಇವನು ಪುನಃ ಹುಟ್ಟುವುದಿಲ್ಲ ಎಂದು ಅಭಿಪ್ರಾಯ.

ಕರ್ಮಬಂಧರಹಿತನೇ ಕೃಷ್ಣ ಎಂದು ತಿಳಿಯಬೇಕು

15. ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ; ಗೀತಾ ೭-೧೭

ತೇಷಾಂ ಜ್ಞಾನೀ ನಿತ್ಯಯುಕ್ತಃ ಏಕಭಕ್ತಿರ್ವಿಶಿಷ್ಯತೇ।
ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ॥

೭-೧೭

ನನ್ನ ಎಲ್ಲಾ ಭಕ್ತರ ಪೈಕಿ ಜ್ಞಾನಿಯೊಬ್ಬನೇ ಶ್ರೇಷ್ಠನು. ಏಕೆಂದರೆ ಇವನು ನಿತ್ಯಯುಕ್ತನಾದ ಏಕಭಕ್ತಿಯುಳ್ಳವನು! ಹೀಗಾಗಿ ನಾನು ಬ್ರಹ್ಮಜ್ಞಾನಿಗೆ ಅತ್ಯಂತ ಪ್ರಿಯನು. ಅವನೂ ನನಗೆ ತುಂಬಾ ಪ್ರಿಯನಾಗಿರುತ್ತಾನೆ.

ಇದು **ಕೃಷ್ಣಕಂಡ ಕೃಷ್ಣ**ನ ಹೃದಯಾಂತರಾಳದ ಮಾತು. ಭಗವಂತನನ್ನು ಶರಣುಹೊಂದಿ, ಭಗವಂತನನ್ನೇ ಭಜಿಸುವವರೆಲ್ಲರೂ ಭಗವದ್ಭಕ್ತರೇ. ಆದ್ದರಿಂದ ಎಲ್ಲಾ ಭಕ್ತರೂ ನನಗೆ ಪ್ರಿಯರೇ ಆಗಿರುತ್ತಾರೆ. ಇದರಲ್ಲಿ ಸಂಶಯವಿಲ್ಲ. ಆದರೆ **ಆತ್ಮಜ್ಞಾನೀ ತು**, ಆತ್ಮಜ್ಞಾನಿಯಾದರೋ ನನಗೆ ತುಂಬಾ ತುಂಬಾ ಪ್ರಿಯನಾಗಿರುತ್ತಾನೆ. ಏಕೆಂದರೆ ಇವನು ತತ್ತ್ವವಿದನಾದ್ದರಿಂದ. ಇವನಿಗೆ ಭಗವಂತನಾದ ನನ್ನನ್ನು ಬಿಟ್ಟು ಇನ್ನು ಬೇರೆ ವಸ್ತುಗಳೇ ಇಲ್ಲ; ಎಲ್ಲವೂ ಭಗವಂತನೇ, **ಆತ್ಮೈವೇದಂ ಸರ್ವಂ, ಬ್ರಹ್ಮೈವೇದಂ ಸರ್ವಂ**—ಎಂಬ ಅದ್ವೈತಾತ್ಮಭಾವವನ್ನು ಈ ಬ್ರಹ್ಮಜ್ಞಾನಿಯು ಹೊಂದಿರುತ್ತಾನೆ. ಆದ್ದರಿಂದಲೇ ಇವನು ನಿತ್ಯಯುಕ್ತನೂ ಏಕಭಕ್ತಿಯೂ ಆಗಿರುತ್ತಾನೆ.

ಬ್ರಹ್ಮಜ್ಞಾನಿಯು, ಅರ್ಜುನನೇ, ನನ್ನನ್ನೇ ತಾನೆಂದೂ, ತನ್ನನ್ನೇ ನಾನೆಂದೂ ತಿಳಿದಿರುತ್ತಾನೆ. ಜ್ಞಾನಿಗೆ ದ್ವೈತವೆಂಬುದೇ ಇರುವುದಿಲ್ಲ. ನನ್ನನ್ನೇ ಈ ಪ್ರಪಂಚವನ್ನಾಗಿಯೂ, ಈ ಪ್ರಪಂಚವನ್ನೇ ನನ್ನನ್ನಾಗಿಯೂ ಕಾಣುವ ಧೀರನಿವನು. ಹೀಗಾಗಿ ನಾನು ಇವನಿಗೆ ತುಂಬಾ ತುಂಬಾ ಪ್ರಿಯನಾಗಿರುತ್ತೇನೆ. ಜ್ಞಾನಿಯೂ ನನ್ನನ್ನು ತನ್ನ ಪ್ರತ್ಯಗಾತ್ಮಾ, ಅಂತರಾತ್ಮನೆಂದೇ ತಿಳಿದಿರುತ್ತಾನೆ. ಅಂದಮೇಲೆ ತಾನು ತನಗೆ ಅತ್ಯಂತ ಪ್ರಿಯನೇ ಆಗಿರುತ್ತಾನಲ್ಲವೇ? ಇದನ್ನೇ **ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ** ಎಂದು ಶ್ರುತಿಯೂ ಹೇಳುತ್ತಿದೆ.

ಜ್ಞಾನಿಗೆ ನಾನು ಪ್ರಿಯನು ಎಂದಿಷ್ಟೇ ಅಲ್ಲ, ಮತ್ತೇನೆಂದರೆ ನನಗೂ ಜ್ಞಾನಿಯೆಂದರೆ ಅತ್ಯಂತ ಪ್ರಿಯನಾಗಿರುತ್ತಾನೆ.ಏಕೆಂದರೆ ಆತ್ಮಜ್ಞಾನಿಯ ಆತ್ಮನೇ ನಾನಾದರೆ, ನನ್ನ ಆತ್ಮನೇ ಆತ್ಮಜ್ಞಾನಿಯೂ ಆಗಿರುತ್ತಾನೆ. **ತಸ್ಮಾತ್ ಜ್ಞಾನಿನಃ ಆತ್ಮತ್ವಾತ್ ವಾಸುದೇವಃ ಪ್ರಿಯೋ ಭವತಿ ಇತ್ಯರ್ಥಃ** ಎಂದು ಶ್ರೀಶಂಕರರ ಭಾಷ್ಯ. ಬ್ರಹ್ಮಜ್ಞಾನಿಯು ಮೋಕ್ಷವನ್ನು ಹೊಂದಿರುವ ಮಹಾತ್ಮ. ಕೃಷ್ಣನೆಂದರೆ ಮೋಕ್ಷಸ್ವರೂಪನೇ. ಹೀಗಾಗಿ ನನಗೆ ಜ್ಞಾನಿಯು ತುಂಬಾ ಪ್ರಿಯನು.

ಜ್ಞಾನಿಯ ಸ್ವರೂಪನೆಂದೇ ಕೃಷ್ಣನನ್ನು ತಿಳಿಯಬೇಕು

16. ಜನ್ಮ ಕರ್ಮ ಚ ಮೇ ದಿವ್ಯಂ; ಗೀತಾ ೪-೯

ಜನ್ಮ ಕರ್ಮ ಚ ಮೇ ದಿವ್ಯಮ್ ಏವಂ ಯೋ ವೇತ್ತಿ ತತ್ತ್ವತಃ।
ತ್ಯಕ್ತ್ವಾ ದೇಹಂ, ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ॥ ೪-೯

ಅರ್ಜುನನೇ, ನನ್ನ ಜನ್ಮವನ್ನೂ ಕರ್ಮವನ್ನೂ ಮಾಯಾಮಾತ್ರವೆಂದೂ ಅಪ್ರಾಕೃತ ವೆಂದೂ ನಿಜವಾಗಿ ಯಾವಾತನು ತಿಳಿಯುತ್ತಾನೆಯೋ,ಅಂಥ ಆತ್ಮಜ್ಞಾನಿಯು ದೇಹಪಾತವಾದ ಮೇಲೆ ಪುನರ್ಜನ್ಮವನ್ನು ಹೊಂದದೇ ನನ್ನನ್ನೇ ಹೊಂದುತ್ತಾನೆ.

ಕೃಷ್ಣನು ಕಾರಾಗೃಹದಲ್ಲಿ ವಸುದೇವದೇವಕಿಯರಲ್ಲಿ ಹುಟ್ಟಿದ್ದಾನೆ ಎಂಬುದು ಕೇವಲ ನಾಟಕ ಮಾತ್ರ. ಇದು ಮಾಯಾರೂಪವಾದದ್ದೇ ಹೊರತು ಪರಮಾರ್ಥ ವಲ್ಲ. **ಹುಟ್ಟಿದವನಂತೆ ತೋರಿದನೇ ಹೊರತು ನಿಜವಾಗಿಯೂ ಹುಟ್ಟಲಿಲ್ಲ** ಎಂದೇ ತಿಳಿಯಬೇಕು. ಇನ್ನು, ಕೃಷ್ಣನು ಧರ್ಮರಾಜಾದಿಗಳನ್ನು ಕಾಪಾಡಿದನಂತೆ, ಸಾಧುಸಜ್ಜನರನ್ನು ಕೃಷ್ಣನು ರಕ್ಷಿಸಿದನಂತೆ ಎಂಬುದೂ ಬರೀ ನಾಟಕಮಾತ್ರ; ಅಂದರೆ ಕೃಷ್ಣನು ಹುಟ್ಟಲೂ ಇಲ್ಲ, ಯಾರನ್ನೂ ಸಂಹರಿಸಲೂ ಇಲ್ಲ, ಯಾರನ್ನೂ ರಕ್ಷಿಸಲೂ ಇಲ್ಲ ; ಇದೆಲ್ಲವೂ ನಾಟಕೀಯವಾಗಿ, ಮಾಯಾಮಾತ್ರ ವಷ್ಟೇ ಎಂದು ಯಾವಾತನು ದೃಢವಾಗಿ ತಿಳಿಯುತ್ತಾನೆಯೋ ಅವನೇ ತತ್ತ್ವ ಜ್ಞಾನಿ. **ಅಷ್ಟೇ ಅಲ್ಲ, ಆ ಕೃಷ್ಣನೇ ತಾನೆಂದೂ, ತಾನೇ ಕೃಷ್ಣನೆಂದೂ ಏಕತ್ವಜ್ಞಾನವನ್ನು ಉಳ್ಳವನೇ ಆತ್ಮಜ್ಞಾನಿಯೆನಿಸುತ್ತಾನೆ.**

ಕೃಷ್ಣನ ಜೀವನವೆಲ್ಲವೂ, ಲೀಲೆಗಳೆಲ್ಲವೂ ಬರೀ ಮಾಯಿಕವೇ ಹೊರತು ಪರಮಾರ್ಥವಲ್ಲ ಎಂಬ ರಹಸ್ಯವನ್ನು ಬಲ್ಲವನೇ ಬ್ರಹ್ಮಜ್ಞಾನಿಯೆನಿಸುತ್ತಾನೆ. ಇನ್ನು ಬ್ರಹ್ಮಜ್ಞಾನಿಯಾದ ಮೇಲೆ ಇವನು ಜೀವನ್ಮುಕ್ತನೇ ಆಗಿಬಿಡುತ್ತಾನೆ. **ಜ್ಞಾನಿಯೇ ಕೃಷ್ಣನೆಂದೂ, ಕೃಷ್ಣನೇ ಜ್ಞಾನಿಯೆಂದೂ ಕೃಷ್ಣನೇ ಹೇಳಿರುತ್ತಾನೆ. "ಜ್ಞಾನೀ ತ್ವಾತ್ಮೈವ ಮೇ ಮತಂ"** ಎಂಬುದೂ ಕೃಷ್ಣನ ನೇರವಾದ ವಾಣಿ!

ಹೀಗೆ ತಿಳಿದ ಬ್ರಹ್ಮಜ್ಞಾನಿಗೂ ಪುನರ್ಜನ್ಮವಿಲ್ಲ , ಭಗವಂತನೇ ತಾನೆಂದು ತಿಳಿದಮೇಲೆ ಜ್ಞಾನಿಗೆ ದೇಹಾಧ್ಯಾಸವೇ ಇಲ್ಲವಾದ್ದರಿಂದ, ಇನ್ನು ಸಾಯುವು ದಾಗಲೀ ಹುಟ್ಟುವುದಾಗಲೀ ಎಲ್ಲಿಂದ ಬರಬೇಕು? ಇಂಥವನು **ಪುನರ್ಜನ್ಮ ನೈತಿ** ಪುನರ್ಜನ್ಮವನ್ನು ಹೊಂದುವುದಿಲ್ಲ ಎಂಬುದಿಷ್ಟೇ ಅಲ್ಲ , ಮತ್ತೇನೆಂದರೆ **ಮಾಮೇತಿ ಸೋಽರ್ಜುನ, ಅವನು ನನ್ನನ್ನೇ ಸೇರಿಕೊಳ್ಳುತ್ತಾನೆ ಎಂದು ಕೃಷ್ಣನೇ ಹೇಳಿರುವುದರಿಂದ ಕೃಷ್ಣ ಎಂದರೆ ಮೋಕ್ಷಸ್ವರೂಪನೇ ಎಂದು ತಿಳಿಯಬೇಕು**. ಇದು **"ಕೃಷ್ಣಕಂಡ ಕೃಷ್ಣ"**ನ ನಿಜಸ್ವರೂಪವಲ್ಲವೇ? ಜ್ಞಾನಿಯು ನನ್ನನ್ನೇ ಹೊಂದುತ್ತಾನೆ, ಜ್ಞಾನಿಗೆ ಪುನರ್ಜನ್ಮವಿಲ್ಲ , ಜ್ಞಾನಿಯು ವೈಷ್ಣವಪದವನ್ನು ಹೊಂದುತ್ತಾನೆ, ಮುಕ್ತನಾಗುತ್ತಾನೆ ಇವೆಲ್ಲಕ್ಕೂ ಒಂದೇ ತಾತ್ಪರ್ಯ.

ಕೃಷ್ಣನಿಗೆ ನಿಜವಾಗಿ ಜನ್ಮವಾಗಲೀ ಕರ್ಮಗಳಾಗಲೀ ಇಲ್ಲವೆಂದು ತಿಳಿಯಬೇಕು

17. ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ; ಗೀತಾ ೭-೭

ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ।
ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ॥ ೭-೭

ಧನಂಜಯನೇ, ನಾನೇ ಈ ಜಗತ್ತಿಗೆಲ್ಲ ಕಾರಣವಾಗಿದ್ದೇನೆ. ನನಗಿಂತ ಭಿನ್ನವಾದ ಬೇರೊಂದು ಕಾರಣವೆಂಬುದು ಇಲ್ಲ; ಹೀಗಾಗಿ ಈ ಜಗತ್ತೆಲ್ಲವೂ ನನ್ನಲ್ಲಿಯೇ ಹಾಸುಹೊಕ್ಕಾಗಿದೆ. ದಾರದಲ್ಲಿ ಎಲ್ಲಾ ಮಣಿಗಳೂ ಗಟ್ಟಿಯಾಗಿ ನಿಂತಿರುವಂತೆ.

ಇದು "**ಕೃಷ್ಣಕಂಡ ಕೃಷ್ಣ**"ನ ಮಾತು. ಈ ಜಗತ್ತಿಗೆಲ್ಲ ನಾನೇ ಕಾರಣ, ಈ ಜಗತ್ತು ನನ್ನಿಂದಲೇ ಬಂದು, ನನ್ನಲ್ಲಿಯೇ ನಿಂತಿರುತ್ತದೆ. ಹೀಗಾಗಿ ಈ ವಿಶ್ವವು ನಾನೇ ಆಗಿದ್ದೇನೆ; ನನ್ನನ್ನು ಬಿಟ್ಟು ನನಗಿಂತ ಭಿನ್ನವಾಗಿ, ನಾನಿಲ್ಲದೇ, ಸ್ವತಂತ್ರ ವಾಗಿ ಏನೇನೂ ಇಲ್ಲ. **ನಾನಿಲ್ಲದಿದ್ದರೆ ಈ ವಿಶ್ವವೇ ಇಲ್ಲ.** ಕಾರಣವೇ ಕಾರ್ಯ ವಾಗಿ ತೋರುವಂತೆ, ಕಾರಣವನ್ನು ಬಿಟ್ಟು ಕಾರ್ಯವೆಂಬುದು ಇಲ್ಲದಿರುವಂತೆ.

ಮಯಿ ಸರ್ವಮಿದಂ ಪ್ರೋತಂ; ಈ ಪ್ರಪಂಚವೆಲ್ಲವೂ ನನ್ನಲ್ಲಿಯೇ ಪ್ರೋತವಾಗಿದೆ. ಈ ಜಗತ್ತಿಗೆ ನಾನೇ ಆಧಾರಸ್ತಂಭ. ಭವನಕ್ಕೆ ಕಂಬಗಳಂತೆ, ಈ ಪ್ರಪಂಚಕ್ಕೆಲ್ಲ ನಾನೇ ಮೂಲಾಧಾರನಾಗಿದ್ದೇನೆ. **ದೀರ್ಘತಂತುಷು ಪಟವತ್** ಎಂದು ಶಾಂಕರಭಾಷ್ಯ. ನೂಲುಗಳಲ್ಲಿ ಬಟ್ಟೆಯಂತೆ, ನನ್ನಲ್ಲಿ ಪ್ರಪಂಚವು ತೋರುತ್ತಿದೆ. ನೂಲುಗಳೇ ಬಟ್ಟೆಯಾಗಿ ತೋರುವಂತೆ, ನಾನೇ ಪ್ರಪಂಚವಾಗಿ ತೋರುತ್ತಿದ್ದೇನೆ. ಹೀಗೆ ತಿಳಿದ ಬ್ರಹ್ಮಜ್ಞಾನಿಗಳಿಗೆ ಎಲ್ಲವೂ ಭಗವಂತನೇ.

ಪರಮಾತ್ಮನಿಂದ ಬಂದಿರುವ ಪ್ರಪಂಚವು ಪರಮಾತ್ಮನಲ್ಲಿಯೇ ಇದ್ದು ಪರಮಾತ್ಮನಲ್ಲಿಯೇ ಲಯವಾಗುತ್ತದೆ ಎಂದು ವೇದಾಂತಗಳು ಹೇಳುತ್ತಿವೆ ಯಲ್ಲವೇ? **ಆ ಪರಮಾತ್ಮನೇ ನಾನೆಂದು ತಿಳಿ.** ಈ ನನ್ನ ಮಾತುಗಳು ಲೌಕಿಕ ಜನಗಳಿಗೆ ಅರ್ಥವಾಗದು. ಏಕೆಂದರೆ ಅವರನ್ನು ನನ್ನ ಮಾಯೆಯು ಆವರಿಸಿರು ತ್ತದೆ. ಕಣ್ಣುಗಳಿಗೆ ಪರೆಯು ಬಂದರೆ ಪದಾರ್ಥಗಳು ಇರುವಂತೆ ಸರಿಯಾಗಿ ಹಾಗೂ ಸ್ಪಷ್ಟವಾಗಿ ಕಾಣಿಸುವುದಿಲ್ಲ. ಪರೆಯು ಹೋದಕೂಡಲೇ ಪದಾರ್ಥಗಳು ಕಾಣಿಸುತ್ತವೆಯಲ್ಲವೇ? ಹಾಗೆಯೇ ಅಜ್ಞಾನವೆಂಬ ಮಾಯೆಯಿಂದ ಆವೃತ ರಾಗಿರುವ ಲೌಕಿಕ ಜನಗಳಿಗೆ ನನ್ನ ನಿಜಸ್ವರೂಪದ ಅರಿವು ಉಂಟಾಗದು.

ಸೂತ್ರೇ ಮಣಿಗಣಾ ಇವ; ದಾರದಲ್ಲಿ ಮಣಿಗಳೆಲ್ಲವೂ ಗಟ್ಟಿಯಾಗಿ ನಿಂತಿರುವಂತೆ. ದಾರವು ಕಣ್ಣುಗಳಿಗೆ ಕಾಣದು, ಮಣಿಗಳು ಮಾತ್ರ ಕಾಣಿಸುತ್ತವೆ. ಆದರೆ ಎಲ್ಲಾ ಮಣಿಗಳೊಳಗೂ ದಾರವು ಹೊಕ್ಕಿರುವುದರಿಂದಲೇ ಮಣಿಗಳು ನಿಂತಿವೆ. ಹಾಗೆಯೇ ನನ್ನಿಂದಲೇ ಈ ಜಗತ್ತು ವ್ಯಾಪಿಸಲ್ಪಟ್ಟಿದೆ ಎಂದು ತಿಳಿ.

ಕೃಷ್ಣನೆಂದರೆ ಇಡೀ ಜಗತ್ತೇ ಎಂದು ತಿಳಿಯಬೇಕು

18. **ಕೃಷ್ಣಕಂಡ ಕೃಷ್ಣಾಷ್ಟಕಮ್**

ಓಂ॥ ಪ್ರಣಮ್ಯ ವಾಸುದೇವಂ ಶ್ರೀನಾರಾಯಣಮನಾಮಯಮ್।
ಸರ್ವಭೂತಾತ್ಮಭೂತಸ್ಥಂ ನಾಮರೂಪವಿವರ್ಜಿತಮ್॥

ಪಠೇತ್ ಪ್ರತಿದಿನಂ ಸ್ತೋತ್ರಂ **ಕೃಷ್ಣಕಂಡ ಕೃಷ್ಣಾಷ್ಟಕಮ್।**
ಜ್ಞಾನವೈರಾಗ್ಯಸಿದ್ಧ್ಯರ್ಥಂ ಬ್ರಹ್ಮಾತ್ಮಜ್ಞಾನದಾಯಕಮ್॥

ಬೀಜಂ ಮಾಂ ಸರ್ವಭೂತಾನಾಂ ವಿದ್ಧಿ ಪಾರ್ಥ ಸನಾತನಮ್।
ಲೋಕಕಲ್ಯಾಣಕರ್ತಾರಂ **ಕೃಷ್ಣಕಂಡ ಕೃಷ್ಣಂ ಭಜೇ** ॥೧॥

ಮೋಹಾತೀತಂ ಗುಣಾತೀತಂ ಮಾಯಾತೀತಂ ವಿಮತ್ಸರಮ್।
ಸರ್ವಭೂತಸಮಂ ದೇವಂ **ಕೃಷ್ಣಕಂಡ ಕೃಷ್ಣಂ ಭಜೇ** ॥೨॥

ಜ್ಞಾನವಿಜ್ಞಾನಸಂಪನ್ನಂ ಮೂಲಾವಿದ್ಯಾವಿವರ್ಜಿತಮ್।
ಜಗದ್ಗುರುಂ ಮಹಾಪ್ರಾಜ್ಞಂ **ಕೃಷ್ಣಕಂಡ ಕೃಷ್ಣಂ ಭಜೇ** ॥೩॥

ಅಜಮನಿದ್ರಮಸ್ವಪ್ನಮ್ ಅನಾಮಕಮರೂಪಕಮ್।
ಸಕೃತ್‌ವಿಭಾತಂ ಚೈತನ್ಯಂ **ಕೃಷ್ಣಕಂಡ ಕೃಷ್ಣಂ ಭಜೇ** ॥೪॥

ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ।
ಬ್ರಹ್ಮಜ್ಞಾನಿಪ್ರಿಯಂ ಕಾಂತಂ **ಕೃಷ್ಣಕಂಡ ಕೃಷ್ಣಂ ಭಜೇ** ॥೫॥

ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ।
ಸರ್ವಜನ್ಮರಹಸ್ಯಜ್ಞಂ **ಕೃಷ್ಣಕಂಡ ಕೃಷ್ಣಂ ಭಜೇ** ॥೬॥

ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ।
ಮಾಯಾಽವಿದ್ಯಾಪ್ರಹರ್ತಾರಂ **ಕೃಷ್ಣಕಂಡ ಕೃಷ್ಣಂ ಭಜೇ** ॥೭॥

ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್।
ಭಕ್ತಾನಾಂ ಮೋಕ್ಷದಾತಾರಂ **ಕೃಷ್ಣಕಂಡ ಕೃಷ್ಣಂ ಭಜೇ** ॥೮॥

ಯಃ ಪಠೇತ್ ಪರಮಂ ಸ್ತೋತ್ರಂ **ಕೃಷ್ಣಕಂಡ ಕೃಷ್ಣಾಷ್ಟಕಮ್**॥
ಸರ್ವಪಾಪಹರಂ ಶ್ರೇಷ್ಠಂ ಸರ್ವಸಂಪತ್ಕರಂ ಶುಭಮ್॥

ಸರ್ವಾನ್ ಕಾಮಾನವಾಪ್ನೋತಿ ಸರ್ವದೋಷವಿವರ್ಜಿತಃ।
ಆತ್ಮಜ್ಞಾನಮವಾಪ್ನೋತಿ ಕೃಷ್ಣಸಾಯುಜ್ಯಮೇವ ಚ॥

॥ ಓಂ ಶಾಂತಿಃ ಶಾಂತಿಃ ಶಾಂತಿಃ॥

19. ಮನ್ಮನಾ ಭವ ಮದ್ಭಕ್ತಃ; ಗೀತಾ ೧೮-೬೫

ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು।
ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ॥ ೧೮-೬೫

ಅರ್ಜುನನೇ, ನನ್ನಲ್ಲಿಯೇ ಮನಸ್ಸಿಡು, ನನ್ನ ಭಕ್ತನಾಗು, ನನಗಾಗಿಯೇ ಯಜ್ಞಗಳನ್ನು ಮಾಡು, ನನ್ನನ್ನೇ ನಮಸ್ಕರಿಸು; ಹೀಗೆ ಮಾಡಿದರೆ, ನೀನು ನನ್ನನ್ನೇ ಬಂದು ಸೇರಿಕೊಳ್ಳುವೆ. ಇದು ನನ್ನ ಸತ್ಯವಾದ ಮಾತೆಂದು ನಾನು ನಿನಗೆ ಪ್ರತಿಜ್ಞೆಮಾಡಿ, ಆಣೆಮಾಡಿ ಹೇಳುತ್ತಿದ್ದೇನೆ. ನಿನಗೆ ವಿಶೇಷವಾಗಿ ಇದನ್ನು ನಾನು ಹೇಳುತ್ತಿದ್ದೇನೆ. ಏಕೆಂದರೆ ನೀನು ನನಗೆ ತುಂಬಾ ತುಂಬಾ ಪ್ರಿಯನಾಗಿರುವುದರಿಂದ ಮತ್ತು ನಾನೂ ನಿನಗೆ ಪ್ರಿಯನಾಗಿರುವುದರಿಂದ.

ಅರ್ಜುನನೇ, ನಾನು ನಿನಗೆ ಈ ಹಿಂದಿನ ಹದಿನಾರು ಅಧ್ಯಾಯಗಳಲ್ಲಿ ಅನೇಕ ಸಾಧನಗಳನ್ನೂ ಯೋಗಗಳನ್ನೂ ಉಪದೇಶಿಸಿದ್ದೇನೆ. ಆದರೆ ಇದು ಕಡೆಯದಾದ ಹದಿನೆಂಟನೆಯ ಅಧ್ಯಾಯದ ಕೊನೆಯ ಶ್ಲೋಕ. ಈ ನನ್ನ ಮಾತುಗಳನ್ನು ಕೇಳಿಸಿಕೊಂಡು, ಅದರಂತೆ ನೀನು ಸಂಪೂರ್ಣವಾಗಿ ನನಗೆ ಶರಣಾಗಿ ಕೃತಕೃತ್ಯನಾಗಪ್ಪ, ಮಗೂ.

ಸರಿ, ಕೃಷ್ಣನೇ, ನಿನ್ನ ಆ ಮಾತುಗಳಾದರೂ ಯಾವುವು? ನನಗೆ ನಿನ್ನ ಕಟ್ಟಕಡೆಯ ಸಂದೇಶವಾದರೂ ಏನು? ನಾನೀಗ ಏನು ಮಾಡಬೇಕು? ಎಂದರೆ,

ಮನ್ಮನಾ ಭವ: ಮಚ್ಚಿತ್ತನಾಗು. ನಿನ್ನ ಮನಸ್ಸನ್ನೆಲ್ಲ ನನ್ನಲ್ಲಿಯೇ ಸಂತೋಷವಾಗಿ ಇಡು. ಬೇರೆ ಏನನ್ನೂ ಚಿಂತಿಸದೇ ನನ್ನನ್ನೇ ಧ್ಯಾನಮಾಡುತ್ತಿರು.

ಮದ್ಭಕ್ತೋ ಭವ: ನನ್ನ ಭಕ್ತನಾಗು. ಬೇರೆ ಚಿಲ್ಲರೆ ದೇವರುಗಳನ್ನು ಬಿಟ್ಟು ಏಕಾಗ್ರತೆಯಿಂದ ನನ್ನನ್ನೇ ಭಜಿಸುತ್ತಿರು.

ಮದ್ಯಾಜೀ ಭವ: ಯಜ್ಞಯಾಗಾದಿಗಳನ್ನೂ ನನಗಾಗಿಯೇ ಮಾಡು.

ಮಾಂ ನಮಸ್ಕುರು: ನನ್ನನ್ನೇ ನಮಿಸುತ್ತಿರು, ಬೇರೆ ಯಾರನ್ನೂ ಬೇಡ.

ಮಾಮೇವೈಷ್ಯಸಿ: ಇಷ್ಟೂ ಮಾಡಿದರೆ ನೀನು ನನ್ನನ್ನೇ ಬಂದು ಸೇರುತ್ತೀಯೆ.

ತೇ ಸತ್ಯಂ ಪ್ರತಿಜಾನೇ: ಹೀಗೆಂದು ನಿನಗೆ ಆಣೆಮಾಡಿ ಹೇಳುತ್ತೇನೆ. ಈ ನನ್ನ ಮಾತು ಸತ್ಯ, ಪರಮಸತ್ಯ. ಇದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ!

ಇದನ್ನೇ ಕೃಷ್ಣನು ಹೀಗೆ ಸರಳವಾಗಿ ಹೇಳಿದ್ದಾನೆ:

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್॥ ೯-೨೭

ಮಾಡುವುದನ್ನೆಲ್ಲ **'ಶ್ರೀಕೃಷ್ಣಾರ್ಪಣಮಸ್ತು'** ಎಂದು ತಿಳಿದು ಮಾಡಬೇಕು.

ಕೃಷ್ಣಭಕ್ತರಿಗೆ ಮುಕ್ತಿ ಗ್ಯಾರಂಟಿ ಎಂದು ತಿಳಿಯಬೇಕು

20. ವೇದಾಹಂ ಸಮತೀತಾನಿ; ಗೀತಾ ೭-೨೬

ವೇದಾಹಂ ಸಮತೀತಾನಿ ವರ್ತಮಾನಾನಿ ಚಾರ್ಜುನ।
ಭವಿಷ್ಯಾಣಿ ಚ ಭೂತಾನಿ ಮಾಂ ತು ವೇದ ನ ಕಶ್ಚನ॥ ೭-೨೬

ಅರ್ಜುನನೇ, ನಾನು ಹಿಂದಿನ, ಇಂದಿನ ಹಾಗೂ ಮುಂದಿನ ಎಲ್ಲ ಭೂತಗಳನ್ನೂ ಬಲ್ಲೆನು; ಆದರೆ ನನ್ನನ್ನು ಮಾತ್ರ ಯಾವನೊಬ್ಬನೂ ಪೂರ್ಣವಾಗಿ ಅರಿಯನು!

ಕೃಷ್ಣನಿಗೆ ಎಲ್ಲಾ ಭೂತಗಳ ಎಲ್ಲಾ ವಿಚಾರಗಳೂ ತಿಳಿದಿರುತ್ತವೆ. ಅಂದರೇನರ್ಥ? ಎಂಬುದನ್ನು ನೋಡೋಣ: ಭೂತಗಳೆಂದರೆ ಎಂಭತ್ತ ನಾಲ್ಕು ಲಕ್ಷ ಪ್ರಾಣಿಗಳು; ದೇವತೆಗಳು, ಅಸುರರು, ಮನುಷ್ಯರು, ಪಶುಪಕ್ಷಿಕ್ರಿಮಿಕೀಟ ಗಳು, ಗಿಡಮರಗಳು—ಎಲ್ಲವೂ ಸೇರಿಕೊಂಡೇ 'ಭೂತ' ಎನಿಸುತ್ತಾರೆ. ಹಿಂದಿನ ಭೂತಗಳೆಂದರೆ, ಹಿಂದಿನ ನೂರಾರು ಜನ್ಮಗ್ರಳಲ್ಲಿ, ಸಹಸ್ರಾರು ಜನ್ಮಗ್ರಳಲ್ಲಿ ಯಾವ ಯಾವ ಪ್ರಾಣಿಗಳು ಏನಾಗಿದ್ದರು? ಎಂಬುದನ್ನು ನಾನು ಬಲ್ಲೆನು. ಸೃಷ್ಟಿಯ ಪ್ರಾರಂಭದಿಂದ ಇಂದಿನವರೆಗೂ ಸಕಲ ಭೂತಗಳ ಜಾತಕಗಳನ್ನೆಲ್ಲ ನಾನು ತಿಳಿದಿದ್ದೇನೆ ಎಂಬುದು "**ಕೃಷ್ಣಕಂಡ ಕೃಷ್ಣ**"ನ ಮಾತು!

ವರ್ತಮಾನಾನಿ ಭೂತಾನಿ ಅಹಂ ವೇದ; ಈಗ ಇರುವಂಥ ಎಲ್ಲಾ ಭೂತಗಳನ್ನೂ ನಾನು ಬಲ್ಲೆನು! **ಈ ವಿಶಾಲ ಪ್ರಪಂಚದಲ್ಲಿ ಹದಿನಾಲ್ಕು ಲೋಕಗಳಲ್ಲಿರುವ ಸಕಲ ಭೂತಗಳ, ಸಕಲ ಪ್ರಾಣಿಗಳ, ಸಕಲ ಜಂತುಗಳ ಸಕಲ ವಿಚಾರಗಳನ್ನೂ ನಾನು ಪರಿಪೂರ್ಣವಾಗಿ ಬಲ್ಲೆನು. ನನಗೆ ತಿಳಿಯದ ವಿಷಯವು ಯಾವುದೊಂದೂ ಇಲ್ಲ. ಸರ್ವಜ್ಞನೂ ಸರ್ವಶಕ್ತನೂ ಆದ ನನಗೆ ಯಾವುದೊಂದೂ ಅಗೋಚರವಲ್ಲ; ಎಲ್ಲವೂ ಗೋಚರವೇ.**

ಭವಿಷ್ಯಾಣಿ ಚ ಭೂತಾನಿ ಅಹಂ ವೇದ; ಮುಂದೇ ಹುಟ್ಟಬಹುದಾದ ಎಲ್ಲಾ ಭೂತಗಳನ್ನೂ ನಾನು ಬಲ್ಲೆನು! ಈಗಿನ ಅವರವರ ಕರ್ಮಗಳಿಗೆ ತಕ್ಕಂತೆ ಆಯಾ ಪ್ರಾಣಿಗಳು ಮುಂದೆ ಏನಾಗಿ ಹುಟ್ಟುತ್ತಾರೆ? ಎಲ್ಲಿ ಹುಟ್ಟುತ್ತಾರೆ? ಏನೇನು ಮಾಡುತ್ತಾರೆ? ಇದೆಲ್ಲವೂ, ಅರ್ಜುನನೇ ನನಗೆ ತಿಳಿದಿದೆ; ಇದು ನನ್ನ ಮಹಿಮೆಯೆಂದು ತಿಳಿ. **ಇಡೀ ಜಗತ್ತಿಗೇ ಕಾರಣನಾದ ನನಗೆ ಎಲ್ಲವೂ ತಿಳಿದಿದೆ** ಎಂದರ್ಥ. ಏಕೆಂದರೆ ನನ್ನ ಅರಿವಿಗೆ ಮಾಯಾಪ್ರತಿಬಂಧಕವಿಲ್ಲ.

ಆದರೆ, **ಮಾಂ ತು ವೇದ ನ ಕಶ್ಚನ,** ನನ್ನನ್ನು ಮಾತ್ರ ಯಾರೂ ತಿಳಿಯರು. ಏಕೆಂದರೆ ಅವಿದ್ಯಾಮಾಯಾಪ್ರತಿಬದ್ಧಜ್ಞಾನರಾದ್ದರಿಂದ. ಸಕಲ ಪ್ರಾಣಿಗಳಿಗೂ ಅವಿದ್ಯಾಮಾಯಾವರಣವು ಇದೆ, ಆದರೆ ನನಗೆ ಆ ಅವಿದ್ಯಾ ಮಾಯಾವರಣವು ಇಲ್ಲದಿರುವುದೇ ವಿಶೇಷ.

ಕೃಷ್ಣನನ್ನು ಸರ್ವಜ್ಞ ಭಗವಂತನೆಂದೇ ತಿಳಿಯಬೇಕು

21. ತಸ್ಯಾಹಂ ನ ಪ್ರಣಶ್ಯಾಮಿ ; ಗೀತಾ ೬-೩೦

ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ।
ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ॥ ೬-೩೦

ಅರ್ಜುನನೇ, ನನ್ನನ್ನೇ ಯಾವನು ಎಲ್ಲೆಡೆಗಳಲ್ಲಿಯೂ ಕಾಣುತ್ತಾನೆಯೋ, ಎಲ್ಲವನ್ನೂ ನನ್ನಲ್ಲಿಯೇ ಕಾಣುತ್ತಾನೆಯೋ; ಅವನಿಗೆ ನಾನು ನಾಶವಾಗುವುದಿಲ್ಲ , ಮತ್ತೆ ಅವನೂ ನನಗೆ ನಾಶವಾಗುವುದಿಲ್ಲ.

ಇದು **'ಕೃಷ್ಣಕಂಡ ಕೃಷ್ಣ'**ನ ಸ್ವರೂಪ. ಯಾವಾತನು ಎಲ್ಲರಲ್ಲಿಯೂ ನನ್ನನ್ನೇ ಕಾಣುತ್ತಾನೆಯೋ, ಎಂದರೆ ದೇಹಧಾರಿಯಾದ ಮನುಷ್ಯನಾದ ಕೃಷ್ಣನನ್ನು ಎಂದರ್ಥವಲ್ಲ; ಮತ್ತೇನೆಂದರೆ ವಾಸುದೇವನನ್ನು ಎಂದರ್ಥ. ಎಲ್ಲರಲ್ಲಿಯೂ **ಸಚ್ಚಿದಾನಂದಚೈತನ್ಯಘನಸ್ವರೂಪಿಯಾದ ಭಗವಂತನನ್ನೇ ಕೃಷ್ಣನೆಂದು ಇಲ್ಲಿ ಹೇಳಿದೆ**. ಎಲ್ಲವೂ ಬ್ರಹ್ಮವೇ ಅಲ್ಲವೇ? ಬ್ರಹ್ಮವಲ್ಲದ್ದು ಯಾವುದೊಂದೂ ಇಲ್ಲ ಎಂಬುದನ್ನು ಯಾವಾತನು ವಿವೇಕಜ್ಞಾನದಿಂದ ಸ್ವಾನುಭವಜ್ಞಾನದಿಂದ ಕಾಣುತ್ತಾನೆಯೋ ಅವನೇ ಸಮ್ಯಗ್ದರ್ಶಿಯೆನಿಸುತ್ತಾನೆ.

ಸರ್ವಂ ಚ ಮಯಿ ಪಶ್ಯತಿ; ಇಡೀ ಪ್ರಪಂಚವನ್ನೇ ಯಾವಾತನು ನನ್ನಲ್ಲಿ ಕಾಣುತ್ತಾನೆಯೋ ಎಂದರೆ ಭಗವಂತನೇ ಪ್ರಪಂಚರೂಪದಿಂದ ತೋರುತ್ತಾನೆಯೇ ಹೊರತು, ಭಗವಂತನನ್ನು ಬಿಟ್ಟು ಪ್ರಪಂಚವೆಂಬುದು ಇಲ್ಲವೇ ಇಲ್ಲ ಎಂದು ಯಾವಾತನು ನಿಶ್ಚಿತವಾಗಿ ವಿವೇಕದಿಂದ ತಿಳಿಯುತ್ತಾನೆಯೋ, ಇವನೇ ಸರ್ವಾತ್ಮಭಾವಸಂಪನ್ನನಾದ ಬ್ರಹ್ಮಜ್ಞಾನಿಯು. ಇದನ್ನೇ ಶ್ರೀಶಂಕರರು **ಏವಮ್ ಆತ್ಮೈಕತ್ವದರ್ಶಿನಃ** ಎಂದು ಬರೆದಿದ್ದಾರೆ. ತನ್ನಲ್ಲಿ ವಿಶ್ವವನ್ನೂ ವಿಶ್ವದಲ್ಲಿ ತನ್ನನ್ನೂ ಕಾಣುವವನೇ ಬ್ರಹ್ಮಾತ್ಮಜ್ಞಾನಿಯೆನಿಸುತ್ತಾನೆ.

ಸರ್ವಾತ್ಮಭಾವಸಂಪನ್ನನಾದ ಈ ಮಹಾತ್ಮನಿಗೆ, ಅರ್ಜುನನೇ, ನಾನು ನಾಶವಾಗುವುದಿಲ್ಲ ಎಂದರೆ ಪರೋಕ್ಷನಾಗುವುದಿಲ್ಲ ಎಂದರ್ಥ. ಅವನು ನನಗೂ ಪರೋಕ್ಷನಾಗುವುದಿಲ್ಲ. **ಸ ಚ ವಿದ್ವಾನ್ ಮಮ ವಾಸುದೇವಸ್ಯ ನ ಪ್ರಣಶ್ಯತಿ, ನ ಪರೋಕ್ಷೀಭವತಿ। ತಸ್ಯ ಚ ಮಮ ಚ ಏಕಾತ್ಮಕತ್ವಾತ್** ಎಂದು ಶಾಂಕರ ಭಾಷ್ಯ. ಆ ಬ್ರಹ್ಮಜ್ಞಾನಿಯು ವಾಸುದೇವನಾದ ನನಗೆ ಪರೋಕ್ಷನಾಗುವುದಿಲ್ಲ. ಏಕೆಂದರೆ ಅವನಿಗೂ ನನಗೂ ಏಕಾತ್ಮತ್ವವಾಗಿರುವುದರಿಂದ. **ಸ್ವಾತ್ಮಾ ಹಿ ನಾಮ ಆತ್ಮನಃ ಪ್ರಿಯ ಏವ ಭವತಿ। ಯಸ್ಮಾಚ್ಚ ಅಹಮೇವ ಸರ್ವಾತ್ಮೈಕತ್ವದರ್ಶೀ।** ಎಂದು ಶಾಂಕರಭಾಷ್ಯ. ತಾನೆಂದರೆ ತನಗೆ ಪ್ರಿಯನಲ್ಲವೇ? ಹೀಗಾಗಿ ನನಗೂ ನನ್ನ ಭಕ್ತನಾದ ಬ್ರಹ್ಮಜ್ಞಾನಿಗೂ ಏಕಾತ್ಮತ್ವವಿದೆ ಎಂದು ತಿಳಿಯಬೇಕು.

ಬ್ರಹ್ಮಜ್ಞಾನಿಯೂ ಕೃಷ್ಣನೂ ಇಬ್ಬರೂ ಒಂದೇ ಎಂದು ತಿಳಿಯಬೇಕು

22. ಸರ್ವಸ್ಯ ಚಾಹಂ ಹೃದಿ ಸಂನಿವಿಷ್ಟಃ; ಗೀತಾ ೧೫-೧೫

ಸರ್ವಸ್ಯ ಚಾಹಂ ಹೃದಿ ಸಂನಿವಿಷ್ಟೋ
ಮತ್ತಃ ಸ್ಮೃತಿರ್ಜ್ಞಾನಮಹೋಪನಂ ಚ।
ವೇದೈಶ್ಚ ಸರ್ವೈರಹಮೇವ ವೇದ್ಯೋ
ವೇದಾಂತಕೃದ್ ವೇದವಿದೇವ ಚಾಹಮ್॥ ೧೫-೧೫

ನಾನು ಎಲ್ಲಾ ಭೂತಗಳ ಹೃದಯದಲ್ಲಿ ವಾಸಮಾಡುತ್ತಿದ್ದೇನೆ, ನನ್ನಿಂದಲೇ ಪ್ರಾಣಿಗಳಿಗೆ ಸ್ಮರಣಶಕ್ತಿ, ಜ್ಞಾನಶಕ್ತಿ ಮತ್ತ ಅಪೋಹನಗಳು ಉಂಟಾಗುತ್ತಿವೆ; ಸಕಲ ವೇದ ಗಳಿಂದಲೂ ಪ್ರತಿಪಾದ್ಯನೂ ವೇದ್ಯನೂ ಆಗಿರುವವನೂ ನಾನೇ; ನಾನೇ ವೇದಾಂತಾ ಚಾರ್ಯನೂ ವೇದವಿದನೂ ಆಗಿರುತ್ತೇನೆ.

ಈ ಶ್ಲೋಕದಲ್ಲಿ ಕೃಷ್ಣನು ತನ್ನ ಐದು ನಿಜಸ್ವರೂಪಗಳನ್ನು ಹೇಳಿದ್ದಾನೆ:

೧. **ಸರ್ವಸ್ಯ ಚಾಹಂ ಹೃದಿ ಸಂನಿವಿಷ್ಟಃ:** ನಾನು ಎಲ್ಲಾ ಪ್ರಾಣಿಗಳ ಹೃದಯ ದಲ್ಲಿ ಪ್ರವೇಶಮಾಡಿರುತ್ತೇನೆ. **ಏಷ ತೇ ಆತ್ಮಾ ಅಂತರ್ಯಾಮೀ ಅಮೃತಃ** ಎಂದು ಬೃಹದಾರಣ್ಯಕ ಶ್ರುತಿಯು ಹೇಳುತ್ತಿರುವ ಅಂತರ್ಯಾಮಿ ಆತ್ಮನು ನಾನೇ ಆಗಿರುತ್ತೇನೆ. **ಸರ್ವಪ್ರಾಣಿಗುಹಾಶಯನಾದ ಪ್ರತ್ಯಗಾತ್ಮನೇ 'ಕೃಷ್ಣ'** ಎಂದು ತಿಳಿಯಬೇಕು.

೨. **ಮತ್ತಃ ಸ್ಮೃತಿರ್ಜ್ಞಾನಮಪೋಹನಂ ಚ:** ನಾನೇ ಅಂತರ್ಯಾಮಿ ಯಾಗಿದ್ದು ಸಕಲ ಪ್ರಾಣಿಗಳಿಗೂ ಸ್ಮೃತಿ, ಜ್ಞಾನ, ಅಪೋಹನಗಳನ್ನು ಉಂಟುಮಾಡುತ್ತೇನೆ. **ಕೃಷ್ಣನನ್ನು ಸಕಲ ಪ್ರಾಣಿಗಳ ಅಂತಃಕರಣಕ್ಕೆ ಸಾಕ್ಷಿಯೆಂದು ತಿಳಿಯಬೇಕು.**

೩. **ವೇದೈಶ್ಚ ಸರ್ವೈರಹಮೇವ ವೇದ್ಯಃ:** ಸಕಲ ವೇದಾಂತಶಾಸ್ತ್ರಗಳಿಂದಲೂ ವೇದ್ಯನಾಗಿರುವ **ಪರಮಪುರುಷನೇ ಕೃಷ್ಣನೆಂದು ತಿಳಿಯಬೇಕು.**

೪. **ವೇದಾಂತಕೃತ್:** ವೇದಾಂತಗಳಿಗೆ ಆದಿಪುರುಷನೇ ಕೃಷ್ಣ. ವೇದಾಂತ ಗಳೆಂದರೆ ಉಪನಿಷತ್ತುಗಳು; ಇವುಗಳನ್ನು ಮೊಟ್ಟಮೊದಲಿಗೆ ಉಪದೇಶಿ ಸಿದ ಆದಿ ಗುರುವೆಂದರೆ 'ಕೃಷ್ಣ'ನೆಂದೇ ತಿಳಿಯಬೇಕು. **ವೇದಾಂತ ಸಂಪ್ರದಾಯಕ್ಕೆ ಪ್ರಥಮ ಆದಿ ಆಚಾರ್ಯನಾದ ನಾರಾಯಣನೇ ಕೃಷ್ಣ ನೆಂದು ತಿಳಿಯಬೇಕು.**

೫. **ವೇದವಿದೇವ ಚಾಹಮ್:** ವೇದಗಳ ಅರ್ಥವನ್ನೂ ತಾತ್ಪರ್ಯವನ್ನೂ ಸರಿಯಾಗಿ ಬಲ್ಲವನೇ 'ಕೃಷ್ಣ' ಎಂದು **ಕೃಷ್ಣನೇ ಇಲ್ಲಿ ಹೇಳುತ್ತಿದ್ದಾನೆ.**

ಕೃಷ್ಣನೇ ವೇದವೇದಾಂತವೇದ್ಯನಾದ ಭಗವಂತನೂ ಆಗಿರುತ್ತಾನೆ.

ಕೃಷ್ಣನನ್ನು ಸರ್ವಭೂತನಿವಾಸಿ ಎಂದು ತಿಳಿಯಬೇಕು

23. **ಅಹಂ ಕ್ರತುರಹಂ ಯಜ್ಞಃ ;** ಗೀತಾ ೯-೧೬

ಅಹಂ ಕ್ರತುರಹಂ ಯಜ್ಞಃ ಸ್ವಧಾಽಹಮಹಮೌಷಧಮ್।
ಮಂತ್ರೋಽಹಮಹಮೇವಾಜ್ಯಮಹಮಗ್ನಿರಹಂ ಹುತಮ್॥ ೯-೧೬

ನಾನೇ ಕ್ರತುವೂ, ನಾನೇ ಯಜ್ಞವೂ, ನಾನೇ ಸ್ವಧೆಯೂ, ನಾನೇ ಔಷಧವೂ, ನಾನೇ ಮಂತ್ರವೂ, ನಾನೇ ಆಜ್ಯವೂ, ನಾನೇ ಅಗ್ನಿಯೂ, ನಾನೇ ಹುತವೂ ಆಗಿದ್ದೇನೆ.

ಈ ಶ್ಲೋಕದಲ್ಲಿ ಕೃಷ್ಣನು ಎಂಟು ಸಲ 'ಅಹಂ' ಎಂದು ಹೇಳಿ, ತನ್ನನ್ನು ಯಜ್ಞಸ್ವರೂಪನೆಂದು ಹೇಳಿದ್ದಾನೆ. ಹೇಗೆಂದರೆ:

೧. **ಅಹಂ ಕ್ರತುಃ:** ನಾನೇ ಕ್ರತುವಾಗಿದ್ದೇನೆ. ಶ್ರೌತಕರ್ಮಗಳಲ್ಲಿ **'ಕ್ರತು'** ಎಂಬುದು ಒಂದು ವಿಶೇಷ. ನಾನೇ ಕ್ರತುವಾಗಿದ್ದೇನೆ.

೨. **ಅಹಂ ಯಜ್ಞಃ:** ನಾನೇ ಯಜ್ಞವಾಗಿದ್ದೇನೆ. ಸ್ಮಾರ್ತಕರ್ಮವಿಶೇಷವೇ **'ಯಜ್ಞ'**. ಇದೂ ನಾನೇ.

೩. **ಅಹಂ ಸ್ವಧಾ:** ನಾನೇ ಸ್ವಧೆಯೂ ಆಗಿದ್ದೇನೆ. ಪಿತೃದೇವತೆಗಳಿಗೆ ಕೊಡುವ ಅನ್ನಕ್ಕೆ **'ಸ್ವಧಾ'** ಎಂದು ಹೆಸರು. **ಪಿತೃಭ್ಯಃ ಸ್ವಧಾಸ್ತು.**

೪. **ಅಹಮೌಷಧಮ್:** ನಾನೇ ಔಷಧವಾಗಿದ್ದೇನೆ. ಸರ್ವಪ್ರಾಣಿಗಳಿಗೂ ಸಾಮಾನ್ಯ ಆಹಾರವೆಂಬ ಔಷಧವೂ ನಾನೇ.

೫. **ಮಂತ್ರೋಽಹಮ್:** ನಾನೇ ವೇದಮಂತ್ರಗಳೂ ಆಗಿದ್ದೇನೆ. ಯಜ್ಞ ಯಾಗಾದಿಗಳಲ್ಲಿ ಹೇಳುವ ಮಂತ್ರವೂ ನಾನೇ ಆಗಿದ್ದೇನೆ.

೬. **ಅಹಮೇವ ಆಜ್ಯಂ:** ನಾನೇ ಆಜ್ಯವೂ ಆಗಿದ್ದೇನೆ. ದೇವತೆಗಳಿಗೆ ಕೊಡುವ ಹವಿಸ್ಸೂ ಕೂಡ ನಾನೇ.

೭. **ಅಹಮಗ್ನಿಃ:** ನಾನೇ ಅಗ್ನಿಯೂ ಆಗಿದ್ದೇನೆ. ಹವಿಸ್ಸನ್ನು ಯಾವ ಅಗ್ನಿಯಲ್ಲಿ ಹಾಕುತ್ತಾರೆಯೋ ಆ ಅಗ್ನಿಯೂ ನಾನೇ.

೮. **ಅಹಂ ಹುತಮ್:** ಹವನಕ್ರಿಯೆಯೂ ನಾನೇ.

ಶ್ರೀಕೃಷ್ಣನು ಇಲ್ಲಿ ಮತ್ತೆ ಮತ್ತೆ 'ಅಹಂ', 'ಅಹಂ'—ಎಂದು ಹೇಳಿಕೊಂಡು, ತನ್ನನ್ನೇ ಹೊಗಳಿಕೊಂಡಿದ್ದಾನೆ. ಆದ್ದರಿಂದ ಕೃಷ್ಣನಿಗೆ ಅಹಂಕಾರವಿದೆ ಎಂದು ತಿಳಿಯಬಾರದು. ಈ ಅಹಂಕಾರವು ಸರ್ವಾತ್ಮಭಾವರೂಪವಾಗಿದೆ ಎಂದು ತಿಳಿಯಬೇಕು. ಇದು ಬಂಧಕವಲ್ಲದ ಅವಿದ್ಯಾರಹಿತ ಅಹಂಕಾರ!

ಯಜ್ಞಯಾಗಾದಿ ಕರ್ಮಗಳೆಲ್ಲವೂ ಕೃಷ್ಣನೇ ಎಂದು ತಿಳಿಯಬೇಕು. ಇನ್ನು ಯಜಮಾನ, ಪತ್ನಿ, ಋತ್ವಿಜರು, ಬ್ರಹ್ಮಾ, ದೀಕ್ಷಾ—ಎಲ್ಲವೂ ಕೃಷ್ಣನೇ. ಕೃಷ್ಣನನ್ನು ಸರ್ವಯಜ್ಞಸ್ವರೂಪನೆಂದು ತಿಳಿಯಬೇಕು. ಇದು **'ಕೃಷ್ಣಕಂಡ ಕೃಷ್ಣ'**ನ ಮಾತು.

ಕೃಷ್ಣನನ್ನು ಯಜ್ಞಸ್ವರೂಪನೆಂದು ಭಾವಿಸಬೇಕು

24. ಜ್ಞಾನೀ ತ್ವಾತ್ಮೈವ ಮೇ ಮತಂ ; ಗೀತಾ ೭-೧೮

ಉದಾರಾಃ ಸರ್ವ ಏವೈತೇ ಜ್ಞಾನೀ ತ್ವಾತ್ಮೈವ ಮೇ ಮತಮ್।
ಆಸ್ಥಿತಃ ಸ ಹಿ ಯುಕ್ತಾತ್ಮಾ ಮಾಮೇವಾನುತ್ತಮಾಂ ಗತಿಮ್॥ ೭-೧೮

ಆರ್ತರು, ಜಿಜ್ಞಾಸುಗಳು, ಅರ್ಥಾರ್ಥಿಗಳು ಮತ್ತು ಬ್ರಹ್ಮಜ್ಞಾನಿ—ಇವರೆಲ್ಲರೂ ಉತ್ತಮರೇ. ಆದರೆ ಬ್ರಹ್ಮಜ್ಞಾನಿಯಾದರೋ ನನ್ನ ಸ್ವರೂಪನೇ ಎಂಬುದು ನನ್ನ ಅಭಿಪ್ರಾಯವು. ಏಕೆಂದರೆ ಅವನು ಯುಕ್ತಾತ್ಮನಾಗಿ ನನ್ನನ್ನೇ, ಅಂದರೆ ವೈಷ್ಣವಪದವೆಂಬ ಶ್ರೇಷ್ಠ ಗತಿಯನ್ನೇ ಹೊಂದಿರುತ್ತಾನೆ.

ಇಡೀ ಮಾನವರನ್ನು, ಭಗವದ್ಭಕ್ತರು ಮತ್ತು ವಿಷಯಭೋಗಾಸಕ್ತರು ಎಂದು ಎರಡಾಗಿ ವಿಂಗಡಿಸಬಹುದು. ಹೇಗಾದರೂ ಆಗಲಿ, ಭಗವಂತನ ಕಡೆಗೆ ತಿರುಗಿ ಭಗವಂತನ ಚಿಂತನೆಮಾಡುತ್ತಾ, ಭಗವಂತನನ್ನು ಆರಾಧಿಸುತ್ತಿರುವವರೆಲ್ಲರೂ ಭಗವದ್ಭಕ್ತರೇ. ಇವರು ಹಣಕ್ಕಾಗಿ, ಅಧಿಕಾರಕ್ಕಾಗಿ, ಕೀರ್ತಿಗಾಗಿ, ವಿದ್ಯೆಗಾಗಿ ಅಥವಾ ತಮ್ಮ ಇಷ್ಟಫಲಪ್ರಾಪ್ತಿಗಾಗಿ ಭಗವಂತನನ್ನು ಆಶ್ರಯಿಸಿರುವ ಭಕ್ತರುಗಳು. ಇವರು ನಿಷ್ಕಾಮರಾಗದೇ ಇರಬಹುದು, ಬ್ರಹ್ಮಜ್ಞಾನವನ್ನೇ ಬಯಸುವ ಮುಮುಕ್ಷುಗಳೂ ಆಗದಿರಬಹುದು; ಇನ್ನು ಬ್ರಹ್ಮಜ್ಞಾನಿಗಳಂತೂ ಆಗದೇ ಇರಬಹುದು. ಆದರೂ ಭಗವಂತನ ಕಡೆಗೆ ತಿರುಗಿರುವ ಮಹಾತ್ಮರಿವರು.

ಹೀಗಾಗಿ, **ಉದಾರಾಃ ಸರ್ವ ಏವೈತೇ**, ಇವರೆಲ್ಲರೂ ಶ್ರೇಷ್ಠರೇ. ಭಗವಂತನ ಭಕ್ತರೆಂದರೆ ಭಗವಂತನಿಗೆ ಅತ್ಯಂತ ಪ್ರಿಯರೇ ಆಗಿರುತ್ತಾರೆ. ಏಕೆಂದರೆ **ಭಕ್ತರು ಎಂದಮೇಲೆ ಅವರೆಲ್ಲರೂ ಭಕ್ತಿಯಿಂದ ಭಗವಂತನನ್ನು ಆರಾಧಿಸುವವರೇ ಅಲ್ಲವೇ? ಭಕ್ತರೂ ಆಗಿ ಭಗವಂತನಿಗೆ ಅಪ್ರಿಯರೂ ಆಗಿರುವವರು ಯಾರೂ ಇಲ್ಲ. ಆದರೂ, ಜ್ಞಾನೀ ತ್ವಾತ್ಮೈವ ಮೇ ಮತಂ; ಬ್ರಹ್ಮಜ್ಞಾನಿ ಭಕ್ತನಾದರೂ ನನಗೆ ತುಂಬಾ ತುಂಬಾ ಪ್ರಿಯನಾಗಿರುತ್ತಾನೆ.** ಏಕೆಂದರೆ ಇವನು ನನಗೆ ಆತ್ಮನೇ ಆಗಿದ್ದಾನೆ. ಕೃಷ್ಣನನ್ನು ತನ್ನ ಆತ್ಮನನ್ನಾಗಿ ತಿಳಿದವನೇ ಬ್ರಹ್ಮಜ್ಞಾನಿಯೆನಿಸುತ್ತಾನೆ. ತಾನೇ ಕೃಷ್ಣನೆಂದೂ, ಕೃಷ್ಣನೇ ತಾನೆಂದೂ ತಿಳಿದವನೇ ಬ್ರಹ್ಮಜ್ಞಾನಿಯೆನಿಸುತ್ತಾನೆ. ಕೃಷ್ಣನನ್ನು ಪರಬ್ರಹ್ಮಸ್ವರೂಪಿ ಎಂದು ತಿಳಿದ ಜ್ಞಾನಿಯು ಉತ್ತಮೋತ್ತಮ ಭಕ್ತನು ಎಂಬುದರಲ್ಲಿ ಸಂಶಯವಿಲ್ಲ. ಏಕೆಂದರೆ ಇವನು ಅದ್ವೈತಾತ್ಮಜ್ಞಾನಸಂಪನ್ನನಾದ ಭಕ್ತನು. ಹೀಗಾಗಿ ಎಲ್ಲಾ ಭಕ್ತರಿಗಿಂತಲೂ ಜ್ಞಾನಿಭಕ್ತನು ಅತ್ಯಂತ ಉತ್ತಮನು. ಮೇಲಾಗಿ 'ಜ್ಞಾನಿಯೆಂದರೆ ನಾನೇ' ಎಂಬುದು ನನ್ನ ಮತವು. ಬ್ರಹ್ಮಜ್ಞಾನಿಯು ನನ್ನನ್ನೇ ಹೊಂದುತ್ತಾನೆ. ನನ್ನಲ್ಲಿಯೇ ಸೇರಿಕೊಂಡು ನನ್ನಂತೆಯೇ ಅವನೂ ಬ್ರಹ್ಮವಾಗಿಬಿಟ್ಟಿರುತ್ತಾನೆ.

ಬ್ರಹ್ಮಜ್ಞಾನಿಯನ್ನು ಕೃಷ್ಣನ ಆತ್ಮನೆಂದು ತಿಳಿಯಬೇಕು

25. **ಮಯಾಧ್ಯಕ್ಷೇಣ ಪ್ರಕೃತಿಃ ಸೂಯತೇ ;** ಗೀತಾ ೯-೧೦

ಮಯಾಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಮ್।
ಹೇತುನಾನೇನ ಕೌಂತೇಯ ಜಗದ್ವಿಪರಿವರ್ತತೇ॥ ೯-೧೦

ಕೌಂತೇಯನೇ, ನನ್ನ ಅಧ್ಯಕ್ಷತೆಯಿರುವುದರಿಂದಲೇ ಪ್ರಕೃತಿಯು ಚರಾಚರಜಗತ್ತನ್ನು ಸೃಷ್ಟಿಸಿರುತ್ತದೆ. ಹೀಗಾಗಿ ನನ್ನ ಸಾಂನಿಧ್ಯದಿಂದಲೇ ಈ ವಿಶ್ವವೆಲ್ಲವೂ ಹುಟ್ಟುತ್ತಿದೆ.

ನನ್ನ ಅಧೀನವಾದ ಪ್ರಕೃತಿಗೆ ಹೆಸರು **'ಮಾಯಾ'** ಎಂದು. ಇದರಲ್ಲಿ ಸತ್ತ್ವ ರಜಸ್ ತಮಸ್ ಎಂಬ ಮೂರು ಗುಣಗಳಿವೆ. ಇದು ನನ್ನ ಅಪರಾ ಪ್ರಕೃತಿ. ಇನ್ನೊಂದು ಪರಾ ಪ್ರಕೃತಿ. ಇವನೇ ಹಿರಣ್ಯಗರ್ಭ. ಇದೂ ನನ್ನ ಅಧೀನವೇ ಆಗಿರುತ್ತದೆ. ಈ ಎರಡೂ ಪ್ರಕೃತಿಗಳಿಂದಲೇ ಈ ಸ್ಥಾವರಜಂಗಮಾತ್ಮಕವಾದ ಚೇತನಾಚೇತನಾತ್ಮಕವಾದ ಪ್ರಪಂಚವು ಹುಟ್ಟಿರುತ್ತದೆ.

ಆದರೆ, ಇದೆಲ್ಲವೂ **ಮಯಾಧ್ಯಕ್ಷೇಣ** ಎಂಬುದು ನೆನಪಿರಬೇಕು. **ನಾನಿರುವುದರಿಂದಲೇ, ನನ್ನ ಸಾಂನಿಧ್ಯದಿಂದಲೇ, ನನ್ನ ಅಧ್ಯಕ್ಷತೆಯಲ್ಲಿಯೇ ಈ ಪ್ರಕೃತಿಗಳು ಪ್ರಪಂಚವನ್ನು ಸೃಷ್ಟಿಸುತ್ತಿವೆಯೇ ಹೊರತು ಸ್ವತಂತ್ರವಾಗಿ ಅಲ್ಲ**; ಏಕೆಂದರೆ ಜಡವಾದ ಪ್ರಕೃತಿಗೆ ಸ್ವತಃ ಪ್ರಪಂಚವನ್ನು ಸೃಷ್ಟಿಸುವ ಸಾಮರ್ಥ್ಯವಿಲ್ಲ. **ಮಯಾ ಸರ್ವತೋ ದೃಶಿಮಾತ್ರಸ್ವರೂಪೇಣ ಅವಿಕ್ರಿಯಾತ್ಮನಾ; ದೃಶಿಕರ್ಮತ್ವಾಪತ್ತಿನಿಮಿತ್ತಾ ಹಿ ಜಗತಃ ಸರ್ವಾ ಪ್ರವೃತ್ತಿಃ** ಎಂದು ಶಾಂಕರ ಭಾಷ್ಯ. ಕಾಪಿಲಸಾಂಖ್ಯದರ್ಶನದ ಪ್ರಕಾರ ಪ್ರಕೃತಿಯು ಸ್ವತಂತ್ರವಾಗಿ ಜಗತ್ತನ್ನು ಸೃಷ್ಟಿಸುತ್ತದೆ, ಆದರೆ ವೇದಾಂತದ ಪ್ರಕಾರ ಈಶ್ವರಾಧೀನವಾಗಿಯೇ ಪ್ರಕೃತಿಯು ಜಗತ್ತಿಗೆ ಕಾರಣವಾಗಿರುತ್ತದೆ.

ನಾನು ದೃಕ್‌ಸ್ವರೂಪನಾಗಿದ್ದುಕೊಂಡು, ಅವಿಕ್ರಿಯಾತ್ಮನಾಗಿರುವುದರಿಂದಲೇ ಪ್ರಕೃತಿಯು ಸೃಷ್ಟಿಯನ್ನು ಮಾಡುತ್ತಿದೆ. ಹೀಗಾಗಿ ದೃಕ್‌ಸ್ವರೂಪನಾದ ನನ್ನಿಂದಲೇ ಈ ಪ್ರಕೃತಿಗಳು ಶಕ್ತಿಯನ್ನು ಪಡೆದುಕೊಂಡು ವಿಶ್ವವನ್ನೆಲ್ಲ ಸೃಷ್ಟಿ ಮಾಡುತ್ತವೆ. ನನ್ನ ದಿವ್ಯಭವ್ಯ ಸಾಂನಿಧ್ಯವಿಲ್ಲವಾದಲ್ಲಿ ಪ್ರಕೃತಿಯು ಏನನ್ನೂ ಮಾಡಲಾರದು. ಇದು ಸತ್ಯ, ಪರಮ ಸತ್ಯ! ಆದರೆ ಇದನ್ನು ಯಾರೂ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಏಕೆಂದರೆ **ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ,** ಅಜ್ಞಾನದಿಂದ ಮಾನವರ ಜ್ಞಾನವು ಮುಚ್ಚಿಹೋಗಿರುವುದರಿಂದ ಲೋಕದ ಜನಗಳಿಗೆ ಪರಮಾರ್ಥಸ್ವರೂಪವು ತಿಳಿಯದಂತಾಗಿದೆ. ಈ ಅಜ್ಞಾನವು ತೊಲಗಬೇಕಾದರೆ ಅಂಥವರು ನನ್ನನ್ನೇ ಭಜಿಸಬೇಕು, ಆರಾಧಿಸಬೇಕು. ಆಗ ಜನಗಳ ಅಜ್ಞಾನವು ದೂರವಾಗುತ್ತದೆ. ನಾನು ಮಾತ್ರ ನಿತ್ಯದೃಕ್‌ಸ್ವರೂಪನಾಗಿ ಅವಿಕಾರಿಯಾಗಿ ಕೂಟಸ್ಥನಾಗಿರುತ್ತೇನೆ.

ಕೃಷ್ಣನೆಂದರೆ ಜಗದಧ್ಯಕ್ಷನೆಂದು ತಿಳಿಯಬೇಕು

26. ನ ಮೇ ಪಾರ್ಥಾಸ್ತಿ ಕರ್ತವ್ಯಂ; ಗೀತಾ ೩-೨೨

ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ।
ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ॥ ೩-೨೨

ಪಾರ್ಥನೇ, ನನಗೆ ಕರ್ತವ್ಯವೆಂಬುದು ಮೂರೂ ಲೋಕಗಳಲ್ಲಿ ಕಿಂಚಿತ್ತೂ ಇಲ್ಲ; ನನಗೆ ಅನಾಪ್ತವಾಗಲೀ ಆಪ್ತವ್ಯವೆಂಬುದಾಗಲೀ ಏನೇನೂ ಇಲ್ಲ. ಆದರೂ ನಾನು ಕರ್ಮಗಳನ್ನು ಮಾಡುತ್ತಲೇ ಇದ್ದೇನಲ್ಲವೇ? ನೀನೇ ನೋಡು.

ಮನುಷ್ಯರಿಗಾದರೆ ಅಪ್ರಾಪ್ತ ವಸ್ತುಗಳೂ ಇವೆ, ಪ್ರಾಪ್ತವ್ಯ ಪದಾರ್ಥಗಳೂ ಸಾಕಷ್ಟಿವೆ. ಆದ್ದರಿಂದಲೇ ಪ್ರತಿಯೊಬ್ಬ ಮಾನವನೂ ಅಂಥ ಪ್ರಾಪ್ತವ್ಯ ವಸ್ತುಗಳನ್ನು ಪ್ರಾಪ್ತಿಮಾಡಿಕೊಳ್ಳುವುದಕ್ಕಾಗಿಯೇ ನೂರಾರು ಕರ್ಮಗಳನ್ನು ಮಾಡುತ್ತಾ ಇದ್ದಾನೆ. ಈ ಪ್ರಪಂಚದಲ್ಲಿ ಪ್ರತಿಯೊಬ್ಬನೂ ಕರ್ಮಗಳನ್ನು ಮಾಡುತ್ತಿರುವುದು ಏಕೆಂದರೆ, ಅನಾಪ್ತಗಳನ್ನೂ ಆಪ್ತವ್ಯಗಳನ್ನೂ ಪಡೆಯುವುದಕ್ಕಾಗಿಯೇ ಅಲ್ಲವೇ? ನನ್ನಲ್ಲಿ ಆ ವಸ್ತುವಿಲ್ಲ; ನನಗೆ ಈ ವಸ್ತು ಬೇಕು, ನನಗೆ ಅದು ಬೇಡ, ಎನ್ನುತ್ತಾ, ಈ ಹುಲ್ಲುಮಾನವನು ತನಗೆ ಇಷ್ಟಫಲಪ್ರಾಪ್ತಿಗಾಗಿಯೋ ಅನಿಷ್ಟಫಲಪರಿಹಾರಕ್ಕಾಗಿಯೋ ಹಗಲೂ ಇರುಳೂ ದುಡಿಯುತ್ತಾ ಇರುತ್ತಾನೆ. ಹೌದು, ಇದು ಮಾನವನ ಹಣೇಬರಹ, ಇವನ ಗ್ರಹಚಾರವಿದು!

ಆದರೆ ಕೃಷ್ಣನು, ಮಾನವನೇ ಅಲ್ಲವಲ್ಲ; ಆದ್ದರಿಂದ ಅವನ ಕರ್ಮಗಳನ್ನು ನಮ್ಮ ಕರ್ಮಗಳಂತೆ ಎಂದು ಎಣಿಸಬಾರದು. ಏಕೆಂದರೆ ಅವನು ಭಗವಂತ! ಮನುಷ್ಯರಿಗೆ ಈ ಲೋಕದ ವ್ಯವಹಾರಗಳು ಮಾತ್ರ; ಆದರೆ ಕೃಷ್ಣ ಹೇಳುತ್ತಾನೆ, ನನಗೆ ಮೂರೂ ಲೋಕಗಳಲ್ಲಿ ಕರ್ತವ್ಯಗಳಿಲ್ಲ ಎಂದು. ಏಕೆಂದರೆ ಪರಿಪೂರ್ಣನಾದ, ನಿತ್ಯಸಂತೃಪ್ತನಾದ ಭಗವಂತನಿಗೆ ಮೂರೂ ಲೋಕಗಳಲ್ಲಿ—ಸ್ವರ್ಗ ಮರ್ತ್ಯ ಪಾತಾಳಲೋಕಗಳಲ್ಲಿ ಮಾಡಬೇಕಾದದ್ದೆಂಬುದು ಏನೇನೂ ಇಲ್ಲ. ಇದೇ ಭಗವಂತನ ಮಹಿಮೆ, ಭಗವಂತನಿಗೂ ಮಾನವರಿಗೂ ಇರುವ ವ್ಯತ್ಯಾಸವಿಷ್ಟೇ!

ನನಗೆ ಅನಾಪ್ತವಾದದ್ದು ಯಾವುದೂ ಇಲ್ಲ, ಎಂದರೆ ಸರ್ವಾತ್ಮಕನಾದ ಭಗವಂತನೇ ಇಡೀ ವಿಶ್ವವಾಗಿರುವಾಗ ಅವನಿಗೆ ಇದು ಅನವಾಪ್ತವಾಗಿದೆ ಎಂದು ಹೇಳಲಾಗುವುದಿಲ್ಲ. ಇನ್ನು ಕೃಷ್ಣನಿಗೆ ಆಪ್ತವ್ಯವೆಂಬ, ಅಂದರೆ ಪಡೆಯಬೇಕಾಗಿರುವ ಯಾವ ವಸ್ತುಗಳೂ ಇಲ್ಲ. ಹೀಗೆ ಪರಿಪೂರ್ಣನೂ, ಆಪ್ತಕಾಮನೂ, ಸರ್ವವೂ ಆಗಿರುವ ಭಗವಂತನೇ ಕೃಷ್ಣ ಎಂಬುದನ್ನು ಇಲ್ಲಿ ಕೃಷ್ಣಕಂಡ ಕೃಷ್ಣನೇ ಹೇಳಿದ್ದಾನೆ. ಇದಕ್ಕೆ ಯಾರ ವ್ಯಾಖ್ಯಾನವೂ ಬೇಕಾಗಿಲ್ಲ. ಇದು **'ಕೃಷ್ಣಕಂಡ ಕೃಷ್ಣ'**ನ ನಿಜಸ್ವರೂಪವಾಗಿರುತ್ತದೆ.

ಕೃಷ್ಣನನ್ನು ಪರಿಪೂರ್ಣನೆಂದೂ ಕೃತಕೃತ್ಯನೆಂದೂ ತಿಳಿಯಬೇಕು

27. ಯೋಗಕ್ಷೇಮಂ ವಹಾಮ್ಯಹಮ್; ಗೀತಾ ೯-೨೨

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್॥

೯-೨೨

ಯಾರು ಅನನ್ಯರಾಗಿ ನನ್ನನ್ನೇ ಚಿಂತಿಸುತ್ತಾ, ನನ್ನನ್ನೇ ಉಪಾಸನೆ ಮಾಡುತ್ತಿರುತ್ತಾರೋ, ನಿತ್ಯಾಭಿಯುಕ್ತರಾದ ಅಂಥವರ ಯೋಗಕ್ಷೇಮವನ್ನು ನಾನು ವಹಿಸುತ್ತೇನೆ.

ಯೋಗಕ್ಷೇಮಂ ವಹಾಮ್ಯಹಮ್; ಅರ್ಜುನನೆ, ಇದು ನನ್ನ ಧೀರ ಸತ್ಯ ಪ್ರತಿಜ್ಞೆ! ನನ್ನ ಭಕ್ತರನ್ನು ಕಾಪಾಡುವ ಜವಾಬ್ದಾರಿ ನನ್ನದು! ನನ್ನ ಭಕ್ತರ ಯೋಗಕ್ಷೇಮವನ್ನು ನಾನೇ ನೋಡಿಕೊಳ್ಳುತ್ತೇನೆ. ನನ್ನ ಭಕ್ತರಿಗೆ ಯಾವ ರೀತಿ ಯಲ್ಲಿಯೂ ತೊಂದರೆಯಾಗದಂತೆ ಅವರನ್ನು ನಾನು ರಕ್ಷಿಸುತ್ತೇನೆ ಎಂದು **'ಕೃಷ್ಣಕಂಡ ಕೃಷ್ಣ'ನು ಹೇಳಿರುತ್ತಾನೆ. ಇದು ಭಕ್ತರಿಗೆ ಎಂಥಾ ದಿವ್ಯ ಮಂತ್ರ, ಬೀಜ ಮಂತ್ರ, ಆಧಾರ ಮೂಲ ಮಂತ್ರ, ಪವಿತ್ರ ಮಂತ್ರ, ಧೈರ್ಯ ಮಂತ್ರ! ನಾವು ಭಕ್ತರಾಗಿ ಭಗವಂತನನ್ನು ನಂಬಿಕೊಂಡು ಭಗವಂತನನ್ನೇ ಶ್ರದ್ಧಾ ಆದರಗಳಿಂದ ಆರಾಧಿಸುತ್ತಾ ಬಂದರೆ, ಅಲ್ಲಿಗೆ ನಮ್ಮ ಕೆಲಸ ಮುಗಿಯಿತು. ಮುಂದಿನ ಜವಾಬ್ದಾರಿಕರ್ತವ್ಯವೆಲ್ಲ ಭಗವಂತನಿಗೇ ಸೇರಿದ್ದು.**

ಸರಿ, ಭಕ್ತರು ಎಂದರೆ ಯಾರು? ಅವರ ಲಕ್ಷಣಗಳೇನು? ಎಂದರೆ, **ಅನನ್ಯಾಃ ಚಿಂತಯಂತಃ, ನಿತ್ಯಾಭಿಯುಕ್ತಾಃ:** ಭಗವಂತನ ಭಕ್ತರು ಎಂದರೆ ವಾರಕ್ಕೊಂದು ದಿನ, ಪ್ರತಿ ಶನಿವಾರದ ದಿನ, ಪ್ರತಿ ಪೂರ್ಣಿಮಾ ತಿಥಿಯಂದು, ಆರು ತಿಂಗಳಿಗೊಮ್ಮೆ, ವರ್ಷಕ್ಕೊಮ್ಮೆ ಅಂತ ಅಲ್ಲ. ಮತ್ತೇನೆಂದರೆ **ಅನನ್ಯರಾಗಿ** ಚಿಂತಿಸುತ್ತಿರಬೇಕು. ಉಸಿರಾಟವು ನಿತ್ಯವಾಗಿ ಸಹಜವಾಗಿರುವಂತೆ ಭಕ್ತಿಯು ಸಹಜವಾಗಿ ಅನನ್ಯವಾಗಿರಬೇಕು. **'ಸಂಕಟ ಬಂದಾಗ ವೆಂಕಟರಮಣ'** ಅಲ್ಲ. ಯಾವಾಗಲೂ ವೆಂಕಟರಮಣನಲ್ಲಿ ಭಕ್ತಿಯು ಇರಬೇಕು.

ಇಂಥವರು ಸರ್ವಸಂಗಪರಿತ್ಯಾಗಿಗಳಾದ ಸಂನ್ಯಾಸಿಗಳೇ ಆಗಿರಬೇಕು. **ಸಂನ್ಯಾಸಿನಾಂ ಪರಮಾರ್ಥದರ್ಶಿನಾಂ ಸತತಾಭಿಯುಕ್ತಾನಾಂ** ಎಂದು ಶಾಂಕರ ಭಾಷ್ಯ. ಎಲ್ಲಾ ಲೌಕಿಕ ವ್ಯವಹಾರಗಳನ್ನೂ ಸಂಪೂರ್ಣವಾಗಿ ಬಿಟ್ಟು ಯಾವಾ ಗಲೂ ಅಂತರ್ಮುಖಿಗಳಾಗಿ ವೇದಾಂತಚಿಂತನತತ್ಪರರಾದ ಪರಮಾರ್ಥದರ್ಶಿ ಗಳಾದ ಸಂನ್ಯಾಸಿಗಳ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುತ್ತೇನೆ. ಇದು ನನ್ನ ಕರ್ತವ್ಯ! ನನ್ನ ಸೌಭಾಗ್ಯ, ನನ್ನ ಅದೃಷ್ಟ! ನನ್ನ ಭಕ್ತರ ಯೋಗಕ್ಷೇಮವನ್ನು ನೋಡಿಕೊಳ್ಳುವುದಕ್ಕಿಂತ ಹೆಚ್ಚಿನ ಸೌಭಾಗ್ಯ, ಹೆಚ್ಚಿನ ಆನಂದವು ಬೇರೆಯಿಲ್ಲ!

ಅನನ್ಯಭಕ್ತರನ್ನು ಕಾಪಾಡುವ ಸರ್ವಶಕ್ತನೆಂದು ಕೃಷ್ಣನನ್ನು ತಿಳಿಯಬೇಕು

28. ಜಗತ್ ನಾಭಿಜಾನಾತಿ ಮಾಮ್; ಗೀತಾ ೭-೧೩

ತ್ರಿಭಿರ್ಗುಣಮಯೈರ್ಭಾವೈಃ ಏಭಿಃ ಸರ್ವಮಿದಂ ಜಗತ್।
ಮೋಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಮ್॥ ೭-೧೩

ಈ ಜಗತ್ತೆಲ್ಲವೂ ಮೂರು ಗುಣಗಳಿಂದ ಕೂಡಿದ ಪ್ರಕೃತಿಮಾಯೆಯಿಂದ ಮೋಹಿತವಾಗಿದೆ. ಆದ್ದರಿಂದ, ಅರ್ಜುನನೇ, ನನ್ನನ್ನು ಈ ಗುಣಗಳನ್ನು ಮೀರಿರುವ ಪರಬ್ರಹ್ಮವೆಂದೂ, ಅವಿನಾಶಿಯಾದ ಪರಮಾತ್ಮನೆಂದೂ ಲೋಕವು ಅರಿಯಲಾಗುತ್ತಿಲ್ಲ.

ನಾನು ಪರಮೇಶ್ವರನೂ ಸರ್ವಭೂತಾತ್ಮನೂ ಆಗಿದ್ದರೂ, ಅರ್ಜುನನೇ, ನನ್ನನ್ನು ಜನಗಳು, ಸರಿಯಾಗಿ ತಿಳಿದುಕೊಳ್ಳುತ್ತಿಲ್ಲ ಎಂದು ಭಗವಂತನು ಅನುಕಂಪೆಯನ್ನು ಈ ಶ್ಲೋಕದಲ್ಲಿ ತೋರಿಸುತ್ತಿದ್ದಾನೆ. **ಏವಂಭೂತಮಪಿ ಪರಮೇಶ್ವರಂ ನಿತ್ಯಶುದ್ಧಬುದ್ಧಮುಕ್ತಸ್ವಭಾವಂ ಸರ್ವಭೂತಾತ್ಮಾನಮಪಿ ನಿರ್ಗುಣಂ ಸಂಸಾರದೋಷಬೀಜಪ್ರದಾಹಕಾರಣಂ ಮಾಂ ನಾಭಿಜಾನಾತಿ ಜಗತ್ ಇತಿ ಅನುಕ್ರೋಶಂ ದರ್ಶಯತಿ ಭಗವಾನ್। ತಚ್ಚ ಕಿಂನಿಮಿತ್ತಂ ಜಗತಃ ಅಜ್ಞಾನಮಿತಿ ಶ್ರೀಭಗವಾನುವಾಚ** ಎಂದು ಈ ಶ್ಲೋಕಕ್ಕೆ ಶ್ರೀಶಂಕರರು ಅವತರಣಿಕೆಯನ್ನು ಬರೆದಿದ್ದಾರೆ.

ನನ್ನನ್ನು ಭಗವಂತನೆಂದು ಜನಗಳು ತಿಳಿಯದಿರುವುದಕ್ಕೆ ಕಾರಣವೇನು? ಎಂದರೆ, ಮಾಯೆಯಿಂದ ಆವೃತರಾಗಿರುವುದರಿಂದ. ನಾನು ಪರಮೇಶ್ವರನಾಗಿ ಎಲ್ಲಾ ಮಾನವರಿಗೂ, ಪ್ರಾಣಿಗಳಿಗೂ ಆತ್ಮನೇ ಆಗಿದ್ದರೂ ಅವಿದ್ಯಾಮಾಯಾಚ್ಛನ್ನವಾಗಿರುವುದರಿಂದ ನನ್ನ ನಿಜಸ್ವರೂಪವನ್ನು ಲೋಕವು ಅರಿಯದಂತಾಗಿರುತ್ತದೆ. ಮಾಯಾ ಎಂದರೆ ಅವಿದ್ಯಾ, ಅವಿದ್ಯಾ ಎಂದರೆ ಅಜ್ಞಾನ; ಅಜ್ಞಾನದಿಂದಲೇ ಮೋಹಿತರಾಗಿ ಜನಗಳು ನನ್ನನ್ನು ಭಗವಂತನೆಂದು ತಿಳಿಯದಂತಾಗಿದೆ. ನನ್ನನ್ನೇ ಆಶ್ರಯಿಸಿದವರಿಗೆ, ನನ್ನ ಭಕ್ತರಿಗೆ ಈ ಅವಿದ್ಯಾಮಾಯೆಯು ದೂರವಾಗುತ್ತದೆ. ಅವಿದ್ಯೆಯನ್ನು ಕಳಚಿಕೊಂಡು ಬ್ರಹ್ಮಜ್ಞಾನಿಗಳಾಗಿಬಿಟ್ಟರೆ ಅಂಥವರಿಗೆ ನನ್ನ ನಿಜಸ್ವರೂಪವು ತಿಳಿಯುತ್ತದೆ.

ಸರಿ, ಹಾಗಾದರೆ, ಕೃಷ್ಣನೇ, ನಿನ್ನ ನಿಜಸ್ವರೂಪವಾದರೂ ಹೇಗಿದೆ? ಎಂದರೆ, **ಮಾಮ್ ಏಭ್ಯಃ ಪರಮ್ ಅವ್ಯಯಮ್**, ನಾನು ಈ ತ್ರಿಗುಣಗಳಿಂದ ವಿಲಕ್ಷಣನೂ, ಭಿನ್ನನೂ ಆಗಿರುತ್ತೇನೆ. ಪ್ರಕೃತಿಯೆಂಬ ಮಾಯೆಯನ್ನು ಮೀರಿ ನಾನು ನಿತ್ಯಶುದ್ಧ ನಿತ್ಯಬುದ್ಧ ನಿತ್ಯಮುಕ್ತ ಸಚ್ಚಿದಾನಂದಸ್ವರೂಪನೇ ಆಗಿರುತ್ತೇನೆ. ನಾನು ಅಜನೂ, ಅಮೃತನೂ, ಅವ್ಯಯನೂ, ನಿರುಪಾಧಿಕನೂ ಆದ ಆತ್ಮನೇ ಆಗಿದ್ದೇನೆ. ನನ್ನ ಭಕ್ತರಿಗೆ ಮಾತ್ರವೇ ನನ್ನ ನಿಜಸ್ವರೂಪವು ತಿಳಿಯುತ್ತದೆ.

ಮಾಯಾಮೋಹವನ್ನು ಮೀರಿ ಸಾಧಕರು ಕೃಷ್ಣನನ್ನು ತಿಳಿಯಬೇಕು

29. ಯೋಗಂ ಪ್ರೋಕ್ತವಾನಹಮ್; ಗೀತಾ ೪-೧

ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನಹಮವ್ಯಯಮ್।
ವಿವಸ್ವಾನ್ ಮನವೇ ಪ್ರಾಹ ಮನುರಿಕ್ಷ್ವಾಕವೇಽಬ್ರವೀತ್॥ ೪-೧

ಸ ಏವಾಯಂ ಮಯಾ ತೇಽದ್ಯ ಯೋಗಃ ಪ್ರೋಕ್ತಃ ಪುರಾತನಃ।
ಭಕ್ತೋಽಸಿ ಮೇ ಸಖಾ ಚೇತಿ ರಹಸ್ಯಂ ಹ್ಯೇತದುತ್ತಮಮ್॥ ೪-೩

ಅರ್ಜುನನೇ, ಸಮ್ಯಗ್ದರ್ಶನವೆಂಬ ಈ ಆತ್ಮಜ್ಞಾನಯೋಗವನ್ನು ನಾನೇ ಸೃಷ್ಟಿಯ ಪ್ರಾರಂಭದಲ್ಲಿ ಸೂರ್ಯನಾರಾಯಣನಿಗೆ ಉಪದೇಶಮಾಡಿದೆನು. ಸೂರ್ಯನು ಮನುವಿಗೂ, ಮನುವು ಇಕ್ಷ್ವಾಕುರಾಜನಿಗೂ ಉಪದೇಶಿಸಿದರು. ಅದೇ ಸಮ್ಯಗ್ದರ್ಶನ ಯೋಗವನ್ನು ನಾನೀಗ ನಿನಗೆ ಉಪದೇಶಮಾಡುತ್ತಿದ್ದೇನೆ. ಏಕೆಂದರೆ ನೀನು ನನ್ನ ಭಕ್ತನೂ ಸ್ನೇಹಿತನೂ ಆಗಿ ನನಗೆ ತುಂಬಾ ಪ್ರಿಯನಾಗಿದ್ದೀಯೆ. ಈ ಯೋಗವು ಅವ್ಯಯವೂ ಅತ್ಯಂತ ರಹಸ್ಯವೂ ಆಗಿರುತ್ತದೆ.

ಇದು **'ಕೃಷ್ಣಕಂಡ ಕೃಷ್ಣ'**ನ ನಿಜಸ್ವರೂಪ. ಇಲ್ಲಿ 'ಯೋಗ' ಎಂದರೆ ಜ್ಞಾನನಿಷ್ಠಾಲಕ್ಷಣವಾದ ಸಮ್ಯಗ್ಜ್ಞಾನವು. **ಜ್ಞಾನನಿಷ್ಠಾಲಕ್ಷಣಃ ಸಸಂನ್ಯಾಸಃ ಕರ್ಮಯೋಗೋಪಾಯಃ** ಎಂದು ಶಾಂಕರಭಾಷ್ಯ. ಕರ್ಮಯೋಗವನ್ನು ಉಪಾಯವನ್ನಾಗಿ ಉಳ್ಳ ಸಂನ್ಯಾಸಸಹಿತವಾದ ಈ ಯೋಗವು ಜ್ಞಾನನಿಷ್ಠಾರೂಪ ವಾದದ್ದು. ಇಂಥ ಆತ್ಮಜ್ಞಾನವೆಂಬ ಯೋಗವನ್ನು ಸೃಷ್ಟಿಯ ಪ್ರಾರಂಭದಲ್ಲಿ ನಾನೇ ಸೂರ್ಯಭಗವಂತನಿಗೆ ಉಪದೇಶಿಸಿದ್ದೇನೆ ಎಂದು ಕೃಷ್ಣನು ಹೇಳುತ್ತಿದ್ದಾನೆ. ಸೂರ್ಯನೆಂದರೆ ಹಿರಣ್ಯಗರ್ಭಬ್ರಹ್ಮ, ಇವನೇ ಪ್ರಪ್ರಥಮಶರೀರೀ ಆತ್ಮಾ. ಇವನೇ ಆದಿಪುರುಷ, ಆಧಿಕಾರಿಕಪುರುಷನು. ಇವನಿಗೆ ಆತ್ಮಜ್ಞಾನವನ್ನು ಮೊಟ್ಟ ಮೊದಲಿಗೆ ಉಪದೇಶಿಸಿದ ಆದಿಗುರುವೇ ನಾನು. **ಇದರಿಂದ ಕೃಷ್ಣನ ನಿಜ ಸ್ವರೂಪವೇನೆಂಬುದನ್ನು ಕೃಷ್ಣನೇ ನಮಗೆ ಹೇಳಿದಂತಾಯಿತಲ್ಲವೇ**?

ವಿವಸ್ವಂತ ಸೂರ್ಯನಿಂದ ಈ ಬ್ರಹ್ಮವಿದ್ಯಾಪರಂಪರೆಯು ಪ್ರಾರಂಭ ಗೊಂಡು ಇಂದಿನವರೆಗೂ ಮುಂದುವರಿಯುತ್ತಾ ಬಂದಿರುತ್ತದೆ. ಅದೇ ಬ್ರಹ್ಮ ವಿದ್ಯೆಯೆಂಬ ಯೋಗವನ್ನು, ಅರ್ಜುನನೇ, ನಾನೀಗ ನಿನಗೆ ಮತ್ತೆ ಉಪದೇಶಿಸಿರು ತ್ತೇನೆ. **'ಸೂರ್ಯನಿಗೆ ಉಪದೇಶಿಸಿದ ಆ ನಾನೇ ಈಗ ನಿನಗೂ ಉಪದೇಶಿ ಸಿರುತ್ತೇನೆ'** ಎಂದು ಕೃಷ್ಣನೇ ಹೇಳಿರುವುದರಿಂದ **ಕೃಷ್ಣನೆಂದರೆ ಅಜರಾಮರನಾದ ಭಗವಂತನೆಂದೇ ತಿಳಿಯಬೇಕು**. ಈ ಯೋಗವು ಅವ್ಯಯವಾಗಿದೆ, ನಾಶವಿಲ್ಲ ದ್ದಾಗಿದೆ. ನಾಶವಿಲ್ಲದ ಮೋಕ್ಷಪ್ರಾಪ್ತಿಗೆ ಇದು ಸಾಧನವಾಗಿದೆ. ಇದನ್ನು ಅತ್ಯಂತ ಪ್ರಿಯನಾದ ನಿನಗೆ ನಾನು ಉಪದೇಶಿಸಿದ್ದೇನೆ.

ಶ್ರೀಕೃಷ್ಣನನ್ನು ಪ್ರಪ್ರಥಮ ವೇದಾಂತಾಚಾರ್ಯನೆಂದು ತಿಳಿಯಬೇಕು

30. ಮೂಢಾಃ ಮಾಂ ನ ಪ್ರಪದ್ಯಂತೇ; ಗೀತಾ ೭-೧೫

ನ ಮಾಂ ದುಷ್ಕೃತಿನೋ ಮೂಢಾಃ ಪ್ರಪದ್ಯಂತೇ ನರಾಧಮಾಃ।
ಮಾಯಯಾಽಪಹೃತಜ್ಞಾನಾಃ ಆಸುರಂ ಭಾವಮಾಶ್ರಿತಾಃ॥ ೭-೧೫

ಮಾಯಾಶಕ್ತಿಯಿಂದ ಅಪಹರಿಸಲ್ಪಟ್ಟ ವಿವೇಕಜ್ಞಾನವುಳ್ಳವರಾಗಿ ಆಸುರಭಾವದಿಂದ ಮೆರೆಯುತ್ತಿರುವ, ದುಷ್ಟರಾದ ಮೂಢರು, ನರಾಧಮರು, ಅರ್ಜುನನೇ, ನನ್ನನ್ನು ಭಜಿಸುವುದೂ ಇಲ್ಲ, ನನ್ನನ್ನು ಹೊಂದುವುದೂ ಇಲ್ಲ.

ಕೃಷ್ಣನೇ, ನಿನ್ನ ಭಕ್ತರಾಗಿ ನಿನ್ನನ್ನೇ ಪ್ರಪನ್ನರಾದರೆ ಅಂಥವರು ಸುಲಭವಾಗಿ ಮಾಯೆಯನ್ನು ದಾಟಿಬಿಡುತ್ತಾರೆ, ಕೃತಕೃತ್ಯರಾಗಿ, ಬ್ರಹ್ಮಜ್ಞಾನಿಗಳೂ ಆಗಿ ಜೀವನ್ಮುಕ್ತರೇ ಆಗಿಬಿಡುತ್ತಾರೆ ಎಂದಾದರೆ, ಎಲ್ಲಾ ಸಾಧಕರುಗಳೂ ಏಕೆ, ನಿನ್ನನ್ನೇ ಭಜಿಸುತ್ತಿಲ್ಲ? ಎಲ್ಲರೂ ಏಕೆ, ನಿನ್ನ ನಿಜಸ್ವರೂಪವನ್ನೇ ತಿಳಿದುಕೊಂಡು ಬ್ರಹ್ಮ ಜ್ಞಾನಿಗಳೂ ಆಗುತ್ತಿಲ್ಲ? ಎಂಬ ಪ್ರಶ್ನೆಗೆ ಈ ಶ್ಲೋಕದಲ್ಲಿ **ಕೃಷ್ಣಕಂಡ ಕೃಷ್ಣನೇ** ಸುಂದರವಾದ ಉತ್ತರವನ್ನು ಕೊಡುತ್ತಿದ್ದಾನೆ:

ಮಾಯಯಾಽಪಹೃತಜ್ಞಾನಾಃ ದುಷ್ಕೃತಿನಃ ಮೂಢಾಃ ನರಾಧಮಾಃ ಜನಾಃ ಆಸುರಂ ಭಾವಮಾಶ್ರಿತಾಃ ಸಂತಃ ಮಾಂ ನ ಪ್ರಪದ್ಯಂತೇ.

ನರಾಧಮರಾದ ಮೂಢರು ನನ್ನನ್ನು ಶರಣುಹೊಂದುವುದಿಲ್ಲ. ಏಕೆಂದರೆ ಅವರುಗಳು ಪುಣ್ಯಕರ್ಮಿಗಳಲ್ಲ, ಮತ್ತೇನೆಂದರೆ ದುಷ್ಟಕರ್ಮಿಗಳು, ಎಂದರೆ ಪಾಪಕರ್ಮಿಗಳು. ಅಹಂಕಾರ, ಬಲ, ದರ್ಪ, ಕಾಮ, ಕ್ರೋಧ, ಪರಿಗ್ರಹಗಳಿಂದ ಮೆರೆಯುತ್ತಿರುವ ಇವರು ನರರಲ್ಲ, ಮತ್ತೇನೆಂದರೆ ನರಾಧಮರು. ನರರಲ್ಲಿ ಅತ್ಯಂತ ಅಧಮರಿವರು! ಏಕೆಂದರೆ ಇವರಲ್ಲಿ ಶಮ, ದಮ, ಭಕ್ತಿ, ತ್ಯಾಗ, ಪ್ರೀತಿ, ಅಹಿಂಸಾ, ದಾನ, ಧರ್ಮ, ಯಜ್ಞ, ಯಾಗಾದಿರೂಪವಾದ ನರರ ಧರ್ಮಗಳು ಒಂದೂ ಇಲ್ಲ. ಹೆಸರಿಗೆ ಮಾತ್ರ ನರರು, ಆದರೆ ಜೀವನಕ್ರಮವೆಲ್ಲ ಅಸುರರಂತೆ. ಹೀಗಾಗಿ ಇವರು ನರಾಧಮರಲ್ಲವೇ?

ಇವರಿಗೆ ಮಾಯಾಶಕ್ತಿಯ ಸೆಳೆತ ಜೋರಾಗಿದೆ. ಅವಿದ್ಯಾಶಕ್ತಿಯಿಂದ ಕಟ್ಟಲ್ಪಟ್ಟವರಾಗಿ, ಇವರು ಆಸುರಭಾವವನ್ನು ಆಶ್ರಯಿಸಿಕೊಂಡಿರುತ್ತಾರೆ. ಇವರ ವಿವೇಕಜ್ಞಾನವನ್ನು ಅವಿದ್ಯಾಮಾಯಾಶಕ್ತಿಯು ನಾಶಮಾಡಿಬಿಟ್ಟಿರುತ್ತದೆ. ಹೀಗಾಗಿ ಇಂಥವರು ನನ್ನನ್ನು ಭಜಿಸುತ್ತಲೂ ಇಲ್ಲ, ನನ್ನ ನಿಜಸ್ವರೂಪವನ್ನು ತಿಳಿಯುತ್ತಲೂ ಇಲ್ಲ ; ಹೀಗಾಗಿ ಇಂಥ ಮೂಢರು ನನ್ನನ್ನು ಹೊಂದುವುದಂತೂ ಇಲ್ಲವೇ ಇಲ್ಲ! ನನ್ನ ಮಾಯೆಯು ಇವರನ್ನು ಆವರಿಸಿರುತ್ತದೆ!

ಮೂಢರು ಕೃಷ್ಣನ ನಿಜಸ್ವರೂಪವನ್ನು ಅರಿಯಲಾರರು

31. ಮಯಾ ತತಮಿದಂ ಸರ್ವಂ ಜಗತ್; ಗೀತಾ ೯-೪

ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ।
ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ॥ ೯-೪

ಅವ್ಯಕ್ತಮೂರ್ತಿಯಾದ ನನ್ನಿಂದಲೇ ಈ ಜಗತ್ತೆಲ್ಲವೂ ವ್ಯಾಪಿಸಲ್ಪಟ್ಟಿದೆ. ಆದ್ದರಿಂದ ಎಲ್ಲಾ ಭೂತಗಳೂ ನನ್ನಲ್ಲಿಯೇ ಆಶ್ರಿತವಾಗಿರುತ್ತವೆ. ಆದರೆ ನಾನು ಮಾತ್ರ ಆ ಭೂತಗಳಿಗೆ ಅಧೀನವಾಗಿ ಅಂಟುಕೊಂಡಿರುವುದಿಲ್ಲ.

ಚರಾಚರಾತ್ಮಕವಾಗಿರುವ ಈ ವಿಶ್ವವನ್ನೆಲ್ಲ ಸಂಪೂರ್ಣವಾಗಿ ನಾನೇ ವ್ಯಾಪಿಸಿರುತ್ತೇನೆ. ಹೇಗೆ? ಎಂದರೆ ಅವ್ಯಕ್ತಮೂರ್ತಿಯಿಂದ. **ನ ವ್ಯಕ್ತಾ ಮೂರ್ತಿಃ ಸ್ವರೂಪಂ ಯಸ್ಯ ಮಮ ಸೋಽಹಮ್ ಅವ್ಯಕ್ತಮೂರ್ತಿಃ, ತೇನ ಅವ್ಯಕ್ತ ಮೂರ್ತಿನಾ, ಕರಣಾಗೋಚರಸ್ವರೂಪೇಣ ಇತ್ಯರ್ಥಃ** ಎಂದು ಶಾಂಕರಭಾಷ್ಯ. ಇಂದ್ರಿಯಗಳಿಗೆ ಗೋಚರವಾಗದ ಸೂಕ್ಷ್ಮರೂಪದಿಂದ ನಾನು ಇಡೀ ಪ್ರಪಂಚ ವನ್ನೆಲ್ಲ ವ್ಯಾಪಿಸಿರುತ್ತೇನೆ ಎಂದು **ಕೃಷ್ಣಕಂಡ ಕೃಷ್ಣನೇ** ಇಲ್ಲಿ ಹೇಳಿದ್ದಾನೆ. ಇದಕ್ಕೆಲ್ಲ ಪ್ರಮಾಣವೇನು? ಎಂದರೆ, ಕೃಷ್ಣನ ಮಾತೇ ನಮಗೆ ಪ್ರಮಾಣ!

ಆಕಾಶವು ಈ ವಿಶ್ವವನ್ನೆಲ್ಲ ವ್ಯಾಪಿಸಿದೆಯಲ್ಲವೇ? ಹೌದು, ಆದರೆ ಇದನ್ನು ಯಾರಾದರೂ ಕಣ್ಣುಗಳಿಂದ ನೋಡಬಹುದೇ? ನೋಡಿದ್ದಾರೆಯೇ? ಎಂದರೆ, ಯಾರೂ ನೋಡಿಲ್ಲ. ಅಂದಮಾತ್ರಕ್ಕೆ ಆಕಾಶವು ಎಲ್ಲವನ್ನೂ ವ್ಯಾಪಿಸಿರುವುದು ಸುಳ್ಳೇ? ಖಂಡಿತಾ ಅಲ್ಲ; ಇನ್ನು ಆಕಾಶಕ್ಕೂ ಕಾರಣನಾಗಿ, ಆಕಾಶಕ್ಕಿಂತಲೂ ಸೂಕ್ಷ್ಮನಾಗಿ, ಆಕಾಶಕ್ಕೂ ಪ್ರತ್ಯಗಾತ್ಮನಾಗಿರುವ ಭಗವಂತನನ್ನು ಯಾರೊಬ್ಬರೂ ಈ ಸ್ಥೂಲವಾದ ಕಣ್ಣುಗಳಿಂದ ನೋಡಲಾರರು. ಇದೇ ನನ್ನ ಅವ್ಯಕ್ತಸ್ವರೂಪ!

ಹೀಗಾಗಿ, **ಮತ್ಸ್ಥಾನಿ ಸರ್ವಭೂತಾನಿ,** ಎಲ್ಲ ವಸ್ತುಗಳೂ ನನ್ನಲ್ಲಿಯೇ ಇವೆ. ನಾನೇ ಈ ವಿಶ್ವಕ್ಕೆಲ್ಲ ಆತ್ಮನಾಗಿರುತ್ತೇನೆ, ಪ್ರತ್ಯಗಾತ್ಮನೂ ಆಗಿರುತ್ತೇನೆ, ಸ್ವರೂಪವಾಗಿರುತ್ತೇನೆ, ನಾನೇ ತಿರುಳು! ನಾನೇ ಸಾರವಾಗಿರುತ್ತೇನೆ. ನಾನಿಲ್ಲದೇ ಹೋದರೆ ಈ ಜಗತ್ತು ನಿರಾತ್ಮಕವಾಗಿಬಿಡುತ್ತದೆ. ನಾನಿರುವುದರಿಂದಲೇ, ಈ ಜಗತ್ತಿಗೆ ಅಸ್ತಿತ್ವವಿದೆ ಎಂದು ತಿಳಿ. ಸರ್ವಭೂತಾನಿ **ಬ್ರಹ್ಮಾದೀನಿ ಸ್ತಂಬ ಪರ್ಯಂತಾನಿ ಮತ್ಸ್ಥಾನಿ** ಎಂದು ಶಾಂಕರಭಾಷ್ಯ. ಆದರೆ **'ನ ಚಾಹಂ ತೇಷ್ವವ ಸ್ಥಿತಃ'**, ನಾನು ಮಾತ್ರ ಅವುಗಳಲ್ಲಿ ಅಧೀನನಾಗಿ ಇಲ್ಲ. ಆಕಾಶದಲ್ಲಿಯೇ ಎಲ್ಲವೂ ಇದೆ, ಆದರೆ ಆಕಾಶವು ಮಾತ್ರ ಯಾವುದಕ್ಕೂ ಅಧೀನವಾಗಿ ಇಲ್ಲ. ಹೀಗೆಯೇ ನನ್ನ ಅಧೀನವಾಗಿ ಪ್ರಪಂಚವಿದೆ, ಪ್ರಪಂಚಕ್ಕೆ ಅಧೀನನಾಗಿ ನಾನಿಲ್ಲ. ನನಗೆ ಯಾವ ವಸ್ತುವಿನ ಹಂಗೂ ಇಲ್ಲ ಎಂದು ನನ್ನ ನಿಜಸ್ವರೂಪವನ್ನು ತಿಳಿ.

'ಕೃಷ್ಣಾಧೀನಂ ಜಗತ್ಸರ್ವಂ' ಎಂದು ತಿಳಿಯಬೇಕು

32. ಬಹೂನಿ ಮೇ ವ್ಯತೀತಾನಿ ಜನ್ಮಾನಿ; ಗೀತಾ ೪-೫

ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ।
ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ ಪರಂತಪ॥ ೪-೫

ಅರ್ಜುನನೇ, ನನಗೂ ಮತ್ತು ನಿನಗೂ ಈ ವರೆಗೆ ಅನೇಕ ಜನ್ಮಗಳು ಕಳೆದಿವೆ. ಆದರೆ ಅವುಗಳನ್ನೆಲ್ಲ ನಾನು ಬಲ್ಲೆನು; ಪರಂತಪನೇ, ನೀನು ಮಾತ್ರ ಅದಾವುದನ್ನೂ ತಿಳಿದಿಲ್ಲ!

ಅರ್ಜುನನಿಗೂ ಈ ಹಿಂದೆ ಅನೇಕ ಜನ್ಮಗಳು ಕಳೆದಿದೆ. ಏಕೆಂದರೆ ಅನಾದಿಯಾದ ಸಂಸಾರಚಕ್ರಕ್ಕೆ ಮೊದಲೂ ಇಲ್ಲ, ಕೊನೆಯೂ ಇಲ್ಲ. ಈಗಿನ ಫಲಗಳಿಗೆ ಹಿಂದಿನ ಕರ್ಮಗಳೇ ಕಾರಣ. ಆ ಹಿಂದಿನ ಫಲಗಳಿಗೆ ಅದರ ಹಿಂದಿನ ಕರ್ಮಗಳೇ ಕಾರಣ. ಹೀಗೆ ಪ್ರತಿಯೊಬ್ಬ ಜೀವಿಗೂ ಕರ್ಮದಿಂದ ಜನ್ಮ, ಜನ್ಮದಿಂದ ಕರ್ಮ; ಕರ್ಮಗಳಿಂದ ಪುನರ್ಜನ್ಮ, ಪುನರ್ಜನ್ಮದಿಂದ ಪುನಃ ಕರ್ಮಗಳು. ಹೀಗಾಗಿ ಜೀವಾತ್ಮನಾದ, ಅವಿದ್ಯಾವಂತನಾದ ಅರ್ಜುನನೇ, ನಿನಗೂ ಈ ಹಿಂದೆ ಅನೇಕ ಜನ್ಮಗಳು ಕಳೆದುಹೋಗಿವೆ.

ಮೇ ಬಹೂನಿ ಜನ್ಮಾನಿ ವ್ಯತೀತಾನಿ; ನನಗೂ ಈ ಹಿಂದೆ ಬಹಳ ಜನ್ಮಗಳು ಕಳೆದಿವೆ. ಇದೇನು? ಭಗವಂತನಿಗೂ ಜನ್ಮಗಳು ಉಂಟೆ? ಎಂದರೆ, ಹೌದು, ಇಡೀ ಜಗತ್ತಿಗೇ ಕಾರಣನಾದ ಭಗವಂತನು ಸರ್ವಜ್ಞನೂ ಸರ್ವಶಕ್ತನೂ ಆಗಿದ್ದಾನೆ. ಆದಿಕಾರಣನಾದ ನಾನೇ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ಶ್ರೀರಾಮ ಮುಂತಾದ ಅನೇಕ ಅವತಾರಗಳನ್ನು ಎತ್ತಿದ್ದೇನಲ್ಲವೇ? ಹೀಗಾಗಿ ನನಗೂ ಅನೇಕ ಜನ್ಮಗಳು ಆಗಿರುತ್ತವೆ. ಅರ್ಜುನನೇ, ನಿನಗೆ ಕರ್ಮಾಧೀನವಾಗಿ ಜನ್ಮ, ನನಗೆ ನನ್ನ ಅಧೀನವಾದ ಮಾಯೆಯಿಂದ ಜನ್ಮಾಭಾಸ. ಇಷ್ಟೇ ಇಬ್ಬರಿಗೂ ವ್ಯತ್ಯಾಸ. ಒಟ್ಟಿನಲ್ಲಿ ನಿನಗೂ ಅನೇಕ ಜನ್ಮಗಳು ಕಳೆದಿವೆ, ನನಗೂ ಅನೇಕ ಅವತಾರಗಳು ಕಳೆದಿವೆ.

ಆದರೆ ಈ ಜನ್ಮಗಳ, ಅವತಾರಗಳ ವಿಷಯಗಳೆಲ್ಲವೂ ನನಗೆ ಚೆನ್ನಾಗಿ ತಿಳಿದಿವೆ. ಏಕೆಂದರೆ ನನ್ನ ಜ್ಞಾನಕ್ಕೆ ಆವರಣವೆಂಬುದೇ ಇಲ್ಲ. **ಅಹಂ ಪುನಃ ನಿತ್ಯಶುದ್ಧಬುದ್ಧಮುಕ್ತಸ್ವಭಾವತ್ವಾತ್ ಅನಾವರಣಜ್ಞಾನಶಕ್ತಿಃ ಇತಿ ಅಹಂ ವೇದ** ಎಂದು ಶಾಂಕರಭಾಷ್ಯ; ನೀನಾದರೋ ಇವುಗಳನ್ನು ಅರಿಯೆ, ಏಕೆಂದರೆ **ಧರ್ಮಾಧರ್ಮಾದಿಪ್ರತಿಬದ್ಧಜ್ಞಾನಶಕ್ತಿತ್ವಾತ್**. ಧರ್ಮ, ಅಧರ್ಮ, ರಾಗ, ದ್ವೇಷ, ಅಹಂಕಾರ, ಮಮಕಾರಾದಿ ದೋಷಗಳಿಂದ ನಿನ್ನ ಜ್ಞಾನಶಕ್ತಿಯು ಪ್ರತಿಬದ್ಧವಾಗಿರುತ್ತದೆ. ಭಗವಂತನಿಗೂ ಸಂಸಾರಿಜೀವರುಗಳಿಗೂ ಇದೇ ವ್ಯತ್ಯಾಸ! ಇದು **'ಕೃಷ್ಣಕಂಡ ಕೃಷ್ಣ'**ನ ಮಾತುಗಳು.

ಕೃಷ್ಣನನ್ನು ದೇಶಕಾಲಾತೀತನಾದ ಭಗವಂತನೆಂದು ತಿಳಿಯಬೇಕು

33. ಸಮೋಽಹಂ ಸರ್ವಭೂತೇಷು; ಗೀತಾ ೯-೨೯

ಸಮೋಽಹಂ ಸರ್ವಭೂತೇಷು ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ।
ಯೇ ಭಜಂತಿ ತು ಮಾಂ ಭಕ್ತ್ಯಾ ಮಯಿ ತೇ ತೇಷು ಚಾಪ್ಯಹಮ್॥
೯-೨೯

ನಾನು ಎಲ್ಲಾ ಪ್ರಾಣಿಗಳಲ್ಲಿಯೂ ಸಮನಾಗಿದ್ದೇನೆ, ನನಗೆ ದ್ವೇಷ್ಯರು ಎಂದರೆ ಶತ್ರುಗಳು ಯಾರೂ ಇಲ್ಲ, ಪ್ರಿಯರೂ ಯಾರೂ ಇಲ್ಲ; ಯಾರು ನನ್ನನ್ನು ಪ್ರೀತಿಯಿಂದ ಭಜಿಸುತ್ತಾರೆಯೋ ಅಂಥವರು ನನ್ನಲ್ಲಿರುತ್ತಾರೆ, ನಾನು ಅವರಲ್ಲಿ ಇರುತ್ತೇನೆ.

ನನಗೆ ರಾಗದ್ವೇಷಗಳಿರುವುದಿಲ್ಲ. ನಾನು ಎಲ್ಲರಲ್ಲಿಯೂ ಸಮನಾಗಿದ್ದೇನೆ ಎಂದು ಕೃಷ್ಣನ ಮಾತು. **ರಾಗದ್ವೇಷವಾನ್ ತರ್ಹಿ ಭಗವಾನ್, ಯತೋ ಭಕ್ತಾನ್ ಅನುಗೃಹ್ಣಾತಿ ನ ಇತರಾನ್ ಇತಿ, ತತ್ ನ ಇತ್ಯಾಹ** ಎಂದು ಶ್ರೀಶಂಕರರು ಈ ಶ್ಲೋಕಕ್ಕೆ ಅವತರಣಿಕಾಭಾಷ್ಯವನ್ನು ಬರೆದಿದ್ದಾರೆ. ಹಾಗಾದರೆ ಭಗವಂತನಿಗೂ ರಾಗದ್ವೇಷಗಳಿವೆ ಎಂದಾಯಿತಲ್ಲ, ಏಕೆಂದರೆ ಭಗವಂತನು ತನ್ನ ಭಕ್ತರನ್ನು ಮಾತ್ರ ಅನುಗ್ರಹಿಸುತ್ತಾನೆ, ಕಾಪಾಡುತ್ತಾನೆ; ಬೇರೆಯವರನ್ನು ಅನುಗ್ರಹಿಸುವುದಿಲ್ಲ ಎಂದು ಹೇಳಿದ್ದಾನಲ್ಲ! ಎಂದರೆ ಹಾಗಲ್ಲ.

ಸಮೋಽಹಂ ಸರ್ವಭೂತೇಷು, ನಾನು ಎಲ್ಲಾ ಭೂತಗಳಲ್ಲಿಯೂ ಸಮನಾಗಿರುತ್ತೇನೆ ಎಂಬುದು **'ಕೃಷ್ಣಕಂಡ ಕೃಷ್ಣ'**ನ ಮಾತು. ಸೂರ್ಯನಂತೆ, ಮಳೆಯಂತೆ, ಅಗ್ನಿಯಂತೆ ನಾನು ಎಲ್ಲರಲ್ಲಿಯೂ ಸಮನಾಗಿರುತ್ತೇನೆ. **ಅಗ್ನಿವತ್ ಅಹಂ, ದೂರಸ್ಥಾನಾಂ ಯಥಾ ಅಗ್ನಿಃ ಶೀತಂ ನ ಅಪನಯತಿ, ಸಮೀಪ ಮುಪಸರ್ಪತಾಂ ಶೀತಮ್ ಅಪನಯತಿ, ತಥಾ ಅಹಂ ಭಕ್ತಾನ್ ಅನು ಗೃಹ್ಣಾಮಿ, ನ ಇತರಾನ್** ಎಂದು ಶಾಂಕರಭಾಷ್ಯ. ನಾನು ಅಗ್ನಿಯಂತಿದ್ದೇನೆ, ಅಗ್ನಿಯು ದೂರದಲ್ಲಿರುವವರ ಶೀತವನ್ನು ಕಳೆಯುವುದಿಲ್ಲ, ಹತ್ತಿರವಿರುವವರ ಛಳಿಯನ್ನು ಕಳೆಯುತ್ತಾನಲ್ಲವೇ? ಅದರಂತೆಯೇ ನಾನೂ ನನ್ನ ಹತ್ತಿರದಲ್ಲಿರುವ ನನ್ನ ಭಕ್ತರನ್ನು ಅನುಗ್ರಹಿಸುತ್ತೇನೆ, ನನ್ನನ್ನು ದ್ವೇಷಿಸುತ್ತಾ ನನ್ನಿಂದ ದೂರವಿರುವವರನ್ನು ನಾನು ಅನುಗ್ರಹಿಸುವುದಿಲ್ಲ; ಏಕೆಂದರೆ ಅವರಿಗೆ ನಾನು ಬೇಕಾಗಿಲ್ಲವಲ್ಲ; ಇಷ್ಟೇ ಹೊರತು ನನಗೆ ಯಾರ ಮೇಲೂ ರಾಗವಾಗಲೀ ದ್ವೇಷವಾಗಲೀ ಇಲ್ಲ.

ಸರ್ವಭೂತಗಳಿಗೂ ಆತ್ಮನಾಗಿರುವ, ಸರ್ವಭೂತಗಳಿಗೂ ಆಧಾರ ನಾಗಿರುವ ನಾನು ಎಲ್ಲರಲ್ಲಿಯೂ ಸಮನೇ ಆಗಿರುತ್ತೇನೆ. ನನಗೆ ಎಲ್ಲರೂ ಪ್ರಿಯರೇ, ನನಗೆ ಎಲ್ಲರೂ ಸಮಾನರೇ ಆಗಿರುತ್ತಾರೆ. ನನ್ನ ಭಕ್ತರು ನನ್ನನ್ನು ಪ್ರೀತಿಸುತ್ತಾರೆ, ಆದ್ದರಿಂದ ನಾನೂ ಅವರನ್ನೂ ಅಷ್ಟೇ ಪ್ರೀತಿಸುತ್ತೇನೆ. ಇಷ್ಟೇ ಹೊರತು ಇನ್ನೇನೂ ವ್ಯತ್ಯಾಸವಿಲ್ಲ. ನನಗೆ ಯಾರ ಮೇಲೂ ಪಕ್ಷಪಾತವಿಲ್ಲ.

ಕೃಷ್ಣನನ್ನು ಸರ್ವಸಮನಾದ ಭಗವಂತನೆಂದು ಭಾವಿಸಬೇಕು

34. ಬೀಜಂ ಮಾಂ ಸರ್ವಭೂತಾನಾಂ ವಿದ್ಧಿ ; ಗೀತಾ ೭-೧೦

ಬೀಜಂ ಮಾಂ ಸರ್ವಭೂತಾನಾಂ ವಿದ್ಧಿ ಪಾರ್ಥ ಸನಾತನಮ್।
ಬುದ್ಧಿರ್ಬುದ್ಧಿಮತಾಮಸ್ಮಿ ತೇಜಸ್ತೇಜಸ್ವಿನಾಮಹಮ್॥ ೭-೧೦

ಪಾರ್ಥನೇ, ಸರ್ವಭೂತಗಳಿಗೂ ಸನಾತನವಾದ ಕಾರಣವೆಂದು ನನ್ನನ್ನು ತಿಳಿ. ನಾನು ಬುದ್ಧಿವಂತರಲ್ಲಿರುವ ಬುದ್ಧಿಯೂ, ತೇಜಸ್ವಿಗಳಲ್ಲಿರುವ ತೇಜಸ್ಸೂ ಆಗಿದ್ದೇನೆ.

ಈ ವಿಶ್ವದಲ್ಲಿ ಕಾರಣಪದಾರ್ಥಗಳು ತುಂಬಾ ಇವೆ. ವಿಶಾಲದೃಷ್ಟಿಯಿಂದ ನೋಡುತ್ತಾ ಹೋದರೆ ಎಲ್ಲವೂ ಕಾರಣವೇ ಆಗಿರುತ್ತವೆ. ಅನ್ನಕ್ಕೆ ಅಕ್ಕಿ ಕಾರಣ, ಅಕ್ಕಿಗೆ ಭತ್ತ ಕಾರಣ, ಭತ್ತಕ್ಕೆ ಭೂಮಿ ಕಾರಣ; ಲವಕುಶರಿಗೆ ರಾಮ ಕಾರಣ, ಶ್ರೀರಾಮನಿಗೆ ದಶರಥ ಕಾರಣ, ದಶರಥನಿಗೆ ಅಜ ಕಾರಣ, ಅಜನಿಗೆ ರಘು ಕಾರಣ, ರಘುವಿಗೆ ದಿಲೀಪ ಕಾರಣ; ತುಪ್ಪಕ್ಕೆ ಬೆಣ್ಣೆ ಕಾರಣ, ಬೆಣ್ಣೆಗೆ ಮಜ್ಜಿಗೆ ಕಾರಣ, ಮಜ್ಜಿಗೆಗೆ ಮೊಸರು ಕಾರಣ, ಮೊಸರಿಗೆ ಹಾಲು ಕಾರಣ, ಹಾಲಿಗೆ ಹಸು ಕಾರಣ; ಹೀಗೆ ನೋಡುತ್ತಾ ಹೋದರೆ ಈ ಪ್ರಪಂಚವೆಲ್ಲವೂ ಕಾರ್ಯ ಕಾರಣದಿಂದ ತೋರುತ್ತಿದೆ.

ಆದರೆ ಇದಾವುದೂ ಸರ್ವಭೂತಗಳಿಗೂ ಎಂದರೆ ಚರಾಚರಾತ್ಮಕ ಪ್ರಪಂಚಕ್ಕೆ ಮೂಲಕಾರಣವಾಗಲಿಕ್ಕೆ ಸಾಧ್ಯವಿಲ್ಲ. ಮತ್ತು ಈ ಕಾರಣಗಳಾವುವೂ **ಸನಾತನ**ವಲ್ಲ. ಮತ್ತೇನೆಂದರೆ ಈ ಕಾರಣಗಳೆಲ್ಲವೂ ತಾತ್ಕಾಲಿಕ, ಅನಿತ್ಯ ಕಾರಣ ಗಳಾಗಿರುತ್ತವೆ. ಆದ್ದರಿಂದ ಈ ಕಾರಣಗಳು ನಿಜವಾಗಿ ಆದಿಕಾರಣಗಳೇ ಅಲ್ಲ. ಇವುಗಳು ಅನಿತ್ಯವಾದ ಕಾರಣಗಳು.

ಆದರೆ, ನಾನು ಇಡೀ ಪ್ರಪಂಚಕ್ಕೇ ಉಪಾದಾನ ಹಾಗೂ ನಿಮಿತ್ತ ಕಾರಣ ನಾಗಿರುತ್ತೇನೆ. **"ಮಾಂ ಸನಾತನಂ ಬೀಜಂ ವಿದ್ಧಿ"**, ನನ್ನನ್ನು ಈ ವಿಶ್ವಕ್ಕೆ ಸನಾತನವಾದ, ಮೂಲಭೂತವಾದ, ನಾಶವೇ ಇಲ್ಲದ ಬೀಜ, ಕಾರಣ, ಹೇತು ಎಂದು ತಿಳಿ. ಏಕೆಂದರೆ ಈ ವಿಶ್ವವೆಲ್ಲಕ್ಕೂ ನಾನೇ ಆಧಾರವಾಗಿರುತ್ತೇನೆ. ನನ್ನಿಂದಲೇ ಹುಟ್ಟಿ, ನನ್ನಲ್ಲಿಯೇ ಇದ್ದು, ಕೊನೆಯಲ್ಲಿ ಈ ಪ್ರಪಂಚವು ನನ್ನಲ್ಲಿಯೇ ಲಯವಾಗುವುದರಿಂದ ನನ್ನನ್ನು **ಸನಾತನಬೀಜ**ವೆಂದು ತಿಳಿ.

ನನ್ನನ್ನು ಅಜ್ಞಾನಿಗಳು ದೇವಕಿಯ ಪುತ್ರನೆಂದೂ, ವಸುದೇವನ ಮಗನೆಂದೂ ತಿಳಿದಿದ್ದಾರೆ. ಆದರೆ ಇದು ಮಿಥ್ಯಾಜ್ಞಾನ. ಏಕೆಂದರೆ ನಾನು ಈ ವಿಶ್ವಕ್ಕೇ ಸನಾತನನೂ ನಿತ್ಯನೂ ಆದ ಮೂಲಕಾರಣನಾಗಿದ್ದೇನೆ. ಇದು ನನ್ನ ನಿಜಸ್ವರೂಪ. ಇದು ನನ್ನ ಆತ್ಮನೇ ಆದ ಬ್ರಹ್ಮಜ್ಞಾನಿಗಳಿಗೆ ಮಾತ್ರ ಅರ್ಥ ವಾಗುತ್ತದೆಯೇ ಹೊರತು ಮೂಢರಿಗೆ ಅರ್ಥವಾಗುವುದಿಲ್ಲ.

ಕೃಷ್ಣನನ್ನು ಜಗತ್ತಿಗೆ ಮೂಲಕಾರಣನೆಂದು ತಿಳಿಯಬೇಕು

35. ಜ್ಞಾನಂ ಸವಿಜ್ಞಾನಂ ವಕ್ಷ್ಯಾಮ್ಯಶೇಷತಃ; ಗೀತಾ ೭-೨

ಜ್ಞಾನಂ ತೇಽಹಂ ಸವಿಜ್ಞಾನಮ್ ಇದಂ ವಕ್ಷ್ಯಾಮ್ಯಶೇಷತಃ।
ಯಜ್ಜ್ಞಾತ್ವಾ ನೇಹ ಭೂಯೋಽನ್ಯತ್ ಜ್ಞಾತವ್ಯಮವಶಿಷ್ಯತೇ॥ ೭-೨

ಅರ್ಜುನನೇ, ನಾನೇ ನಿನಗೆ ವಿಜ್ಞಾನಸಮೇತವಾದ ಆತ್ಮಜ್ಞಾನವನ್ನು ಹೇಳುತ್ತೇನೆ. ಇದನ್ನು ನೀನು ತಿಳಿದುಕೊಂಡರೆ ಪುನಃ ಇನ್ನು ತಿಳಿಯಬೇಕಾದದ್ದು ಏನೂ ಉಳಿಯುವುದಿಲ್ಲ.

ಭಗವದ್ಗೀತೆಯ ಮುಖ್ಯ ಉದ್ದೇಶವೇ ಆತ್ಮಜ್ಞಾನೋಪದೇಶ. ಯದ್ಯಪಿ ಗೀತೆಯಲ್ಲಿ ಕರ್ಮಯೋಗ, ಧ್ಯಾನಯೋಗ, ವಿಭೂತಿಯೋಗಾದಿಗಳನ್ನು ಉಪದೇಶಿಸಿದ್ದರೂ, ಅವೆಲ್ಲವೂ ಆತ್ಮಜ್ಞಾನಕ್ಕೆ ಉಪಾಯವಾಗಿಯೇ ಉಪದಿಷ್ಟವಾಗಿವೆ ಎಂಬುದನ್ನು ನಾವು ಮರೆಯಬಾರದು. ಏಕೆಂದರೆ ಮೋಕ್ಷಪ್ರಾಪ್ತಿಗೆ ಆತ್ಮಜ್ಞಾನವೇ ಸಾಕ್ಷಾತ್ ಸಾಧನವು. ಆತ್ಮಜ್ಞಾನದಿಂದಲೇ ಅವಿದ್ಯಾನಾಶ, ಆತ್ಮಜ್ಞಾನದಿಂದಲೇ ದುಃಖನಾಶ, ಆತ್ಮಜ್ಞಾನದಿಂದಲೇ ಪರಮ ಶಾಂತಿ. ಆದ್ದರಿಂದ ಅರ್ಜುನನೇ ನಾನೀಗ ನಿನಗೆ ಆತ್ಮಜ್ಞಾನವನ್ನೇ ಉಪದೇಶಿಸುತ್ತೇನೆ.

'ನಾನೇ' ಖುದ್ದಾಗಿ 'ನಿನಗೆ' "ವಿಜ್ಞಾನಸಹಿತ"ವಾದ "ಆತ್ಮಜ್ಞಾನ"ವನ್ನು ಹೇಳುತ್ತೇನೆ. ಇಲ್ಲಿರುವ ಒಂದೊಂದು ಪದಕ್ಕೂ ಸ್ವಾರಸ್ಯಾರ್ಥವಿದೆ. ನಾನೇ ಎಂದದ್ದರಿಂದ ಸಾಮಾನ್ಯ ಪಂಡಿತರ, ಒಣ ಪಂಡಿತರ ಉಪದೇಶವಲ್ಲ , ಮತ್ತೇನೆಂದರೆ ಬ್ರಹ್ಮಸ್ವರೂಪಿಯೇ ಆದ, ಸರ್ವಜ್ಞನೂ ಮೋಕ್ಷಸ್ವರೂಪನೂ ಆದ ನಾನೇ ಉಪದೇಶಿಸುತ್ತೇನೆ ಎಂದರ್ಥ. 'ನಿನಗೆ' ಎಂದರೆ, ನನ್ನ ಪ್ರಿಯಸಖನೂ, ನಿಜ ಮುಮುಕ್ಷುವೂ, ನನ್ನ ಪ್ರಿಯಶಿಷ್ಯನೂ ಆದಂಥ ನಿನಗೆ ಎಂದರ್ಥ. 'ಜ್ಞಾನ'ವನ್ನು ಎಂದರೆ ಮೋಕ್ಷಪ್ರಾಪ್ತಿಗೆ ನೇರವಾದ ಸಾಧನವನ್ನು ಉಪದೇಶಿಸುತ್ತೇನೆಂದರ್ಥ. ವಿಜ್ಞಾನಸಮೇತವಾದ ಎಂದರೆ ಅನುಭವಾವಸಾನವಾದ, ನಿನಗೇ ಅನುಭವಕ್ಕೆ ಬರುವಂಥ ಜ್ಞಾನವನ್ನು ಉಪದೇಶಿಸುತ್ತೇನೆ ಎಂದು ಕೃಷ್ಣನೇ ಹೇಳುತ್ತಿದ್ದಾನೆ.

ಈ ಜ್ಞಾನವನ್ನು ಪಡೆದುಕೊಂಡವನು ಯಾರೇ ಆದರೂ ಅವನಿಗೆ ಕೃತಕೃತ್ಯತೆಯು ಉಂಟಾಗಿಬಿಡುತ್ತದೆ. ಇವನೂ ಬ್ರಹ್ಮಜ್ಞಾನಿಯೇ ಆಗಿಬಿಡುವುದರಿಂದ ಇನ್ನು ಮುಂದೆ ಇವನಿಗೆ ಜ್ಞಾತವ್ಯವಸ್ತುಗಳೇ ಉಳಿಯುವುದಿಲ್ಲ. ಅರ್ಜುನನೇ, ನಾನು ನಿನಗೆ ಆತ್ಮಜ್ಞಾನವನ್ನು ಹೇಳುತ್ತಿದ್ದರೂ, ಇದನ್ನು ಯಾರೇ ಬೇಕಾದರೂ ಪಡೆದುಕೊಂಡು ಮುಕ್ತರಾಗಿ ಕೃತಾರ್ಥರೇ ಆಗಿಬಿಡಬಹುದು. ಏಕೆಂದರೆ ಆತ್ಮಜ್ಞಾನವೂ ಮತ್ತು ಮೋಕ್ಷವೂ ಸಕಲ ಮಾನವರ ಆಜನ್ಮಹಕ್ಕೇ ಆಗಿರುತ್ತದೆ. ಇದು **'ಕೃಷ್ಣಕಂಡ ಕೃಷ್ಣ'**ನ ನಿಜಸ್ವರೂಪವಲ್ಲವೇ?

ಕೃಷ್ಣನನ್ನು ಅದ್ವೈತಾನುಭವನಿಷ್ಠ ಎಂದು ತಿಳಿಯಬೇಕು

36. ನ ಮೇ ಭಕ್ತಃ ಪ್ರಣಶ್ಯತಿ; ಗೀತಾ ೯-೩೧

ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ।
ಕೌಂತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ॥ ೯-೩೧

ಮಾನವನು ಎಷ್ಟೇ ಪಾಪಿಯಾಗಿದ್ದರೂ ನನ್ನ ಭಕ್ತನಾದ ಕೂಡಲೇ ಅಂಥವನು ಕೂಡಲೇ ಧರ್ಮಾತ್ಮನಾಗಿಬಿಡುತ್ತಾನೆ, ಅವನು ಶಾಶ್ವತವಾದ ಶಾಂತಿಯನ್ನು ಪಡೆಯುತ್ತಾನೆ. ಕೌಂತೇಯನೇ, ***ನ ಮೇ ಭಕ್ತಃ ಪ್ರಣಶ್ಯತಿ,*** *ನನ್ನ ಭಕ್ತನು ನಾಶವಾಗುವುದಿಲ್ಲ ಎಂಬುದನ್ನು ನನ್ನ ಸತ್ಯವಾಣಿಯೆಂದು ತಿಳಿ. ನಿಶ್ಚಯಮಾಡಿಕೋ.*

ನ ಮೇ ಭಕ್ತಃ ಪ್ರಣಶ್ಯತಿ, ನನ್ನ ಭಕ್ತನು ಎಂದಿಗೂ ನಾಶವಾಗುವುದಿಲ್ಲ, ಇದು **'ಕೃಷ್ಣಕಂಡ ಕೃಷ್ಣ'ನ** ಧೀರವಾಣಿ! ನನ್ನ ಭಕ್ತ ಎಂದಾದಮೇಲೆ ಅವನನ್ನು ರಕ್ಷಿಸುವುದು ನನ್ನ ಕರ್ತವ್ಯ. ಹೌದು, ನಾನು ಅವನನ್ನು ರಕ್ಷಿಸುತ್ತೇನೆ. ಇದು ಸತ್ಯ. ನಾನೇ ರಕ್ಷಕನಾಗಿರಬೇಕಾದರೆ ಇನ್ನು ಅವನನ್ನು ಯಾರೂ ಹಾಳುಮಾಡಲಾರರು. ಇಲ್ಲಿ ನಾನು ಎಂದರೆ ಭಗವಂತ, ಸರ್ವಶಕ್ತನಾದ ಪರಮಾತ್ಮ ಎಂದೇ ಅರ್ಥ.

ನನ್ನ ಭಕ್ತನಾಗಿಬಿಟ್ಟರೆ ಅಂಥವನು ಆದಷ್ಟು ಬೇಗನೆ ಧರ್ಮಾತ್ಮನಾಗುತ್ತಾನೆ. ಭಗವಂತನ ಕಡೆಗೆ ತಿರುಗಿದವನಿಗೆ ಪಾಪದ ಅಂಟು ಇರುವುದೇ ಇಲ್ಲ. ಹೀಗಾಗಿ ನನ್ನ ಭಕ್ತರಿಗೆ ಪಾಪಸಂಸ್ಕಾರಗಳೆಲ್ಲವೂ ದೂರವಾಗಿಬಿಡುತ್ತವೆ. ಅದರಿಂದ ಅಂಥವರು ಕೂಡಲೇ ಧರ್ಮಾತ್ಮರಾಗುತ್ತಾರೆ, ಪುಣ್ಯಾತ್ಮರಾಗುತ್ತಾರೆ, ಸಾಧುಗಳಾಗಿಬಿಡುತ್ತಾರೆ. ನನ್ನ ಭಕ್ತರೂ ಆಗಿ, ಧರ್ಮಾತ್ಮರೂ ಆದವರಿಗೆ ಪಾಪಗಳು ಇರುವುದಿಲ್ಲ. ಆದರೆ ನನ್ನ ಕಡೆಗೆ ತಿರುಗಬೇಕಾದರೆ, ನನ್ನ ಭಕ್ತರಾಗಬೇಕಾದರೆ ಮಾತ್ರ ಅವರಿಗೆ ಅನೇಕ ಜನ್ಮಗಳ ಸುಕೃತವು ಇರಬೇಕು. ಭಗವಂತನ ಕಡೆಗೆ ತಿರುಗುವುದೆಂಬುದು ಅಷ್ಟು ಸುಲಭವಲ್ಲ, ಆದರೆ ಕಷ್ಟವೂ ಅಲ್ಲ.

ಧರ್ಮಾತ್ಮನಾಗಿಬಿಟ್ಟರೆ ಅವನಿಗೆ ಇನ್ನು, ಶಾಶ್ವತಶಾಂತಿಯು ದೊರಕಿದಂತೆಯೇ. ಭಕ್ತನಿಗೆ ಭಗವಂತನ ಅನುಗ್ರಹದಿಂದ ಅಂತಃಕರಣವು ಶುದ್ಧವಾಗಿಬಿಟ್ಟಿರುವುದರಿಂದ ಶಾಶ್ವತವಾದ ಶಾಂತಿ ಆನಂದಗಳು ಲಭಿಸುತ್ತವೆ. ಭಕ್ತನಿಗೂ ಅವನ ಜೀವನದಲ್ಲಿ ರೋಗ ರುಜಿನ, ಮಾನ ಅಪಮಾನ, ಲಾಭ ನಷ್ಟ, ಛಳಿ ಜ್ವರಾದಿಗಳು ಬರುತ್ತವೆ. ಏಕೆಂದರೆ ಅವನೂ ಶರೀರಿಯಲ್ಲವೇ? ಭಕ್ತನು, ಬ್ರಹ್ಮಜ್ಞಾನಿಯು ಎಂಬುದು ಅವನ ಮಾನಸಿಕ ಸ್ವಭಾವದಿಂದ; ಆದರೆ ಅವನೂ ಕೂಡ ವ್ಯಾವಹಾರಿಕದೃಷ್ಟಿಯಿಂದ ಶರೀರೇಂದ್ರಿಯಗಳನ್ನುಳ್ಳ ಒಬ್ಬ ಮನುಷ್ಯನೇ ಆಗಿರುತ್ತಾನಲ್ಲವೇ? ಆದರೆ ಇವಾವುದೇ ಬಂದರೂ ಅವನು ಮಾತ್ರ ದ್ವಂದ್ವಾತೀತನಾಗಿ ಸಮನಾಗಿದ್ದು ಶಾಂತನಾಗಿರುತ್ತಾನೆ. ಇರಲಿ, ಒಮ್ಮೆ ನನ್ನ ಭಕ್ತನಾದಮೇಲೆ, ಅವನಿಗೆ ಎಂದಿಗೂ ಕೆಡಕು ಆಗುವುದಿಲ್ಲ.

ಕೃಷ್ಣಭಕ್ತರಿಗೆ ಎಂದಿಗೂ ನಾಶವಿಲ್ಲ ಎಂದು ತಿಳಿಯಬೇಕು

37. ತಾಮಸಾಶ್ಚ ಭಾವಾಃ ಮತ್ತ ಏವ; ಗೀತಾ ೭-೧೨

ಯೇ ಚೈವ ಸಾತ್ತ್ವಿಕಾ ಭಾವಾ ರಾಜಸಾಸ್ತಾಮಸಾಶ್ಚ ಯೇ।
ಮತ್ತ ಏವೇತಿ ತಾನ್ ವಿದ್ಧಿ ನ ತ್ವಹಂ ತೇಷು ತೇ ಮಯಿ॥ ೭-೧೨

ಸಾತ್ತ್ವಿಕಪದಾರ್ಥಗಳೂ ರಾಜಸವಸ್ತುಗಳೂ ಮತ್ತು ತಾಮಸಪದಾರ್ಥಗಳೆಲ್ಲವೂ ನನ್ನಿಂದಲೇ ಹುಟ್ಟಿರುತ್ತವೆಂದು ತಿಳಿ. ಆದರೆ ನಾನು ಮಾತ್ರ ಅವುಗಳಿಗೆ ಅಂಟು ಕೊಂಡಿಲ್ಲ; ಅವೆಲ್ಲವೂ ನನ್ನ ಅಧೀನವಾಗಿ ನನ್ನಲ್ಲಿಯೇ ಇರುತ್ತವೆ.

ವಿಶ್ವದಲ್ಲಿರುವ ಎಲ್ಲಾ ಭೂತಗಳನ್ನೂ **ಸಾತ್ತ್ವಿಕ, ರಾಜಸ** ಮತ್ತು **ತಾಮಸ** ಎಂದು ಮೂರಾಗಿ ವಿಂಗಡಿಸಬಹುದು. ಈ ವಿಶ್ವವೆಲ್ಲವೂ ಪ್ರಕೃತಿಯ ಕಾರ್ಯ ವಾದ್ದರಿಂದ ಇದು ತ್ರಿಗುಣಾತ್ಮಕವಾಗಿದೆ. ಆದರೆ ಕೆಲವು ವಸ್ತುಗಳು **ಸಾತ್ತ್ವಿಕ** ವಾಗಿಯೂ, ಕೆಲವು ವಸ್ತುಗಳು **ರಾಜಸ**ವಾಗಿಯೂ, ಮತ್ತೆ ಕೆಲವು ವಸ್ತುಗಳು **ತಾಮಸ**ವಾಗಿಯೂ ನಮಗೆ ತೋರುತ್ತವೆ. ಈ ವಿಭಾಗವು ಅಚೇತನ ಪದಾರ್ಥ ಗಳಿಗೆ ಮಾತ್ರವಲ್ಲ , ಮತ್ತೇನೆಂದರೆ ಚೈತನ್ಯವುಳ್ಳ ಪ್ರಾಣಿಗಳಿಗೂ ಸಾತ್ತ್ವಿಕ, ರಾಜಸ, ತಾಮಸ ಎಂಬ ವಿಭಾಗವು ಇರುತ್ತದೆ. ಉದಾ: ನದಿಗಳು, ಸೂರ್ಯ ಚಂದ್ರಾದಿಗಳು ಸಾತ್ತ್ವಿಕ; ಸಮುದ್ರ, ಗುಡ್ಡ, ಬೆಟ್ಟಗಳು ರಾಜಸ; ಅರಣ್ಯ, ಸುಳಿಗಳು ತಾಮಸಗಳು; ಪ್ರಾಣಿಗಳಲ್ಲಿ ದೇವತೆಗಳು ಸಾತ್ತ್ವಿಕರು, ಮಾನವರು ರಾಜಸರು, ರಾಕ್ಷಸರು ತಾಮಸರು ಎಂದು ನಾವು ತಿಳಿದಿರುತ್ತೇವಲ್ಲವೇ?

ಮಾನವರಲ್ಲಿ ಶ್ರೀರಾಮ, ವಿಭೀಷಣ, ಶ್ರೀಕೃಷ್ಣ, ಪಾಂಡವರು **ಸಾತ್ತ್ವಿಕರು**; ರಾವಣ, ಇಂದ್ರಜಿತ್, ಕಂಸ, ದುರ್ಯೋಧನಾದಿಗಳು **ರಾಜಸರು**; ಕುಂಭಕರ್ಣ, ದುಃಶಾಸನ, ಶಕುನಿ ಮುಂತಾದವರು **ತಾಮಸರು** ಎಂದು ನಾವು ಭಾವಿಸುತ್ತೇವೆ. ಹಸು, ಮೊಲ, ಮುಂತಾದ ಪ್ರಾಣಿಗಳು **ಸಾತ್ತ್ವಿಕ**ವೆಂದೂ; ಸಿಂಹ, ಹುಲಿ, ಆನೆ ಮುಂತಾದವುಗಳು **ರಾಜಸ**ವೆಂದೂ; ಹಾವು, ಚೇಳು, ಹಂದಿ ಮುಂತಾದ ಪ್ರಾಣಿ ಗಳನ್ನು **ತಾಮಸ**ವೆಂದೂ ತಿಳಿಯುತ್ತೇವೆ.

ಸರಿ, ಆದರೆ ಭಗವಂತನಾದ ಕೃಷ್ಣ ಹೇಳುತ್ತಿದ್ದಾನೆ, **ಮತ್ತ ಏವೇತಿ ತಾನ್ ವಿದ್ಧಿ** ಎಂದು. ಇವೆಲ್ಲವೂ ನನ್ನಿಂದಲೇ ಹುಟ್ಟಿ, ನನ್ನಲ್ಲಿಯೇ ಇದ್ದು ಕೊನೆಯಲ್ಲಿ ನನ್ನಲ್ಲಿಯೇ ಲಯಗೊಳ್ಳುತ್ತವೆ ಎಂದು ತಿಳಿ. ನನ್ನ ಅಧೀನವಾದ ಪ್ರಕೃತಿ ಮಾಯೆಯ ಕಾರ್ಯವಾದ್ದರಿಂದ ಎಲ್ಲವನ್ನೂ ನನ್ನಿಂದ ಎಂದೇ ತಿಳಿ.

ಆದರೆ, **ನ ತ್ವಹಂ ತೇಷು ತೇ ಮಯಿ**; ನಾನು ಮಾತ್ರ ಅವುಗಳಲ್ಲಿಲ್ಲ. ಅವೆಲ್ಲವೂ ನನ್ನಲ್ಲಿಯೇ ತೋರುತ್ತಿವೆ. ಜಗತ್ತೆಲ್ಲವೂ ನನ್ನ ಅಧೀನ, ನಾನು ಮಾತ್ರ ಯಾವುದಕ್ಕೂ ದಾಸನಲ್ಲ. ಇದು **'ಕೃಷ್ಣಕಂಡ ಕೃಷ್ಣ'**ನ ನಿಜಸ್ವರೂಪ.

ರಾಜಸತಾಮಸಭೂತಗಳನ್ನೂ ಕೃಷ್ಣನೆಂದೇ ತಿಳಿಯಬೇಕು

38. ಮಾಮುಪೇತ್ಯ ಪುನರ್ಜನ್ಮ ನಾಪ್ನುವಂತಿ; ಗೀತಾ ೮-೧೫

ಮಾಮುಪೇತ್ಯ ಪುನರ್ಜನ್ಮ ದುಃಖಾಲಯಮಶಾಶ್ವತಮ್।
ನಾಪ್ನುವಂತಿ ಮಹಾತ್ಮಾನಃ ಸಂಸಿದ್ಧಿಂ ಪರಮಾಂ ಗತಾಃ॥ ೮-೧೫

ಪರಮಸಂಸಿದ್ಧಿಯೆಂಬ ಮೋಕ್ಷವನ್ನೇ ಹೊಂದಿರುವ ಮಹಾತ್ಮರುಗಳು ಅಶಾಶ್ವತವಾದ ದುಃಖಾಲಯವೆಂಬ ಪುನರ್ಜನ್ಮವನ್ನು ಹೊಂದುವುದಿಲ್ಲ. ಏಕೆಂದರೆ ಇವರು ನನ್ನನ್ನೇ ಹೊಂದಿರುತ್ತಾರೆ.

ನನ್ನ ಭಾವವನ್ನೇ ಎಂದರೆ ಈಶ್ವರಸಾಮ್ರಾಜ್ಯವನ್ನೇ ಹೊಂದಿದವರಿಗೆ ಪುನರ್ಜನ್ಮವಿಲ್ಲ ಎಂದು ಕೃಷ್ಣನೇ ಬಾಯಿಬಿಟ್ಟು, ಸ್ಪಷ್ಟವಾಗಿ ಹೇಳಿದ್ದಾನೆ. ಎಂಥಾ ಪುನರ್ಜನ್ಮವನ್ನು? ಎಂದರೆ, **ದುಃಖಾಲಯಮ್ ಅಶಾಶ್ವತಂ ಚ ಪುನರ್ಜನ್ಮ;** ದುಃಖಾಲಯವೂ ಅಶಾಶ್ವತವೂ ಆದ ಪುನರ್ಜನ್ಮವನ್ನು ಹೊಂದುವುದಿಲ್ಲ. **ದುಃಖಾಲಯಂ ದುಃಖಾನಾಮ್ ಆಧ್ಯಾತ್ಮಿಕಾದೀನಾಮ್ ಆಲಯಮ್ ಆಶ್ರಯಂ** ಎಂದು ಶಾಂಕರಭಾಷ್ಯ. ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ದುಃಖಗಳಿಗೆ ಆಶ್ರಯವಾದದ್ದು ಪುನರ್ಜನ್ಮ. ಜನ್ಮವಾಯಿತೆಂದರೆ, ಇನ್ನು ಇವತ್ತಿನಿಂದ ಇಂದಿನಿಂದಲೇ ದುಃಖಗಳು ಪ್ರಾರಂಭಗೊಳ್ಳುತ್ತವೆ. ಇಂಥ ದುಃಖಾಲಯವಾದ ಪುನರ್ಜನ್ಮವನ್ನು ನನ್ನ ಭಕ್ತರು ಹೊಂದುವುದಿಲ್ಲ.

ಅಷ್ಟೇ ಅಲ್ಲ , ಪುನರ್ಜನ್ಮವು ಅಶಾಶ್ವತವೂ ಆಗಿರುತ್ತದೆ. ಇದರಲ್ಲಿ ಅಲ್ಲಲ್ಲಿ ಅಲ್ಪಸ್ವಲ್ಪ ಸುಖಾಭಾಸವಿದ್ದರೂ ಅದೆಲ್ಲವೂ ಕ್ಷಣಿಕವೇ; ಹುಟ್ಟಿದ ಮೇಲೆ ಎಂಥವನೇ ಆದರೂ ಸಾಯಲೇಬೇಕು. ಹೀಗಾಗಿ ಪುನರ್ಜನ್ಮವು ಅಶಾಶ್ವತವೂ ಆಗಿರುತ್ತದೆ. **ಅಶಾಶ್ವತಮ್ ಅನವಸ್ಥಿತಸ್ವರೂಪಂ ಚ** ಎಂದು ಶ್ರೀಶಂಕರರ ಭಾಷ್ಯ. ಕ್ಷಣಕ್ಷಣಕ್ಕೂ ಬದಲಾವಣೆಯನ್ನು ಹೊಂದುತ್ತಿರುವುದೇ ಜೀವನದ ಲಕ್ಷಣವು. ಇಂಥ ಪುನರ್ಜನ್ಮವನ್ನು ನನ್ನ ಭಕ್ತರುಗಳು ಹೊಂದುವುದಿಲ್ಲ.

ಯಾರು? ಎಂದರೆ **ಸಂಸಿದ್ಧಿಂ ಪರಮಾಂ ಗತಾಃ ಮಹಾತ್ಮಾನಃ;** ಪರಮವಾದ ಎಂದರೆ ಶ್ರೇಷ್ಠವಾದ ಮೋಕ್ಷಸಿದ್ಧಿಯನ್ನು ಹೊಂದಿರುವ ಮಹಾತ್ಮರು. **ಮೋಕ್ಷಸ್ವರೂಪನೇ ಆಗಿರುವ ನನ್ನನ್ನು ಹೊಂದಿರುವ ಮಹಾತ್ಮರಿಗೆ ಈ ದುಃಖರೂಪವೂ ಅಶಾಶ್ವತವೂ ಆದ ಪುನರ್ಜನ್ಮವು ಇರುವುದಿಲ್ಲ.** ಏಕೆಂದರೆ ಬ್ರಹ್ಮಜ್ಞಾನಿಗಳಾದ ಈ ಮಹಾತ್ಮರು ನನ್ನನ್ನೇ ಸೇರಿಕೊಂಡು ಬಿಟ್ಟಿರುತ್ತಾರೆ. ಇದರಿಂದ ಕೃಷ್ಣ ಎಂದರೆ ಪುನರಾವೃತ್ತಿರಹಿತವಾದ ಮೋಕ್ಷಸ್ವರೂಪನೇ ಎಂದಾಯಿತಲ್ಲವೇ? ಜನ್ಮಮರಣರಹಿತನಾದ ನನ್ನನ್ನೇ ಹೊಂದಿದವರಿಗೆ ಪುನರ್ಜನ್ಮವಿಲ್ಲ. ಇದು **ಕೃಷ್ಣಕಂಡ ಕೃಷ್ಣನ** ಮಾತು.

ಭಗವಂತನನ್ನು ಹೊಂದಿದವರಿಗೆ ಪುನರ್ಜನ್ಮವಿಲ್ಲ ಎಂದು ತಿಳಿಯಬೇಕು

39. **ಮಾಮೇಕಂ ಶರಣಂ ವ್ರಜ;** ಗೀತಾ ೧೮-೬೬

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ॥

೧೮-೬೬

ಎಲ್ಲಾ ಧರ್ಮಗಳನ್ನೂ ಬಿಟ್ಟು ನನ್ನೊಬ್ಬನನ್ನೇ ಶರಣುಹೊಂದು. ನಾನು ನಿನ್ನನ್ನು ಎಲ್ಲಾ ಪಾಪಗಳಿಂದಲೂ ಬಿಡುಗಡೆಮಾಡುತ್ತೇನೆ, ಶೋಕಿಸಬೇಡ.

ಇದು **'ಕೃಷ್ಣಕಂಡ ಕೃಷ್ಣ'**ನ ಆದೇಶ. ಭಗವದ್ಗೀತೆಯ ಹದಿನೆಂಟನೆಯ ಅಧ್ಯಾಯದ ಕೊನೆಕೊನೆಯ ಶ್ಲೋಕ. ಎಲ್ಲಾ ಧರ್ಮಗಳನ್ನೂ ಬಿಟ್ಟು ಎಂದರೆ ಧರ್ಮಗಳನ್ನೂ ಅಧರ್ಮಗಳನ್ನೂ ಬಿಟ್ಟು ಎಂದರ್ಥ. **ಧರ್ಮಶಬ್ದೇನ ಅತ್ರ ಅಧರ್ಮೋಽಪಿ ಗೃಹ್ಯತೇ। ನೈಷ್ಕರ್ಮ್ಯಸ್ಯ ವಿವಕ್ಷಿತತ್ವಾತ್** ಎಂದು ಶಾಂಕರ ಭಾಷ್ಯ. **ಸರ್ವಧರ್ಮಾನ್ ಪರಿತ್ಯಜ್ಯ ಸಂನ್ಯಸ್ಯ ಸರ್ವಕರ್ಮಾಣಿ ಇತ್ಯೇತತ್** ಎಂದು ಶ್ರೀಶಂಕರರ ಮಾತು. ಎಲ್ಲಾ ಧರ್ಮಗಳನ್ನೂ ಬಿಟ್ಟು ಎಂದರೆ ಎಲ್ಲಾ ಶ್ರೌತಸ್ಮಾರ್ತಕರ್ಮಗಳನ್ನೂ ಸಂನ್ಯಾಸಮಾಡಿ ಎಂದರ್ಥ. ಕರ್ಮಗಳೆಂದರೇ ಬಂಧಕ. ಅವು ಧರ್ಮವಾಗಿರಲಿ, ಅಧರ್ಮವಾಗಿರಲಿ, ಎರಡೂ ಬಂಧಕವಾದ್ದರಿಂದ, ಅವೆರಡನ್ನೂ ಮುಮುಕ್ಷುಸಂನ್ಯಾಸಿಗಳು ಬಿಟ್ಟುಬಿಡಬೇಕು. ಸರ್ವಕರ್ಮಗಳನ್ನೂ ಸಂನ್ಯಾಸಮಾಡಿಬಿಡು ಎಂದರ್ಥ.

ಸರಿ, ಕರ್ಮಗಳನ್ನೆಲ್ಲ ಬಿಟ್ಟುಬಿಟ್ಟ ಮಾತ್ರಕ್ಕೆ ಅವನು ಬ್ರಹ್ಮಜ್ಞಾನಿಯಲ್ಲ. ಹಾಗಾಗಿಬಿಟ್ಟರೆ, ಕರ್ಮಭ್ರಷ್ಟರೆಲ್ಲರೂ ಬ್ರಹ್ಮನಿಷ್ಠರೇ ಎಂದಾಗಿಬಿಟ್ಟೀತು! ಅದು ಸರಿಯಲ್ಲ ; ಆದ್ದರಿಂದ ಕರ್ಮಗಳನ್ನೆಲ್ಲ ಬಿಟ್ಟು, **'ಮಾಮೇಕಂ ಶರಣಂ ವ್ರಜ'** ಎಂದಿದ್ದಾನೆ ಕೃಷ್ಣ! **ಮಾಮೇಕಂ ಸರ್ವಾತ್ಮಾನಂ ಸಮಂ ಸರ್ವಭೂತಸ್ಥಮ್ ಈಶ್ವರಮ್ ಅಚ್ಯುತಂ ಗರ್ಭಜನ್ಮಜರಾಮರಣವರ್ಜಿತಮ್, ಅಹಮೇವ ಇತ್ಯೇವಮ್ ಏಕಂ ಶರಣಂ ವ್ರಜ, ನ ಮತ್ತೋ ಅನ್ಯದಸ್ತೀತ್ಯವಧಾರಯ ಇತ್ಯರ್ಥಃ** ಎಂದು ಶಾಂಕರಭಾಷ್ಯ. ನನ್ನನ್ನೇ ಶರಣುಹೊಂದು ಎಂದರೆ, ಸಮಾತ್ಮನೂ ಸಮನೂ ಸರ್ವಭೂತಸ್ಥನೂ ಈಶ್ವರನೂ ಅಚ್ಯುತನೂ ಗರ್ಭಜನ್ಮಜರಾಮರಣವರ್ಜಿತನೂ ಆದ ಭಗವಂತನೇ ತಾನೆಂದೂ ತನಗಿಂತ ಭಿನ್ನವಾದದ್ದು ಏನೇನೂ ಇಲ್ಲವೆಂದು ನಿಶ್ಚಯಮಾಡಿಕೋ ಎಂದರ್ಥ.

ಇಂಥ ನಿನ್ನನ್ನು ನಾನು ಬಂಧನಗಳಿಂದ ಬಿಡುಗಡೆಮಾಡಿಸುತ್ತೇನೆ. ಅಂದರೆ ನನ್ನನ್ನೇ ಶರಣುಹೊಂದಿದ ನಿನಗೆ ನಾನು ನಿನ್ನ ನಿಜಸ್ವರೂಪವನ್ನು ತೋರಿಸುತ್ತೇನೆ. 'ನೀನು ಬ್ರಹ್ಮವೇ', 'ತತ್ತ್ವಮಸಿ' ಎಂಬುದನ್ನು ನೀನೇ ಅರ್ಥಮಾಡಿಕೊಳ್ಳುವಂತೆ ನಿನ್ನ ಅಂತಃಕರಣದಲ್ಲಿ ವಿವೇಕಜ್ಞಾನವನ್ನು ಉಂಟುಮಾಡುತ್ತೇನೆ ಎಂದರ್ಥ.

ಕೃಷ್ಣನನ್ನು 'ಭಕ್ತಪಾಲಕ' ಎಂದು ತಿಳಿಯಬೇಕು

40. ತದ್ಧಾಮ ಪರಮಂ ಮಮ; ಗೀತಾ ೧೫-೬

ನ ತದ್ ಭಾಸಯತೇ ಸೂರ್ಯೋ ನ ಶಶಾಂಕೋ ನ ಪಾವಕಃ।
ಯದ್ ಗತ್ವಾ ನ ನಿವರ್ತಂತೇ ತದ್ಧಾಮ ಪರಮಂ ಮಮ॥ ೧೫-೬

ಯಾವ ವೈಷ್ಣವಪದವನ್ನು ಸೂರ್ಯನಾಗಲೀ ಚಂದ್ರನಾಗಲೀ ಅಗ್ನಿಯಾಗಲೀ ಬೆಳಗಲಾರರೋ, ಯಾವುದನ್ನು ಹೊಂದಿದರೆ ಅಲ್ಲಿಂದ ತಿರುಗಿ ಬರುವುದಿಲ್ಲವೋ ಆ ಮೋಕ್ಷಪದವೇ ನನ್ನ ಪರಮಧಾಮವು.

ವೇದಾಂತಗಳಲ್ಲಿ ಬ್ರಹ್ಮಜ್ಞಾನಿಗಳಿಗೆ ಪುನರ್ಜನ್ಮವಿಲ್ಲವೆಂದು ಹೇಳಿದೆ, ಬ್ರಹ್ಮ ಜ್ಞಾನಿಗಳು ಮೋಕ್ಷಪದವಿಯನ್ನು ಹೊಂದಿ ಪರಬ್ರಹ್ಮದಲ್ಲಿ ಸೇರಿಕೊಂಡು ಒಂದಾಗಿಬಿಡುತ್ತಾರೆ ಎಂದೂ ಹೇಳಿದೆಯಲ್ಲ, ಆ ಮೋಕ್ಷಪದವಿಯೇ ನಾನು ಎಂದು **ಕೃಷ್ಣಕಂಡ ಕೃಷ್ಣನೇ** ಬಾಯಿಬಿಟ್ಟು ಇಲ್ಲಿ ಹೇಳಿರುತ್ತಾನೆ. **ಕೃಷ್ಣ ಎಂದರೆ ವೈಷ್ಣವಪದವೇ ಎಂದು ಕೃಷ್ಣನೇ ಇಲ್ಲಿ ಬಾಯಿಬಿಟ್ಟು ಹೇಳಿರುತ್ತಾನೆ.**

ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ
ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ?
ತಮೇವ ಭಾಂತಮನುಭಾತಿ ಸರ್ವಂ
ತಸ್ಯ ಭಾಸಾ ಸರ್ವಮಿದಂ ವಿಭಾತಿ॥

ಎಂದು ಶ್ರುತಿಗಳು ಯಾವ ಸ್ವಯಂಜ್ಯೋತಿಃಸ್ವರೂಪವಾದ ಪರಬ್ರಹ್ಮವನ್ನು ತಿಳಿಸುತ್ತಿವೆಯೋ, ಅರ್ಜುನನೇ, ಆ ಪರಬ್ರಹ್ಮವೇ ನಾನು, ಆ ಪರಮಪದವೇ ನಾನು ಎಂದು ತಿಳಿ.

ಜ್ಯೋತಿಷಾಮಪಿ ತತ್ ಜ್ಯೋತಿಃ ತಮಸಃ ಪರಮುಚ್ಯತೇ, ಅರ್ಜುನನೇ ನಾನೇ ಜ್ಯೋತಿಗಳಿಗೆಲ್ಲ ಪರಂಜ್ಯೋತಿಯಾಗಿದ್ದೇನೆ. ನಾನು ತಮಸ್ಸಿಗಿಂತ ಆಚೆ ಇದ್ದೇನೆ. ಹೀಗೆಂದು ಹೇಳಿದವನು **"ಕೃಷ್ಣಕಂಡ ಕೃಷ್ಣ"** ಎಂಬುದು ನೆನಪಿರಲಿ.

ಸೂರ್ಯ, ಚಂದ್ರ, ನಕ್ಷತ್ರ, ಗ್ರಹ, ತಾರಾದಿಗಳು ಯಾವುವೂ ನನ್ನನ್ನು ವಿಷಯೀಕರಿಸಿಕೊಂಡು ಬೆಳಗಲಾರವು. ಅಷ್ಟೇ ಅಲ್ಲ, ನನ್ನ ಸಂನಿಧಾನದಲ್ಲೇ, ನನ್ನ ಬೆಳಕಿನಿಂದಲೇ ಈ ಬೆಳಕುಗಳೆಲ್ಲವೂ ಕೆಲಸಮಾಡುತ್ತಿವೆ. ವಾಗಾದಿ ಇಂದ್ರಿಯಗಳೂ ನನ್ನನ್ನು ಪ್ರಕಾಶಿಸಲಾರವು. ನನ್ನಿಂದಲೇ ಇಂದ್ರಿಯ ಮನೋಬುದ್ಧಿಪ್ರಾಣಗಳು ತಮ್ಮ ತಮ್ಮ ಕೆಲಸಮಾಡುತ್ತಿವೆ ಎಂದು ತಿಳಿ. ನನ್ನನ್ನು ಹೊಂದಿದವರಿಗೆ ಪುನರ್ಜನ್ಮವಿಲ್ಲ. ಇದು **ಕೃಷ್ಣಕಂಡ ಕೃಷ್ಣನ** ಸಂದೇಶ!

ಕೃಷ್ಣನನ್ನು ಪರಮಪರಂಜ್ಯೋತಿಯೆಂದು ತಿಳಿಯಬೇಕು

ವಿದ್ವಾನ್ ಡಾ॥ ಕೆ. ಜಿ. ಸುಬ್ರಾಯಶರ್ಮಾರವರ ವೇದಾಂತ ಗ್ರಂಥಗಳು

1. "ವಿವೇಕಭಾಸ್ಕರ"
2. "ಶಾಂಕರ ಸಂವತ್ಸರ"
3. "ವೇದಾಂತ ಸಂವತ್ಸರ"
4. "ಗೀತಾ ಸಂವತ್ಸರ"
5. "ಸುಭಾಷಿತ ಸಂವತ್ಸರ"
6. "ಪ್ರಬೋಧ ಚಿಂತಾಮಣಿ"
7. "ಜ್ಞಾನಾಮೃತಬಿಂದು"
8. "ಗೀತೋಪದೇಶಾಮೃತ"
9. "ಜರ್ಮನಿಯಲ್ಲಿ ಶರ್ಮರು"
10. ವಿದ್ವಾನ್ ಕೆ. ಜಿ. ಸುಬ್ರಾಯಶರ್ಮಾ
11. "ವ್ಯಾಸ ಪೂರ್ಣಿಮಾ"
12. "ಕೇನ ರಸಾಯನ"
13. "ಜೀವನ್ಮುಕ್ತ ಚತುಷ್ಟಯ"
14. "ಶಿವರಾತ್ರಿ"
15. "ನವೋಪನಿಷದಃ"
16. "ಶಾಂತಿಮಂತ್ರಗಳು"
17. "ವೇದಮಹಿಮೆ"
18. "50 Reflections on Morals"
19. "ಪೀಯೂಷ ಧಾರಾ"
20. "ಆದಿಗುರು ಶಂಕರ"
21. "48 'ಅಷ್ಟಕ' ಸ್ತೋತ್ರಗಳು"
22. "ಕನ್ನಡ ಶಂಕರ"
23. "ಆರಾಧನ ಸಂದೇಶ"
24. "ಸರಳ ರಮಣ"
25. "ನ ಹಿ ಜ್ಞಾನೇನ ಸದೃಶಂ"
26. "ಉಪದೇಶಸಿಂಚನಂ"
27. "ಸುದಿನಂ"
28. "ಶಂಕರಜಯಂತೀ"
29. "ಬಾಲರಾಮಾಯಣಂ"
30. "ಸಂದೇಶಾಮೃತ"
31. "ವಿಭೂತಿರೂಪಿಕೃಷ್ಣ"
32. "ಅಧ್ಯಾರೋಪಾಪವಾದ"
33. "ಶಂಕರ Ph.D."
34. "ಗೌಡಪಾದಾಮೃತ"
35. "ವೇದಾಂತಮಕರಂದ"
36. "ಶ್ರೀರಮಣಸುಧಾ"
37. "ಧರ್ಮ-ವೇದ-ಬ್ರಹ್ಮ"
38. "ಸದ್ಗುರೂಪಾಸನಂ"
39. "ಜನ್ಮಾಂತರ"
40. "ಗೀತಾಕಲ್ಪತರು"
41. "ಮಹರ್ಷಿಗಳು"
42. "ಉಪನಯನಂ"
43. "ಔಪನಿಷದ ಪುರುಷ"
44. "ಸಂಸ್ಕೃತ ವೈಭವ"
45. "ತೈತ್ತಿರೀಯದ ತಿರುಳು"
46. "ರಾಮಾಂಜನೇಯ"
47. ವೇದಾಂತದಲ್ಲಿನ ಪದಗಳೂ ಅರ್ಥಗಳೂ
48. "ತತ್ತ್ವಮಸಿ"
49. "ಬ್ರಹ್ಮಜ್ಞಾನಫಲಂ"
50. "ಜ್ಞಾನಸಾಧನಗಳು"
51. "108 'ಅಷ್ಟಕ' ಸ್ತೋತ್ರಗಳು"
52. "ಚತುಷ್ಟಯ ಸಂಗ್ರಹ"
53. "ಸಂಗ್ರಾಹಕ ಶ್ಲೋಕಗಳು"
54. "ಶ್ರೀಶ್ರೀಗಳ ಸಂಶೋಧನೆ"
55. "ಮಹರ್ಷಿಗಳ 'ಅಷ್ಟಕ' ಸ್ತೋತ್ರಗಳು"
56. "ಶಾಂಕರ ಮಕರಂದ"
57. "ನೀತಿ ಶ್ಲೋಕಗಳು"
58. "ಕೈವಲ್ಯೋಪನಿಷತ್"
59. "ವಿವೇಕ ರತ್ನ"
60. "ಗುರುಶಿಷ್ಯ ಸಂಬಂಧ"
61. "ಲಕ್ಷಣ ಶ್ಲೋಕಗಳು"
62. "ಶ್ರೀರಮಣರ ಉಪದೇಶಸಾರ"
63. "ಅಜ್ಞಾನ ವಿಮುಕ್ತಿ"
64. "ವಂದೇ ಶಂಕರಸದ್ಗುರುಮ್"
65. "ಚತುಸ್ಸೂತ್ರೀಭಾಷ್ಯಸಾರ"
66. ಶ್ರೀರಮಣಮಹರ್ಷಿಗಳ "ಸದ್ದರ್ಶನಮ್"
67. "ತಸ್ಮೈ ಶ್ರೀಗುರವೇ ನಮಃ"
68. "ಗೀತೋಪನಿಷತ್"
69. "ಪ್ರಸ್ಥಾನತ್ರಯಂ"
70. "ಪ್ರಥಮ ಪುಸ್ತಕಂ"

71. "ನನ್ನ ಗುರುಕುಲವಾಸ"
72. "ವೇದಾಂಗಗಳು"
73. "ಗೀತಾಜಯಂತೀ"
74. "ಶಂಕರಹೃದಯಂ"
75. "ಮಕ್ಕಳಿಗಾಗಿ ಸ್ತೋತ್ರಗಳು"
76. "ಗೀತೆಯಲ್ಲಿ ಗುಣವಿಮರ್ಶೆ"
77. "ಸದ್ಗುರುಭಾಸ್ಕರ"
78. "ಶಾಂಕರಭಾಷ್ಯಾಮೃತಂ"
79. "ಶ್ರೀಸುರೇಶ್ವರರ ಸಿಂಹಗರ್ಜನೆ"
80. "ಉಪಮಾ ಕಾಳಿದಾಸಸ್ಯ"
81. "ಪ್ರಣವೋಪಾಸನಂ"
82. "ಕವಿಮುನಿ ಕಂಡ ಶಿವ"
83. "ಬ್ರಾಹ್ಮೀಸ್ಥಿತಿಗೆ 40 ಸೋಪಾನಗಳು"
84. "ಶಾಂಕರಬೋಧಾಮೃತಂ"
85. "ಪ್ರಬೋಧ ಶ್ಲೋಕಗಳು"
86. "ವೇದಾಂತಡಿಂಡಿಮಸಾರ"
87. "ಶತಕತ್ರಯಸಾರ"
88. "ಪಂಚಕ ಪಂಚಕಂ"
89. "ನೈಷ್ಕರ್ಮ್ಯಸಿದ್ಧಿಸಾರ"
90. "ಈಶಾವಾಸ್ಯಮಿದಂ ಸರ್ವಂ"
91. "ಮಾತೃದೇವೋ ಭವ"
92. "ಸುರೇಶ್ವರ ಸಂವತ್ಸರ"
93. "70ರ ವೀರವೇದಾಂತಿ"
94. "ತುರೀಯಂ ಪದಂ"
95. "ಬ್ರಹ್ಮಚರ್ಯವ್ರತಂ"
96. "ಗೀತೆಯಲ್ಲಿ ಸಾಂಖ್ಯಯೋಗ"
97. "ಶ್ರವಣದ ಮಹತ್ತ್ವ"
98. "ವಿದುರನೀತಿಸಾರ"
99. "ದಾನದ ಮಹಿಮೆ"
100. "ಅದ್ಭುತ ಶಂಕರ"
101. "ಸೂರ್ಯೋಪಾಸನಂ"
102. "ಕೃಷ್ಣಂ ವಂದೇ ಜಗದ್ಗುರುಂ"
103. "ಗುರುಸ್ತುತಿ ಸಂವತ್ಸರ"
104. "ಮಾರ್ಸೋತ್ಸವಗಳು"
105. "ವೈರಾಗ್ಯಭಾಗ್ಯ"
106. "ವೇದಾಂತಗಳೂ ವೇದಾಂಗಗಳೂ"
107. "ದರ್ಶನಪರಿಚಯ"
108. "ವಾಕ್‌ಸಂಪತ್ತು"
109. "ವೇದಾಂತದಲ್ಲಿ ಧೀರರು"
110. "ವೇದಾಂತ ಸುಭಾಷಿತಗಳು"
111. "ಗೀತಾ ಸುಭಾಷಿತಗಳು"
112. "ಶಾರ್ದೂಲವಿಕ್ರೀಡಿತಂ"
113. "ವಜ್ರವೇದಾಂತಿ ಸುಬ್ರಾಯಶರ್ಮಾ"
114. "ದಶಾವತಾರಗಳು"
115. "ಶ್ರೀಶಂಕರರಿಂದ ಹೋಳಿಗೆ ಊಟ"
116. "ವೀರಶಂಕರರ ಧೀರಸಂದೇಶಗಳು"
117. " 'ಸಾಹಸ್ರೀ' ಸಾರ"
118. "ಸ್ಥಿತಪ್ರಜ್ಞನಿವನು"
119. "ಕೃಷ್ಣಂ ವಂದೇ ಜಗತ್‌ಪ್ರಿಯಂ"
120. "ಬ್ರಹ್ಮವು ನಮ್ಮೊಳಗೇ"
121. "ಕೃಷ್ಣಕಂಡ ಕೃಷ್ಣ"
122. "ತಪಃಶಕ್ತಿ"
123. "ವಿದ್ಯಾರ್ಥಿಗಳಿಗೆ...."
124. "ಭಕ್ತಿಯಿಂದ ಮುಕ್ತಿ"

ವಿದ್ವಾನ್ ಡಾ॥ ಕೆ. ಜಿ. ಸುಬ್ರಾಯಶರ್ಮಾರವರು ಮಾಡಿರುವ
ವೇದಾಂತ ಪ್ರವಚನಗಳು M.P. 3 ಸಿ. ಡಿ. ಗಳಲ್ಲಿ ಲಭ್ಯವಿವೆ
ಗ್ರಂಥಗಳಿಗೂ, ಪ್ರವಚನಗಳ M.P. 3 ಸಿ. ಡಿ. ಗಳಿಗೂ ವಿಚಾರಿಸಿರಿ:

Vedanta Kesari, Mahaamahopaadhyaaya, Vidwan
Dr. K. G. SUBRAYA SHARMA, M.A., D.Litt.
127, ''Seetha-Preethi'', Balaji Nagar, ICICI Bank Cross Rd.,
Uttarahalli Main Rd. P. O. Subrahmanyapura, Bengaluru - 560 061
Phone: 080-2639 6786 ; Mobile: 98862 81622
e-mail: kgssharma@gmail.com, website: kgssharma.in